6. ನಿಯಮ 69ರ ಮೇರೆಗೆ

ರಾಜ್ಯದಲ್ಲಿ ರೈತರು ಬೆಳೆದಿರುವ ಮೆಕ್ಕೆಜೋಳ, ಭತ್ತ, ಆಲೂಗಡ್ಡೆ, ಎಣ್ಣೆಕಾಳುಗಳು ತೊಗರಿ ಹಾಗೂ ತೆಂಗಿನ ಬೆಲೆ ಕುಸಿದಿರುವುದು. - (ಮುಂದುವರಿದ ಚರ್ಚೆ)

+ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ರೈತ ಬೆಳೆದಂಥ ಎಲ್ಲಾ ಬೆಳೆಗಳ ಬೆಲೆ ಕುಸಿದಿರುವಂಥಾದ್ದು, ಈ ವಿಚಾರವಾಗಿ ಈಗಾಗಲೇ ಸಾಕಷ್ಟು ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಸಾಮಾನ್ಯವಾಗಿ ರೈತವರ್ಗ ಅಸಂಘಟಿತ ವರ್ಗ. ಇವತ್ತು ಸರ್ಕಾರಿ ನೌಕರರಿಗೆ ಒಂದು ನಿರ್ದಿಷ್ಟವಾದ ಸಂಬಳ ಸಾರಿಗೆ ಇರುವುದರಿಂದ, ಅವರಿಗೆ ಇದರ ಬಗ್ಗೆ ಚಿಂತೆ ಇರುವುದಿಲ್ಲ. ಅದೇ ರೀತಿ ಕಾರ್ಮಿಕ ವರ್ಗ ಕೂಡ ಸಂಘಟಿತರಾಗಿರುತ್ತಾರೆ. ಅವರ ಹಕ್ಕುಗಳು ಮತ್ತು ಬೇಡಿಕೆಗಳ ಬಗ್ಗೆ ಅವರು ಯಾರ ಗಮನವನ್ನಾದರೂ ಸೆಳೆದು ತಮ್ಮ ಕೆಲಸವನ್ನು ಮಾಡಿಕೊಳ್ಳುವಂಥ ಒಂದು ಅವಕಾಶ ಇದೆ. ಅದೇರೀತಿ ನಮ್ಮ ಕೂಲಿಕಾರ್ಮಿಕರೂ ಕೂಡ ನೆಮ್ಮದಿಯಾಗಿ ಅವರ ದೈನಂದಿನ ಜೀವನವನ್ನು ಸಾಗಿಸತಕ್ಕ ಪರಿಸ್ಥಿತಿ ಇದೆ. ಆದರೆ, ಈ ರೈತಾಪಿ ವರ್ಗದವರ ಕಷ್ಟಸುಖವನ್ನು ಕೇಳತಕ್ಕ ಪರಿಸ್ಥಿತಿ ಇವತ್ತು ಇಲ್ಲದಂತಾಗಿರುವುದು ಬಹಳ ವಿಷಾದವಾಗಿರತಕ್ಕ ವಿಚಾರ. ಇವತ್ತು ಯಾವುದೇ ಬೆಳೆ ಇರಬಹುದು. ಅದು ತೋಟಗಾರಿಕೆ ಬೆಳೆ ಇರಬಹುದು ಅಥವಾ ವ್ಯವಸಾಯದ ಇನ್ಯಾವುದೇ ಬೆಳೆಗಳು ಇರಬಹುದು. ಇವತ್ತು ಒಂದು ಎಕರೆಯಲ್ಲಿ ಬೆಳೆಯನ್ನು ಬೆಳೆಯುವುದಕ್ಕೆ ತಗಲತಕ್ಕ ವೆಚ್ಚ, ಬರತಕ್ಕ ಉತ್ಪಾದನೆಯನ್ನು ಮಾರಾಟ ಮಾಡಿದರೂ ಕೂಡ, ಅಷ್ಟು ಹಣವನ್ನು ಪಡೆಯುವುದಕ್ಕಾಗದೇ ಇರತಕ್ಕ ಪರಿಸ್ಥಿತಿಯನ್ನು ರೈತ ಎದುರಿಸುತ್ತಿದ್ದಾನೆ. ಹೀಗಾಗಿ ರೈತ ಇವತ್ತು ಎಷ್ಟೇ ಜಮೀನನ್ನು ಹೊಂದಿದ್ದರೂ ಕೂಡ ಪ್ರಯೋಜನವಾಗುತ್ತಿಲ್ಲ. ಬರೀ ತೋರಿಕೆಗೆ ಮಾತ್ರ ಮತ್ತು ನಮ್ಮದು ಇಷ್ಟು ಎಕರೆ ಜಮೀನು ಇದೆಯೆಂದು ನೇಮ್ ಬೋರ್ಡ್ ಹಾಕಿಕೊಂಡು ಜಮೀನ್ದಾರ ಎಂದು ಹೇಳಿಕೊಳ್ಳುವುದಕ್ಕಷ್ಟೆ ಲಾಯಕ್ಕಿದೆಯೇ ಹೊರತು ಅವನು ಇವತ್ತು ಯಾವುದೇ ರೀತಿಯ ಲಾಭವನ್ನು ಕಾಣುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅವನು ಜೀವನವನ್ನು ಸಾಗಿಸುವುದಕ್ಕೂ ಕೂಡ ಬಹಳ ತೊಂದರೆಯಾಗಿದೆ. ಅದರಲ್ಲೂ ವಿಶೇಷವಾಗಿ ನಮ್ಮ ಭಾಗದಲ್ಲಿ ಒಂದಷ್ಟು ತೆಂಗಿನ ಮರ ಇದ್ದರೆ, ಅವರನ್ನು ಸಾಹುಕಾರರು ಎಂದು ಕರೆಯುವುದು ವಾಡಿಕೆ. ಅಂದರೆ, ತೆಂಗಿನ ತೋಟವನ್ನು ಯಾರಾದರೂ ಇಟ್ಟಿದ್ದಾರೆಂದರೆ, ಅವರಿಗೆ ಬಹಳ ಗೌರವ ಇರುವಂಥ ಒಂದು ಕಾಲ ಇತ್ತು. ಆದರೆ, ಇವತ್ತು ತೆಂಗಿನ ತೋಟವನ್ನು ಹೊಂದಿರುವವರು ಮನೆಯಿಂದ ಹೊರಗಡೆ ಬರುವುದಕ್ಕಾಗದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅವರ ಜೀವನ ಶೈಲಿಯೇ ಆ ಮಟ್ಟಕ್ಕೆ ಬಂದುಬಿಟ್ಟಿದೆ. ಇವತ್ತಿನ ಪರಿಸ್ಥಿತಿಯೊಳಗೆ ಅವನಿಗೆ ಯಾರೂ ಸಾಲ ಕೊಡುವಂಥ ಪರಿಸ್ಥಿತಿ ಇಲ್ಲ. ಯಾರೂ ಅವನ ಕಷ್ಟವನ್ನು ಕೇಳುವ ಹಾಗೆ ಇಲ್ಲ. ಹೀಗಾಗಿ ಬಹಳ

ಸಂಕಷ್ಟದಲ್ಲಿ ರೈತರು ಅದರಲ್ಲಿಯೂ ವಿಶೇಷವಾಗಿ ತೆಂಗಿನ ಬೆಳೆಗಾರರು ಇದ್ದಾರೆಂಬುದನ್ನು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಈ ತೆಂಗಿನಕಾಯಿ ಮತ್ತು ಅದರ ಉತ್ಪನ್ನಗಳಿಂದ, ರಫ್ತು ಮಾಡುವ ಮುಖಾಂತರ ಸುಮಾರು 12 ಕೋಟಿ ರೂಪಾಯಿ ಆದಾಯವನ್ನು ಗಳಿಸುತ್ತಾ ಇದ್ದೇವೆ. ಆದರೆ, ಇವತ್ತು ಅದಕ್ಕೆ ಮಾರುಕಟ್ಟೆಯೇ ಇಲ್ಲದೆ ಯಾವುದೇ ರೀತಿಯ ಲಾಭವೂ ಇಲ್ಲದಿರತಕ್ಕ ಪರಿಸ್ಥಿತಿ ಬಂದಿದೆ. ಮತ್ತು ಬೆಲೆಗಳು ತೀವ್ರವಾಗಿ ಕುಸಿಯುತ್ತಾ ಇರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಇವತ್ತು ತೆಂಗಿನ ಬೆಳೆ ವರ್ಷದಿಂದ ವರ್ಷಕ್ಕೆ ವಿಸ್ತೀರ್ಣ ಜಾಸ್ತಿಯಾಗುತ್ತಿದೆ. ಆದರೆ, ಅದರ ಉತ್ಪಾದನೆ ಅಷ್ಟೇ ಪ್ರಮಾಣದಲ್ಲಿ, ಮಾರಾಟ ಮಾಡತಕ್ಕ ವ್ಯವಸ್ಥೆ ಸರ್ಕಾರ ಹಮ್ಮಿಕೊಳ್ಳದೇ ಇರುವುದರಿಂದ ಈ ಬೆಲೆ ಕುಸಿಯುವುದಕ್ಕೆ ಕಾರಣವಾಗಿಯೆಂದು ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಕಳೆದ 40 ವರ್ಷಗಳಿಂದ ಸುಮಾರು ಶೇಕಡ ಮುನ್ನೂರರಷ್ಟು ತೆಂಗಿನ ಉತ್ಪಾದನೆ ಹೆಚ್ಚಾಗಿದೆ. ಇಷ್ಟೊಂದು ಉತ್ಪಾದನೆ ಹೆಚ್ಚಾದ ಸಂದರ್ಭದಲ್ಲಿ ಅದರ ಬಳಕೆಯನ್ನು ಯಾವರೀತಿ ಅಭಿವೃದ್ಧಿಪಡಿಸಬೇಕು ಮತ್ತು ಮಾರಾಟಕ್ಕೆ ಮಾರುಕಟ್ಟೆಯನ್ನು ಯಾವರೀತಿ ವ್ಯವಸ್ಥೆ ಮಾಡಬೇಕು ಎನ್ನುವ ವಿಚಾರದಲ್ಲಿ ಸರ್ಕಾರ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಇರುವುದರಿಂದ ರೈತ ಇವತ್ತು ಇಷ್ಟೊಂದು ಸಂಕಷ್ಟಕ್ಕೆ ಸಿಕ್ಕಲು ಕಾರಣವಾಗಿದೆ. ಆರ್ಥಿಕ ಉದಾರೀಕರಣದ ಹಿನ್ನೆಲೆಯಲ್ಲಿ ಸರ್ಕಾರ ಮುಕ್ತ ಆಮದು ನೀತಿಯನ್ನು ಜಾರಿಗೆ ತಂದಿರುವುದೂ ಕೂಡ ತೆಂಗಿನ ಮಾರುಕಟ್ಟೆಗೆ ದೊಡ್ಡ ಹೊಡೆತ ಬಿದ್ದಿದೆ. ತೆಂಗಿನ ಕಾಯಿಗಳಿಂದ ಮಾಡತಕ್ಕ ಪ್ರಾಡಕ್ಟ್ಸ್, ತೆಂಗಿನ ಎಣ್ಣೆ ಅಥವಾ ಇನ್ನಾವುದೇ ಪದಾರ್ಥಗಳು ಸ್ಪರ್ಧೆಯಲ್ಲಿ ಇಲ್ಲ. ಬೇರೆ ರೀತಿಯ ಎಣ್ಣೆಗಳು ಇವತ್ತು ಸ್ಪರ್ಧೆಯಲ್ಲಿ ಇವೆ. ಮತ್ತು ಅವುಗಳಿಗೆ ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಕೊಡುತ್ತಿರುವುದರಿಂದ ಈ ತೆಂಗಿನ ಪ್ರಾಡಕ್ಟ್ಸ್‌ಗಳು ಇವತ್ತು ಯಾರೂ ಕೇಳುವವರು ಇಲ್ಲದಂಥ ಪರಿಸ್ಥಿತಿಯಾಗಿದೆ. ಹೀಗಾಗಿ ಒಂದು ತೆಂಗಿನ ಮರ ಬೆಳೆಯಬೇಕಾದರೆ ಐದು ವರ್ಷ, ಆ ಗಿಡವನ್ನು ಸಾಕಿ, ಪೋಷಿಸಿ ಅದರಿಂದ ಬರತಕ್ಕ ಉತ್ಪತ್ತಿಯನ್ನು ಇವತ್ತು ರೈತ ಹೊಂದುವುದಕ್ಕೆ ಸಾಧ್ಯವಾಗದಿರತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಈ ತೆಂಗಿನ ಬೆಳೆಗಳಿಗೆ ಸರ್ಕಾರ ಉತ್ತೇಜನ ಕೊಟ್ಟು, ಮಾರುಕಟ್ಟೆ ಮತ್ತು ಬಳಕೆಗೆ ಸರಿಯಾದಂಥ ವ್ಯವಸ್ಥೆ ಮಾಡದೇ ಇರುವುದು ಇಷ್ಟೊಂದು ಸಂಕಷ್ಟಕ್ಕೆ ಇವತ್ತು ರೈತ ಗುರಿಯಾಗುವುದಕ್ಕೆ ಸಾಧ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಕಡೂರು ಕೃಷ್ಣಮೂರ್ತಿಯವರು ಮಾತನಾಡುತ್ತಾ ಹೇಳಿದರು, ತೆಂಗಿನ ಮರಗಳಿಗೆ ಕಪ್ಪು ತಲೆ ಹುಳ ರೋಗದಿಂದ ಸುಧಾರಿಸಿಕೊಳ್ಳುವಷ್ಟರಲ್ಲಿ ನುಸಿ ರೋಗ ಬಂತು, ಇದರಿಂದ ತೆಂಗು ಬೆಳೆ ಸಾಕಷ್ಟು ಹಾನಿಯನ್ನು ಅನುಭವಿಸಬೇಕಾಯಿತು ಅಂತ ಹೇಳಿ. ಇದರ ಬಗ್ಗೆ ಬಹಳ ತೀವ್ರವಾಗಿ ಚರ್ಚೆ ಇಲ್ಲಿ ನಡೆದ ಮೇಲೆ ಸಬ್ಸಿಡಿ ದರದಲ್ಲಿ ಕ್ರಿಮಿಕೀಟಕ ನಾಶ ಮಾಡುವಂತಹ ಒಂದು ಔಷಧಿಯನ್ನು ಕೊಡುವಂತಹ ವ್ಯವಸ್ಥೆಯನ್ನು

ಸರ್ಕಾರ ಮಾಡಿತು. ಮಾನೋಕ್ರಾಟ್ ಔಷಧಿಯನ್ನು ನಾವು ಏನು ಕೊಡುತ್ತಿದ್ದೆವೋ ಅದು ಈಗ ಅಷ್ಟು ಪರಿಣಾಮಕಾರಿಯಾಗಿ ರೋಗ ನಿಯಂತ್ರಣ ಮಾಡುವುದರಲ್ಲಿ ಸಫಲವಾಗಿಲ್ಲ, ಬೇರೆ ಯಾವುದಾದರೂ ಔಷಧಿಯನ್ನು ಇಲಾಖೆ ಮೂಲಕ ಕೊಟ್ಟು ಈ ರೋಗವನ್ನು ನಿಯಂತ್ರಣ ಮಾಡಬೇಕು. ಮಾನೋಕ್ರಾಟ್‌ಸ್ಪ್ರೇ ಮೊದಲು ಅಷ್ಟು ಮಾಡುವಾಗ ಸ್ವಲ್ಪ ನಿಯಂತ್ರಣವಾಗಿತ್ತು. ಆದರೆ ಪೂರ್ಣವಾಗಿ ಹೋಗುವಂತಹ ಸೂಚನೆ ಕಾಣುತ್ತಿಲ್ಲ. ನಮ್ಮ ಭಾಗದಲ್ಲಿ ಮತ್ತೆ ಯಥೇಚ್ಛವಾಗಿ ಈ ರೋಗ ಬರುತ್ತಿದೆ. ಈಗಾಗಲೇ ಬೆಲೆ ಕುಸಿತದಿಂದ ನಾವು ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ, ಇದರ ಜೊತೆಗೆ ಈ ರೋಗ ಏನಾದರೂ ಉಲ್ಬಣಗೊಂಡರೆ ರೈತ ವಿಷ ತೆಗೆದುಕೊಳ್ಳುವಂತಹ ಪರಿಸ್ಥಿತಿ ಉಂಟಾಗುತ್ತದೆ. ನಮ್ಮ ಚಾಮರಾಜನಗರದ ಭಾಗದಲ್ಲಿ ರಾಜಕುಮಾರ್ ಅಪಹರಣವಾದಾಗ ರೈತರು ಬೆಳೆದಂತಹ ಬೆಳೆಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲ. ನಾವು ಏನೇ ಬೆಳೆ ಬೆಳೆದು ಅದನ್ನು ಮಾರಾಟ ಮಾಡಬೇಕಾದರೆ ತಮಿಳುನಾಡಿಗೆ ಹೋಗಿ ಮಾರಾಟ ಮಾಡುವಂತಹ ಪರಿಸ್ಥಿತಿ ಇರುವುದರಿಂದ ಕಳೆದ 2-3 ತಿಂಗಳುಗಳಿಂದ ರೈತ ಬೆಳೆದ ಬೆಳೆ ಕೊಳೆತು ಹೋಗಿರುವಂತಹ ಉದಾಹರಣೆಗಳು ಇವೆ. ನಮ್ಮ ಭಾಗಕ್ಕೆ ತಮಿಳುನಾಡಿನಿಂದ ವ್ಯಾಪಾರಸ್ಥರೇ ಬರುತ್ತಿರಲಿಲ್ಲ. ಕಡೆಗೆ ನಾವು ಯಾವ ಮಟ್ಟಕ್ಕೆ ಬಂದಿದ್ದೆವು. ಅಂದರೆ ವ್ಯಾಪಾರ ಮಾಡುವಂತಹ ಗಿರಾಕಿಗಳನ್ನು ಕಳುಹಿಸಿಕೊಡಿ ಅಂತ ಕೇಳುವಮಟ್ಟಕ್ಕೆ ಬಂದಿದ್ದೆವು. ನಮ್ಮ ಭಾಗದಲ್ಲಿ ತೆಂಗಿನಕಾಯಿ ಕೀಳಿಸಿ ಇಟ್ಟುಕೊಂಡಿದ್ದಾರೆ ಯಾರೂ ಕೇಳುವವರೇ ಇಲ್ಲ. ಯಾರು ರೆಗ್ಯುಲರ್ ಆಗಿ ಹಳ್ಳಿಗಾಡಿಗೆ ಬಂದು ವ್ಯಾಪಾರ ಮಾಡುತ್ತಿದ್ದರೋ ಅವರೆಲ್ಲ ಇವತ್ತು ಹೆದರುತ್ತಿದ್ದಾರೆ. ಇವತ್ತು ಇದ್ದ ರೇಟ್ ನಾಳೆ ಇರುವುದಿಲ್ಲ, ನಾವು ತೆಗೆದುಕೊಂಡು ಲಾಸ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ, ಬೇರೆ ವ್ಯಾಪಾರ ಹಿಡಿಯುತ್ತೇವೆಂದು ಹೇಳುತ್ತಿದ್ದಾರೆ. ಹತ್ತಿ ಕೊಂಡುಕೊಳ್ಳುತ್ತಿದ್ದ ವ್ಯಾಪಾರಸ್ಥರು, ಹಾರ್ಟಿಕಲ್ಚರ್ ಬೆಳೆಗಳನ್ನು ಕೊಂಡುಕೊಳ್ಳುತ್ತಿದ್ದ ವ್ಯಾಪಾರಸ್ಥರು ಇವತ್ತು ಅವರ ವ್ಯಾಪಾರವನ್ನು ನಿಲ್ಲಿಸಿರುವುದರಿಂದ ರೈತ ಮಾರುಕಟ್ಟೆಯ ಸೌಲಭ್ಯ ಇಲ್ಲದೆ ತೊಂದರೆ ಪಡುತ್ತಿದ್ದಾರೆ. ನಮ್ಮ ಚಾಮರಾಜನಗರದಲ್ಲಿ ಎ.ಪಿ.ಎಂ.ಸಿ ಮಾರುಕಟ್ಟೆ ಇದೆ, ಅಲ್ಲಿ ಬೆಲ್ಲ ಮಾತ್ರ ಖರೀದಿ ಮಾಡುತ್ತಾರೆ, ಬೇರೆ ಯಾವುದೇ ಪದಾರ್ಥಗಳ ಖರೀದಿ ಮಾಡುತ್ತಿಲ್ಲ. ಹಿಂಗಾಗಿ ನಮ್ಮ ಭಾಗದ ರೈತರು ನಮ್ಮ ಕಷ್ಟವನ್ನು ಯಾರಿಗೆ ಹೇಳಿಕೊಳ್ಳಬೇಕೆನ್ನುವ ರೀತಿ ಆಗಿದೆ. ಈ ವಿಚಾರದಲ್ಲಿ ಸರ್ಕಾರ ಕೂಡಲೇ ಗಮನಹರಿಸಬೇಕು. ಮಹದೇಶ್ವರ ಸಕ್ಕರೆ ಕಾರ್ಖಾನೆಯನ್ನು ನಾಗಾರ್ಜುನ ಕಂಪನಿಯವರಿಗೆ ವಹಿಸಿಕೊಟ್ಟಿದ್ದೀರಿ. ರೈತರು ಒತ್ತಾಯ ಮಾಡಿದಮೇಲೆ ಅವರು ಕಬ್ಬನ್ನು ಅರಿಯುವುದಕ್ಕೆ ಶುರು ಮಾಡಿದರು. ಒಂದೂವರೆ ತಿಂಗಳು ಸುಮಾರು 30-40 ಸಾವಿರ ಟನ್ ಕಬ್ಬನ್ನು ಅರಿದರು. ಅನಂತರ ನಿಲ್ಲಿಸಿದರು. ನಮ್ಮಲ್ಲಿ ಎರಡು ಲಕ್ಷ ಟನ್ ಕಬ್ಬು 13-14 ತಿಂಗಳಾಗಿ ಅರಿಯುವುದಕ್ಕೆ ಸಿದ್ಧವಾಗಿದೆ. ಆದರೆ ಅವರು ಕಾರ್ಖಾನೆಯನ್ನು ನಿಲ್ಲಿಸಿದ್ದಾರೆ. ಇದಕ್ಕೆ ಯಾವುದೇ ಕಾರಣ ಕೊಡುತ್ತಿಲ್ಲ. ಸರ್ಕಾರ ಕೂಡಲೇ ಆ ಕಾರ್ಖಾನೆ ಕಬ್ಬನ್ನು ಅರಿಯುವಂತೆ

ಮಾಡಿ ರೈತರು ಬೆಳೆದಿರುವ ಇದನ್ನು ಖರೀದಿ ಮಾಡುವಂತಹ ವ್ಯವಸ್ಥೆ ಮಾಡಬೇಕು ಇಲ್ಲದಿದ್ದರೆ ಅದಕ್ಕೆ ಪರಿಹಾರವಾಗಿ ಬ್ಯಾಂಕ್ ಸಕ್ಕರೆ ಕಾರ್ಖಾನೆಗೆ ಈ ಕೆಲಸವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಈಗ ಕೇರಳದಲ್ಲಿ ಏನಾಗಿದೆ ಅಂದರೆ ಬಸ್ಸಿಗೆ ಹತ್ತುವವರೆಲ್ಲಾ, ಚೀಲದಲ್ಲಿ ತೆಂಗಿನಕಾಯಿ ತೆಗೆದುಕೊಂಡು ಅದರ ಪ್ರಯಾಣಕ್ಕೆ ದುಡ್ಡು ಕೊಡುವ ಬದಲು ತೆಂಗಿನ ಕಾಯಿ ಕೊಟ್ಟು ಹೋಗುತ್ತಿದ್ದಾರೆ. ಅದೇ ರೀತಿಯಲ್ಲಿ ಅವರು ಏನೇ ಖರೀದಿಮಾಡಬೇಕಾದರೂ ತೆಂಗಿನಕಾಯಿಯನ್ನು ಬಲವಂತವಾಗಿ ಕೊಟ್ಟು ಬೇರೆ ಸಾಮಾನು ಖರೀದಿ ಮಾಡುತ್ತಿದ್ದಾರೆ. ಸರ್ಕಾರ ಬೇರೆ ಬೇರೆ ಬೆಳೆಗೆ ಬೆಂಬಲ ಬೆಲೆಯನ್ನು ನಿಗಧಿ ಮಾಡಿದ್ದೀರಿ, ಈ ತೆಂಗು ಬೆಳೆಗೂ ಕೂಡ ನಿಯಂತ್ರಿತ ಮಾರುಕಟ್ಟೆ ವ್ಯಾಪ್ತಿಗೆ ತಂದು ಕೊಟ್ಟರೆ ಮತ್ತು ತೆಂಗಿನಕಾಯಿಗೆ ವರ್ಷದಲ್ಲಿ ಎರಡು ಸಲ ಬೆಂಬಲ ಬೆಲೆ ನಿಗಧಿ ಮಾಡಿ ರೈತನಿಗೆ ಏನು ಒಂದು ಬೆಳೆ ಬೆಳೆಯುವುದಕ್ಕೆ ಖರ್ಚು ಬರುತ್ತದೆ ಅದನ್ನು ಆಧಾರವನ್ನಾಗಿ ಇಟ್ಟುಕೊಂಡು ಅವನು ಜೀವನ ಮಾಡುವುದಕ್ಕೆ ಆಗುವಷ್ಟು ಬೆಂಬಲ ಬೆಲೆಯನ್ನು ನಿಗಧಿ ಮಾಡಬೇಕು ಇಲ್ಲದಿದ್ದರೆ ಬಹಳ ಅನಾಹುತವಾಗುತ್ತದೆ, ಮಾನ್ಯ ಕೃಷಿ ಸಚಿವರು ಚಾಮರಾಜನಗರಕ್ಕೆ ಬಂದಾಗ ಕೆಲವು ಆಶ್ವಾಸನೆ ಕೊಟ್ಟಿದ್ದಾರೆ. ಅವರು ನಮ್ಮ ಭಾಗದ ರೈತರ ಬಗ್ಗೆ ಕಾಳಜಿ ವಹಿಸುತ್ತಾರೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) :— ಮಾನ್ಯ ಅಧ್ಯಕ್ಷರೇ ಈಗ ತೆಂಗಿನ ಬೆಳೆ ಬಗ್ಗೆ ಬೇಕಾದಷ್ಟು ಜನ ಮಾತನಾಡಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ತೆಂಗು ಬೆಳೆ ನಮಗೆ ಮೊದಲಿನಿಂದಲೂ ಬಂದಿದ್ದು ಅಲ್ಲ. ನಮ್ಮದು ನೀರಾವರಿ ಪ್ರದೇಶ ಅಲ್ಲ. ಹೊಸದಾಗಿ ನಾವು ತೆಂಗು ಬೆಳೆಯನ್ನು ಬೆಳೆಯುತ್ತಿದ್ದೇವೆ. ನಾವು ತೆಂಗು ಬೆಳೆ ಮಾಡಬೇಕಾದರೆ ಬೋರ್‌ವೆಲ್ ಹಾಕಬೇಕು, ಒಂದು ಬೋರ್‌ವೆಲ್ ಹಾಕಬೇಕಾದರೆ 4-5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು. ಅದರಲ್ಲಿ ಒಂದೂ ಸಕ್ಸಸ್ ಆಗುವುದಿಲ್ಲ. ಇವತ್ತು ತೆಂಗಿನ ಕಾಯಿಗೆ ಬರುವ ಬೆಲೆಯನ್ನು ನಾವು ಲೆಕ್ಕ ಹಾಕಿದರೆ ಬಸ್ಸು ಚಾರ್ಜಿಗೆ ಅಲ್ಲ, ವಿಷ ತೆಗೆದುಕೊಳ್ಳುವುದಕ್ಕೂ ಹಣ ಬರುವುದಿಲ್ಲ. ಇವತ್ತು ಬೆಂಗಳೂರು ಸುತ್ತಮುತ್ತ ಒಂದು ದಿನ ಕೂಲಿಕಾರ್ಮಿಕರಿಗೆ ನೂರು ರೂಪಾಯಿ ಕೊಡಬೇಕು. ಇವತ್ತು 10 ರೂಪಾಯಿಗೆ 3 ತೆಂಗಿನ ಕಾಯಿ ಕೊಡಬೇಕಾಗಿದೆ. ಇವತ್ತು ತೆಂಗಿನಕಾಯಿ ಕೀಳದೆ ಬೇಕಾದಷ್ಟು ಜನ ಬಿಟ್ಟುಬಿಟ್ಟಿದ್ದಾರೆ. ಮಾನ್ಯ ತೋಟಗಾರಿಕೆ ಸಚಿವರು ಇದ್ದಾರೆ, ಕೃಷಿ ಸಚಿವರು ಇದ್ದಾರೆ. ಹೋದ ವರ್ಷ ತೆಂಗಿನ ಬೆಳೆಗೆ ರೋಗ ಬಂದಿತ್ತು. ನಾವು ಆಗ ಜಿಲ್ಲಾ ಪರಿಷತ್ತು ವತಿಯಿಂದ, ಇಲ್ಲಿ ಗಲಾಟೆ ಮಾಡಿದಾಗ ನಾವು ರೋಗ ನಿಯಂತ್ರಣ ಮಾಡುತ್ತೇವೆಂದು ಹೇಳಿದರು. ಹಿರಿಯ ಸದಸ್ಯರಾದ ಸಿಂಧ್ಯಾರವರು ಹೇಳಿದ ಹಾಗೆ ಇವತ್ತಿಗೂ ನಮ್ಮ ತೋಟಗಳಲ್ಲಿ ಆ ರೋಗವನ್ನು ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಇವತ್ತು ಮಾನ್ಯ

ಮಂತ್ರಿಗಳು ನನ್ನ ಜೊತೆ ಬಂದರೆ ಸ್ವತಃ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಈ ರೋಗ ಕಂಟ್ರೋಲ್ ಮಾಡುವುದಕ್ಕೂ ಆಗಲಿಲ್ಲ, ಜೊತೆಗೆ ಬೆಲೆ ಕುಸಿತ ಇವತ್ತು ಬಾವಿಗಳಲ್ಲಿ ನೀರು ಇಲ್ಲ. ಈ ಸದನ ಪ್ರಾರಂಭವಾದಾಗಿನಿಂದಲೂ ನಾವು ಮಾತನಾಡುತ್ತಿದ್ದೇವೆ. ಮಾನ್ಯ ಕೃಷಿ ಸಚಿವರು ಹೇಳುತ್ತಿದ್ದಾರೆ ಆ ಬಗ್ಗೆ ನಾವೇನು ಕ್ರಮ ತೆಗೆದುಕೊಳ್ಳುವುದಕ್ಕೇ ಆಗುವುದಿಲ್ಲ ಅಂತ. ಹೀಗಾದರೆ ರೈತರು ವಿಷ ತೆಗೆದುಕೊಳ್ಳದೆ ಏನು ಮಾಡುತ್ತಾರೆ? ಕೋಲಾರ ಜಿಲ್ಲೆ ಆಗಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಆಗಲಿ, ಯಾವುದೇ ಜಿಲ್ಲೆ ಆಗಲಿ ಈ ಬಗ್ಗೆ ಮಾನ್ಯ ಕೃಷಿ ಸಚಿವರೇ ಹೇಳಬೇಕು. ಈ ಬಗ್ಗೆ ಚರ್ಚೆ ಮಾಡಲು ಒಂದು ನಿಯೋಗ ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರೋಣವೆಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯದಿಂದ ಲೋಕಸಭಾ ಸದಸ್ಯರು ಕೇಂದ್ರದಲ್ಲಿ ಇದ್ದಾರೆ. ಅವರು ಯಾರಾದರೂ ಒಂದು ದಿನ ಈ ವಿಚಾರದಲ್ಲಿ ಸರ್ಕಾರದ ಗಮನ ಸೆಳೆದಿದ್ದಾರೆಯೇ? ಇನ್ನು ನಮ್ಮ ಜಿಲ್ಲಾ ಮಂತ್ರಿಗಳು ಒಂದು ದಿನ ಒಂದು ಸಭೆ ಕರೆದು ಎಲ್ಲಾ ಶಾಸಕರನ್ನು ಕೇಳಿ ಈ ಬಗ್ಗೆ ನಾವು ಏನು ಕ್ರಮ ತೆಗೆದುಕೊಳ್ಳೋಣ ಎಂತ ಕೇಳಲಿಲ್ಲ. ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಹೇಳಿದರು ಸರ್ವಪಕ್ಷಗಳ ಒಂದು ನಿಯೋಗ ಹೋಗಿ ಕೇಂದ್ರ ಸರ್ಕಾರದ ಜೊತೆ ಮಾತುಕತೆ ಮಾಡಿ ಬೆಂಬಲ ಬೆಲೆಯನ್ನು ನಿಗದಿಗೊಳಿಸೋಣ ಅಂತ. ಈ ಬಗ್ಗೆ ರಾಜ್ಯಸಭಾ ಸದಸ್ಯರಾಗಲಿ ಅಥವಾ ಲೋಕಸಭಾ ಸದಸ್ಯರಾಗಲಿ ಯಾರಾದರೂ ವಿಚಾರ ಎತ್ತಿದ್ದಾರಾ?

ಡಾ. ಜಿ. ಪರಮೇಶ್ವರ್ :— ಮಾನ್ಯ ಕೃಷ್ಣಪ್ಪನವರೇ, ತಮ್ಮ ಲೋಕಸಭಾ ಸದಸ್ಯರಿಗೆ ತಾವು ಹೇಳಿ.

ಶ್ರೀ ವಿ. ಕೃಷ್ಣಪ್ಪ :— ಇವತ್ತಿನ ದಿವಸ ಎಲ್ಲಾ ಜಿಲ್ಲೆಗಳನ್ನೂ ಜಿಲ್ಲಾ ಮಂತ್ರಿಗಳು ಮೀಟಿಂಗನ್ನು ಮಾಡಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಾಡಿದ್ದಾರೆಯೇ?

ಅಧ್ಯಕ್ಷರು :— ಮಾನ್ಯ ಕೃಷ್ಣಪ್ಪನವರೇ, ತಾವು ಬೆಲೆ ಕುಸಿತದ ಬಗ್ಗೆ ಮಾತನಾಡಿ, ಸಬ್ಜೆಕ್ಟ್ ಬಗ್ಗೆ ಮಾತನಾಡಿ.

ಶ್ರೀ ವಿ. ಕೃಷ್ಣಪ್ಪ :— ಅದಕ್ಕೇ ಇವತ್ತಿನ ದಿವಸ ಬೆಲೆ ಕುಸಿದುಹೋಗಿರುವುದು.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೇ, ಅವರು ಸರಿಯಾದ ದಾರಿಯಲ್ಲಿ ಏಕೆ ಹೋಗುತ್ತಿದ್ದಾರೆ ಎಂದರೆ ಇಲ್ಲಿ ಪ್ರತಿ ಮಾತಿನಲ್ಲೂ ಕೂಡ ಕೇಂದ್ರ ಸರ್ಕಾರದ ಜವಾಬ್ದಾರಿ ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರಕ್ಕೆ ನಾವು ಅವರು ಹೇಳಿದ್ದನ್ನು ತಿಳಿಸಿದ್ದೇವೆ. ಇದೇ ಸರ್ಕಾರ ಅವರಿಗೆ ಬೇಕಾದ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ. ಎಲ್ಲವನ್ನೂ ಮಾಡಿದಾಗಲೂ ಕೂಡ ಅವರ ಜವಾಬ್ದಾರಿಯನ್ನು ಯಶಸ್ವಿಯಾಗಿ

ನಿರ್ವಹಿಸಿಲ್ಲ, ಅದರೊಟ್ಟಿಗೆ ಜವಾಬ್ದಾರರು ಯಾರು, ಇಲ್ಲಿ ಅವರು ಪಾರ್ಟಿ ಇತರ ಪಾರ್ಟಿ ಎಂಬುದಲ್ಲ. ಈ ರಾಜ್ಯದಿಂದ ಹೋದ ಎಲ್ಲ ಲೋಕಸಭಾ ಸದಸ್ಯರೂ ಈ ಭಾಗದಲ್ಲಿರುವ ಬೆಳೆಗಳ ಬಗ್ಗೆ ಕೇಂದ್ರದಲ್ಲಿ ಪ್ರಸ್ತಾಪ ಮಾಡುವ ಅವಶ್ಯಕತೆ ಇದೆ. ಇದನ್ನು ಅವರು ಮಾಡಿದ್ದಾರೆ? ಅವರಿಗೆ ನಾವು ಗೂಟದ ಕಾರುಗಳನ್ನು ಕೊಟ್ಟಿದ್ದೇವೆ. ಕೆಂಪು ದೀಪದ ಕಾರುಗಳನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಲೋಕಸಭಾ ಸದಸ್ಯರಿಗೆ ಸಿಗ್ನಲ್ ಹೋಗಬೇಕು. ಅವರ ಜವಾಬ್ದಾರಿ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡಿದ್ದು ಅವರಿಗೆ ಗೊತ್ತಾಗಬೇಕು.

ಶ್ರೀ ಎ. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲಾ ಮಂತ್ರಿಗಳು ಬಹಳ ಶಕ್ತಿಶಾಲಿಯಾದ ಯುವಕರು. ನಮ್ಮಲ್ಲಿ ಹಿರಿಯರಾದ ಸದಸ್ಯರುಗಳಿದ್ದಾರೆ, ನಮ್ಮನ್ನು ಕರೆದು ಒಂದು ದಿವಸವಾದರೂ ಅವರು ಮೀಟಿಂಗನ್ನು ಮಾಡಿಲ್ಲ, ಏನು ಎಂದು ಕೇಳಿ ವಿಚಾರಿಸಿಲ್ಲ. ರೈತರ ಬಗ್ಗೆ, ಬೆಳೆ ಬಗ್ಗೆ ಚರ್ಚೆ ಮಾಡಲಿಲ್ಲ. ಲೋಕಸಭಾ ಸದಸ್ಯರುಗಳಾದರೂ ಒಂದು ದಿವಸವಾದರೂ ಪಾರ್ಲಿಮೆಂಟಿನಲ್ಲಿ ಮಾತನಾಡಿದ್ದಾರಾ? ಅವರಿಗೆಲ್ಲಾ ಸೌಲಭ್ಯಗಳನ್ನೂ ಇನ್ನೂ ಕೊಡಿ. ಕ್ಯಾಬಿನೆಟ್ ದರ್ಜೆಯನ್ನೇ ಕೊಟ್ಟುಬಿಡಿ. ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಇದರ ಬಗ್ಗೆ ಯೋಚನೆ ಮಾಡಿ ಎಂದು ಹೇಳಿ. ಇವತ್ತಿನ ದಿವಸ ತೋಟಗಾರಿಕಾ ಮಂತ್ರಿಗಳಲ್ಲಿ, ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ, ತೆಂಗಿನ ಬೆಳೆಗೆ ಬಂದಿರುವ ರೋಗ ನಿವಾರಣೆ ಮಾಡುವುದಕ್ಕಾದರೂ ಕ್ರಮವನ್ನು ತೆಗೆದುಕೊಂಡಿಲ್ಲ. ಸರ್ಕಾರ ಇದರ ಬಗ್ಗೆ ಗಮನವನ್ನು ಹರಿಸಬೇಕು. ನಾವು ಬೇರೆಯವರನ್ನು ನೋಡಿ ಇವತ್ತು ಕಾಫಿ ಮತ್ತು ಅಡಿಕೆ ಬೆಳೆಗಳನ್ನು ಬೆಳೆಯುವುದಕ್ಕೆ ಹೋದೆವು. ನಾವು ಇವತ್ತು ಕೈ ಸುಟ್ಟುಕೊಂಡು ಸುಮ್ಮನೆ ಕುಳಿತಿದ್ದೇವೆ. ಮಾನ್ಯ ಅಧ್ಯಕ್ಷರು ನಮಗೆ ಹೊಸ ಸದಸ್ಯರುಗಳಿಗೆ ಅನುಭವ ಇಲ್ಲದವರಿಗೆ ಕೊಡುವುದು ಹೇಗೆ ಎಂದು ಹೇಳುತ್ತೀರಿ. ನಮಗೆ ಹೇಳುವುದಕ್ಕೆ ತಾವು ಬಿಡುವುದಿಲ್ಲ. ಈಗ ನಾವು ಅವಕಾಶವನ್ನು ಕೊಟ್ಟಿದ್ದೀರಿ. ನಾವು ಏನಾದರೂ ಹೇಳುವುದಕ್ಕೆ ಹೋದರೆ ಕುಳಿತುಕೊಳ್ಳಿ, ಕುಳಿತು ಕೊಳ್ಳಿ ಎನ್ನುತ್ತೀರಿ. ಮುಂದೆ ಬರುವ ಅಧಿವೇಶನದಲ್ಲಾದರೂ ಕೂಡ ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಇಷ್ಟನ್ನು ಹೇಳಿ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಹೊಸ ಸದಸ್ಯರೇ ಮಾತನಾಡಲಿ, ಮಾನ್ಯ ಬಸವರಾಜು ಅವರು ಮಾತನಾಡಲಿ.

+ ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) :— ಮಾನ್ಯ ಅಧ್ಯಕ್ಷರೇ, ಕಳೆದ 15 ದಿವಸಗಳಿಂದಲೂ ಕೂಡ ಈ ಒಂದು ವಿಷಯ ಮುಂದೂಡಿದ್ದು ಇವತ್ತು ಸದನದ ಕೊನೆಯ ದಿವಸ ಆದು ಬಹಳ ಕಷ್ಟಪಟ್ಟು ಈ ಒಂದು ವ್ಯವಸಾಯಗಾರರ ಕುಂದುಕೊರತೆಗಳ

ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಧನ್ಯವಾದಗಳು, ಇದು ಈ ದೇಶದ ದುರ್ದೈವ. ನೂರಕ್ಕೆ 75 ಭಾಗ ಅದು ಶಾಸಕರು ಇರಬಹುದು, ಮಂತ್ರಿಗಳಿರಬಹುದು. ಎಲ್ಲರೂ ಕೂಡ ಸಾಮಾನ್ಯವಾಗಿ ಹಳ್ಳಿಗಾಡಿನಿಂದ ಬಂದಿರುವ ರೈತ ಕುಟುಂಬಕ್ಕೆ ಸೇರಿದ್ದವರು. ಇಷ್ಟಾದರೂ ಕೂಡ ಕಳೆದ 50 ವರ್ಷಗಳಿಂದ ಸ್ವಾತಂತ್ರ್ಯ ಬಂದರೂ ಈ ದೇಶದಲ್ಲಿ ಯಾರಾದರೂ ಕೂಡ ತೊಂದರೆಯನ್ನು ಅನುಭವಿಸುತ್ತಿದ್ದಾರೆ ಎಂದರೆ ಈ ರೈತಾಪಿ ಜನಗಳು ಮಾತ್ರ. ಮತ್ತು ಕೃಷಿ ಕಾರ್ಮಿಕರು. ಇದ್ಯಾಕೆ ಹೀಗೆ ಎಂದು ನಾವು ಅವಲೋಕಿಸಬೇಕಾಗುತ್ತದೆ. ರಾಜ್ಯದಲ್ಲಿ ಯಾವುದೇ ಬೆಳೆ ತೆಗೆದುಕೊಳ್ಳಿ, ತೋಟಗಾರಿಕೆ ಬೆಳೆ ತೆಗೆದುಕೊಳ್ಳಿ, ಅಥವಾ ಕೃಷಿ ಬೆಳೆಗಳನ್ನು ತೆಗೆದುಕೊಂಡರೂ ಕೂಡ ಒಂದಾನೊಂದು ಕಾಲದಲ್ಲಿ ಈ ಬೆಳೆ ಸಾಲುತ್ತಿರಲಿಲ್ಲ, ನಾವೇನು ಉತ್ಪತ್ತಿ ಮಾಡುತ್ತಿದ್ದೇವೆ, ಅದು ಜನಗಳಿಗೆ ಸಾಲುತ್ತಿಲ್ಲ 70 ಮಿಲಿಯನ್, 80 ಮಿಲಿಯನ್ ಬೆಳೆಯುತ್ತಿದ್ದೇವೆ, 60-70-80ರ ದಶಕದಲ್ಲಿ ಹಸಿರು ಕ್ರಾಂತಿಯನ್ನು ಮಾಡಬೇಕೆಂದು ಹೇಳಿ ವಿಜ್ಞಾನಿಗಳು ಕೂಡ ಕಷ್ಟಪಟ್ಟು ಹೊಸ ಹೊಸ ತಳಿಗಳನ್ನು, ಹೊಸ ಹೊಸ ವಿಧಾನಗಳನ್ನು ನೋಡಿ ಈ ಒಂದು ಆಹಾರ ಉತ್ಪಾದನೆ ಏನಿದೆ, ಅದನ್ನು ಡಬಲ್ ಮಾಡಿದರು. ಆದರೆ ಅವತ್ತು ಡಬಲ್ ಮಾಡಿದ ವ್ಯಕ್ತಿಗಳು ಮುಂದಾಲೋಚನೆ ಇಲ್ಲದೆ ನಾವು ಹೆಚ್ಚಿನ ಬೆಳೆಯನ್ನು ಬೆಳೆದಾಗ ಆ ಬೆಲೆ ಕುಸಿತಕ್ಕೆ ಏನು ಮಾಡಬೇಕೆನ್ನುವ ಬಗ್ಗೆ ಯಾರೂ ಕೂಡ ಚಿಂತೆ ಮಾಡುವುದಕ್ಕಾಗಿಲ್ಲ. ಇವತ್ತು ಹೆಚ್ಚಿಗೆ ಉತ್ಪಾದನೆಯನ್ನು ನಾವು ಮಾಡಿದ್ದೇವೆ, ಅದಕ್ಕೆ ಬೆಲೆ ಇಲ್ಲದೆ ರೈತಾಪಿ ಜನಗಳು ಮತ್ತು ಕೃಷಿ ಕಾರ್ಮಿಕರು ಇವತ್ತು ಕಂಗಾಲಾಗಿದ್ದಾರೆ. ಇದ್ಯಾಕೆ ಹೀಗೆ ಆಗುತ್ತಿದೆ ಎಂದು ನಾವು ಕೂಲಂಕುಷವಾಗಿ ಆಲೋಚನೆ ಮಾಡಬೇಕಾಗಿದ್ದು ಈ ಸದನದ ಪ್ರತಿಯೊಬ್ಬರ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆ ಈ ಸರ್ಕಾರಗಳು, ಯಾವುದೇ ಸರ್ಕಾರ ಬರಲಿ, ರೈತರ ಹೆಸರನ್ನು ಹೇಳಿಕೊಂಡು ಸರ್ಕಾರ ರಚನೆ ಮಾಡುತ್ತಾರೆ, ರೈತರಿಂದ ಓಟನ್ನು ತೆಗೆದುಕೊಂಡು ಬಂದು ಸರ್ಕಾರ ರಚನೆ ಮಾಡುತ್ತಾರೆ. ಅಧಿಕಾರಕ್ಕೆ ಬಂದಮೇಲೆ ರೈತರನ್ನು ಮರೆಯುತ್ತಾರೆ. ಏಕೆ ಹೀಗೆ ಆಗುತ್ತಿದೆ ಎಂದು ನಾವೆಲ್ಲರೂ ಕೂಡ ಚಿಂತನೆ ಮಾಡಬೇಕಾದ ಕಾಲ ಬಂದಿದೆ. ಇದನ್ನು ಹೀಗೆ ಬಿಟ್ಟರೆ ಮೊದಲು ಮಾತನಾಡಿದವರು ಹೇಳಿದಹಾಗೆ ವರ್ಗ ಸಂಘರ್ಷಣೆ ಜಾಸ್ತಿಯಾಗಿ ಕ್ರಾಂತಿಯಾಗತಕ್ಕ ಕಾಲ ದೂರವಿಲ್ಲ. ಈಗಲಾದರೂ ಕೂಡ ಸರ್ಕಾರಗಳು, ಯಾವುದೇ ಸರ್ಕಾರ ಇರಲಿ, ರಾಜ್ಯ ಸರ್ಕಾರ ಇರಲಿ, ಕೇಂದ್ರ ಸರ್ಕಾರ ಇರಲಿ, ಎಲ್ಲರೂ ಕೂಡ ಎಚ್ಚೆತ್ತುಕೊಂಡು ಈ ದೇಶದಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು. ಅದರ ಬಗ್ಗೆ ದಿಟ್ಟವಾದ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಯಾರಿಗೂ ಉಳಿಗಾಲವಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಒಂದು ವಿಷಯದಲ್ಲಿ ನಾನು ಮಾನ್ಯ ಕೃಷಿ ಸಚಿವರನ್ನು ಅಭಿನಂದಿಸಬೇಕಾಗಿದೆ. ಏಕೆಂದರೆ ಕಳೆದ ಮಾರ್ಚ್ ಅಧಿವೇಶನದಲ್ಲಿ ನಮ್ಮ ಹೊಗೆಸೊಪ್ಪಿನ ರೈತರು ಬಹಳ ಕಂಗಾಲಾಗಿದ್ದಾಗ ನಮ್ಮ ಮಿತ್ರರಾದ ಮಾನ್ಯ ಮಂಜುರವರು, ಪಾಟೀಲ್ಕನವರು

ಈ ಸದನದಲ್ಲಿ ಅದರ ಬಗ್ಗೆ ಪ್ರಸ್ತಾಪಮಾಡಿದಾಗ ಅದಕ್ಕೆ ಸ್ಪಂದಿಸಿ ರಾಜ್ಯ ಸರ್ಕಾರ
ಒಂದು ಒಂದು ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗಿ ಏನು ಕರ್ನಾಟಕದಲ್ಲಿ
ವಿಶೇಷಿಸಿ ಹೊಗೆಸೊಪ್ಪಿಗೆ ಈ ವರ್ಷದ ಬೆಳೆ ದರವನ್ನು ಕೊಡಬೇಕು ಎಂದು
ಆಂಧ್ರಪ್ರದೇಶದವರು ಹೇಳಿದಾಗ ಅದಕ್ಕೆ ಪ್ರತಿಭಟಿಸಿ, ಬಹಳಷ್ಟು ಕಾಳಜಿಯನ್ನು ವಹಿಸಿ
ಮುಖ್ಯಮಂತ್ರಿ ಆದಿಯಾಗಿ ಬಹಳಷ್ಟು ಎಲ್ಲರೂ ಕಾಳಜಿಯನ್ನು ವಹಿಸಿ ಈ ಒಂದು
ಸಲ ಹೊಗೆ ಸೊಪ್ಪನ್ನು ಬೆಳೆಯಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಹೊಗೆಸೊಪ್ಪಿನ ರೈತರಿಗೆ
ಚೆನ್ನಾಗಿ ಚಿನ್ನದ ಬೆಲೆ ಇವತ್ತು ಬಂದಿದೆ. ಅವರು ಬಹಳ ಸಂತೋಷಕರವಾಗಿದ್ದಾರೆ.
ಅದಕ್ಕೆ ನಾನು ಸರ್ಕಾರಕ್ಕೆ ಅದರಲ್ಲೂ ಕೃಷಿ ಸಚಿವರನ್ನು ನಾನು ಅಭಿನಂದಿಸುತ್ತೇನೆ. ಇದೇ
ರೀತಿ ಎಲ್ಲಾ ಕಡೆಗಳಲ್ಲೂ ಮಾಡಿದರೆ ಪ್ರತಿಯೊಬ್ಬ ರೈತರೂ ಕೂಡ ಅಲ್ಲಿ ಹೊಗೆಸೊಪ್ಪಿನ
ರೈತರಿರಬಹುದು, ಮುಸುಕಿನ ಜೋಳ ಬೆಳೆದ ರೈತರಿರಬಹುದು, ತೆಂಗು ಬೆಳೆದ ರೈತರಿರಬಹುದು,
ತೊಗರಿ ಇರಬಹುದು, ಅಲಸಂದಿ ಬೆಳೆದ ರೈತರು ಇರಬಹುದು ಪ್ರತಿಯೊಂದು ವಿಷಯದಲ್ಲೂ
ಇದೇ ನಿಟ್ಟಿನಲ್ಲಿ ಸರ್ಕಾರ ರೈತರ ಪಕ್ಕಕ್ಕೆ ಬರಬೇಕು. It is the fundmental duty
of any government to see that the farming community is safeguarded,
otherwise, there is no scope for any Government in this country. ಇದನ್ನು
ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಒಂದು ಸಲ ರೈತ ಎದ್ದರೆ ಬಹಳ ಕಷ್ಟವಾಗುತ್ತದೆ.
ಅವರನು ಯಾವುತ್ತೂ ಏಳುವುದಿಲ್ಲ. ಒಂದು ಸಲ ರೈತ ಎದ್ದುನಿಂತು ಕೊಂಡು ಮೇಲಕ್ಕೆ
ಎದ್ದರೆ ಅವರನ್ನು ಕಂಟ್ರೋಲ್ ಮಾಡುವುದಕ್ಕೆ ಹಿಡಿತಕ್ಕೆ ತರಲಿಕ್ಕೆ ಯಾವ ಸರ್ಕಾರದಿಂದಲೂ
ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ನಾನು ಇವತ್ತು ಈ ಸರ್ಕಾರಕ್ಕೆ ಏನು ಎಚ್ಚರಿಕೆಯನ್ನು
ಕೊಡುತ್ತಿದ್ದೇನೆ ಎಂದರೆ ಈಗಲಾದರೂ ಕೂಡ ಕರ್ನಾಟಕ ರಾಜ್ಯದಲ್ಲಿ ಬೆಳೆದಿರುವ
ಪ್ರತಿಯೊಂದು ಬೆಳೆಗೆ ಅದು ತೆಂಗು, ಜೋಳ ಇರಬಹುದು, ಅದಕ್ಕೆ ಮಿನಿಮಮ್
ಪ್ರೈಸನ್ನು ಫಿಕ್ಸ್ ಮಾಡಬೇಕು. ಮಿನಿಮಮ್ ಪ್ರೈಸನ್ನು ಫಿಕ್ಸ್ ಮಾಡುವಾಗ ಆಧುನಿಕವಾಗಿ
ಅಷ್ಟು ಬೆಳೆಯಲು ಆ ರೈತರಿಗೆ ತನ್ನ ಕೂಲಿ ಸೇರಿ ಎಷ್ಟು ಖರ್ಚಾಗುತ್ತೆ ಎನ್ನುವುದನ್ನು
ಅಳತೆಗೋಲು ಮಾಡಿ ಅದಕ್ಕೆ ಮಿನಿಮಮ್ ಸಪೋರ್ಟ್ ಪ್ರೈಸನ್ನು ಫಿಕ್ಸ್ ಮಾಡಬೇಕು.
ಸುಮ್ಮನೆ ನಾವು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರ ಮೇಲೆ ಹೇಳುವುದು,
ಮಿನಿಮಮ್ ಪ್ರೈಸನ್ನು ಕೇಂದ್ರ ಸರ್ಕಾರದವರು ಮಾಡುತ್ತಾರೆ, ಅಲ್ಲಿ ಒಂದು ಆಯೋಗ
ಇದೆ, ಅವರು ಮಾಡುತ್ತಾರೆ, ನಮಗೂ ಅದಕ್ಕೂ ಸಂಬಂಧವಿಲ್ಲ ಎಂದು ಹೇಳಿ ನಾವು
ಕೈಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರಕ್ಕಿಂತ ಹೆಚ್ಚು
ಹೊಣೆಗಾರಿಕೆ ನಮ್ಮ ರೈತರ ಬಗ್ಗೆ ಇದೆ. ಆ ದೃಷ್ಟಿಯಿಂದ ಮಾನ್ಯ ಸಿಂಧ್ಯಾರವರು
ಹೇಳಿದಹಾಗೆ ಸದನದ ಸಮಿತಿಯನ್ನು ಮಾಡಿ ರಾಜ್ಯದಲ್ಲಿ ಬೆಳೆಯುವ ಎಲ್ಲಾ ವ್ಯವಸಾಯದ
ಬೆಳೆಗಳು, ತೋಟಗಾರಿಕೆ ಬೆಳೆಗಳು, ಎಲ್ಲಾ ಬೆಳೆಗಳಿಗೂ ಕೂಡ ನಾವು ಮಿನಿಮಮ್
ಪ್ರೈಸನ್ನು ಫಿಕ್ಸ್ ಮಾಡಲೇಬೇಕು. ಮಾನ್ಯ ಮಂತ್ರಿಗಳು ತೆಂಗಿನಕಾಯಿಗೆ ಮಿನಿಮಮ್

ಪ್ರೈಸನ್ನು ಫಿಕ್ಸ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಲಿಖಿತವಾದ ಉತ್ತರವನ್ನು ಕೊಟ್ಟಿದ್ದಾರೆ. ಇದು ನಾಚಿಕೆಗೇಡು. ಇವತ್ತು ತೆಂಗಿನಕಾಯಿ ಬೆಳೆಯುವ ರೈತರು ಅವರು ಕಷ್ಟದಲ್ಲಿರುವಾಗ ಸರ್ಕಾರ ಅವನ ಮನೆ ಬಾಗಿಲಿಗೆ ಹೋಗಿ ಅವರ ಸಂಕಷ್ಟಕ್ಕೆ ಬರುವುದಿಲ್ಲವೆಂದಾಗ ಆ ಸರ್ಕಾರದ ವೈಫಲ್ಯತೆ ಇದರಿಂದ ಗೊತ್ತಾಗುತ್ತದೆ. ಇವತ್ತು ರೈತ ಬೆಳೆದ ತೆಂಗಾಗಲಿ, ಮೆಣಸಾಗಲಿ, ಅವನು ಬೆಳೆದ ಪದಾರ್ಥಗಳಿಗೆ ನಾವು ರಕ್ಷಣೆಯನ್ನು ಕೊಡಬೇಕಾಗುತ್ತದೆ. ಅಮೇರಿಕಾ ದೇಶದಲ್ಲಿ ಗೋಧಿ ಉತ್ಪನ್ನ ಜಾಸ್ತಿಯಾದಾಗ ಸಪೋರ್ಟ್ ಪ್ರೈಸ್‌ಗೆ ತೆಗೆದುಕೊಂಡು ಅದನ್ನು ಸಮುದ್ರಕ್ಕೆ ಹಾಕಿದ್ದನ್ನು ನಾವು ಹತ್ತು ಹದಿನೈದು ವರ್ಷದ ಹಿಂದೆ ಪತ್ರಿಕೆಯಲ್ಲಿ ಓದಿದ ಜ್ಞಾಪಕ ಇದೆ. ಸರ್ಕಾರ ಇದರ ಬಗ್ಗೆ ಎಚ್ಚೆತ್ತುಕೊಂಡು, ಸರ್ಕಾರ ಇವತ್ತು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ ಯಾವುದ್ಯಾವುದೋ ಇನ್‌ಫ್ರಾಸ್ಟ್ರಕ್ಚರ್, ಆ ಟೆಕ್ನಾಲಜಿ ಈ ಟೆಕ್ನಾಲಜಿ, ಕಂಪ್ಯೂಟರೈಜೇಷನ್‌ಗೆಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಇಂಡಸ್ಟ್ರೀಗಳಿಗೂ ಖರ್ಚು ಮಾಡುತ್ತಿದ್ದೇವೆ. ಆದರೆ ವ್ಯವಸಾಯಗಾರರಿಗೆ ಕೊಡಲಿಕ್ಕೆ ಮಾತ್ರ ಎಡರು ತೊಡರು ಮಾಡಿ ಲಂಗುಲಗಾಮು ಹಾಕಿ ಅವರನ್ನು ಹಿಂಡಿದು, ಹಿಂಡಿದು ಮಾಡಿ ರೈತರನ್ನು ಕೊನೆಗೆ ಮೆಟ್ಟಿ ಹಿಡಿದು ಸಾಯಿಸಿಬಿಡುತ್ತಾರೆ. ಈ ದೇಶದಲ್ಲಿ ಇದು ಆಗಬಾರದು. ಮುಸುಕಿನ ಜೋಳದ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರದವರು 445 ರೂಪಾಯಿ ಬೆಂಬಲ ಬೆಲೆ ಮಾಡಿದ್ದಾರೆಂದು ಹೇಳಿದರು. ಅದನ್ನು ಪರ್ಚೇಸ್ ಮಾಡಬೇಕೆಂದು ಹೇಳಿದಾಗ ರಾಜ್ಯ ಸರ್ಕಾರದವರು ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರಿಗೆ ವಹಿಸಿದರು. ಮುಸುಕಿನ ಜೋಳವನ್ನು ತೆಗೆದುಕೊಳ್ಳಲು ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರಿಗೆ ನಿಜವಾಗಿಯೂ ಕಾಳಜಿಯಿಲ್ಲ. ಇವತ್ತು ಪಿರಿಯಾಪಟ್ಟಣದಲ್ಲಿ ಕೇಂದ್ರ ಮಾಡಿದ್ದಾರೆ. ಅವರು ಮೊನ್ನೆ ಹೋದಾಗ ಹೇಳುತ್ತಾರೆ, ಇದನ್ನು ಮಾಡದಿದ್ದರೆ ಚೆನ್ನಾಗಿತ್ತು ಎನ್ನುತ್ತಾರೆ. ಹೇಗೋ ಓಪನ್ ಮಾರ್ಕೆಟ್‌ನಲ್ಲಿ 350 ರೂಪಾಯಿ ಸಿಗುತ್ತಿತ್ತು, ಈಗ 300 ರೂಪಾಯಿಗೆ ಇಳಿದುಹೋಗಿದೆ. ಅವರು ಅಲ್ಲಿ ತೆಗೆದುಕೊಳ್ಳುವುದಿಲ್ಲ. 300 ರೂಪಾಯಿಗೆ ಕೇಳುತ್ತಿದ್ದಾರೆ. ಮಾರ್ಕೆಟ್‌ನಲ್ಲಿ

3.50 ಪಿ.ಎಂ.

50 ರೂಪಾಯಿ ಕಡಿಮೆಯಾಗಿದೆ ಎಂದು ಹೇಳುತ್ತಾರೆ. ಸರ್ಕಾರ ರಿಸ್ಕ್ ತೆಗೆದುಕೊಂಡು ಬರಬೇಕು ಇದಕ್ಕೆ. ನಿಮ್ಮ ಅಧಿಕಾರಿ ಅಲ್ಲಿರಬೇಕು. ರಾಜ್ಯ ಸರ್ಕಾರ ಯಾವ ಅಧಿಕಾರಿಯನ್ನೂ ಇಟ್ಟಿಲ್ಲ ಅಲ್ಲಿ. ಎಫ್‌ಸಿಐ ಆಫೀಸರು ಮೂರು ಜನ ಇದ್ದಾರೆ ಅವರು ಬೆಳಗಿನಿಂದ ಸಂಜೆವರೆಗೂ ಒಂದು ಲೋಡ್ ಮೇಲೆ ಕೊಳ್ಳುವುದಿಲ್ಲ. ದಿನಕ್ಕೆ 10-15 ಲೋಡ್ ಬರುತ್ತಾ ಇದೆ. ಜನರು ಬುತ್ತಿಕಟ್ಟಿಕೊಂಡು ಬಂದು ಅಲ್ಲೇ ಮಲಗಿ ಎಪಿಎಂಸಿ ಯಾರ್ಡಿನಲ್ಲಿ ಎರಡು ಮೂರು ದಿವಸ ಕಾಯುವ ಪರಿಸ್ಥಿತಿ ಇದೆ. ಇತ್ತ ಮಾನ್ಯ ಸಚಿವರು ಸ್ವಲ್ಪ ಗಮನಹರಿಸಬೇಕು. ನಮ್ಮ ರಾಜ್ಯ ಸರ್ಕಾರದ ವತಿಯಿಂದ ಒಬ್ಬ

ಆಫೀಸರು ಅಲ್ಲಿರಬೇಕು. ಅವರು 14 ಪರ್ಸೆಂಟ್ ಅಂತ ಹೇಳಿದ್ದಾರೆ, ಅಕಸ್ಮಾತ್ 15 ಪರ್ಸೆಂಟಿದ್ದರೆ ಆಗ ಪರ್ಚೇಸ್ ಮಾಡಿ ಒಂದು ಪರ್ಸೆಂಟಿಗೆ ರೇಟನ್ನು ಅವರು ಕಟ್ ಮಾಡುತ್ತಾರೆ. ಆದರೆ ಆ ವ್ಯವಸ್ಥೆಯನ್ನೂ ಅವರು ಪಾಲಿಸುತ್ತಿಲ್ಲ. ಬೇಕು ಬೇಕಾದವರು ತೆಗೆದುಕೊಳ್ಳುತ್ತಾರೆ, ಬೇಡದೆ ಇದ್ದವರನ್ನು ಆಚೆ ಕಳಿಸುತ್ತಾರೆ. ಪಾಪ ರೈತ ಯಾವನಾದರೂ 50 ಕ್ವಿಂಟಾಲ್ ತಗೊಂಡುಹೋದರೆ ಅವನನ್ನು ಆಚೆ ಕಳಿಸುತ್ತಾರೆ. ಯಾವನಾದರೂ ಒಬ್ಬ ವರ್ತಕ ಇನ್‌ಫ್ಲುಯೆನ್ಸಿಯಲಾಗಿ ಇರುವವನು ಹೋದರೆ ಅವನನ್ನು ಒಳಕ್ಕೆ ತಗೊಳ್ಳುತ್ತಾರೆ. ಇಂಥ ಕಾರುಬಾರು ಅಲ್ಲಿ ನಡೆಯುತ್ತದೆ. ಸಚಿವರು ಇದರ ಬಗ್ಗೆ ಗಮನಕೊಡಬೇಕು. ಎರಡನೆಯದು, ಈಗಾಗಲೇ ಪಾಪಣ್ಣನವರು ಹುಣಸೂರಿನಲ್ಲಿ ಒಂದು ಮಾಡಬೇಕೆಂತ ಹೇಳಿದರು. ಅದು ಬಹಳ ಅವಶ್ಯಕ ಇದೆ. ಹುಣಸೂರಿನ ಟಿಬೆಟಿಯನ್ ಕಾಲೋನಿಗಳಿಂದ ಬಹಳಷ್ಟು ಜೋಳ ಬರುತ್ತಿದೆ. ಮತ್ತು ಪಿರಿಯಾಪಟ್ಟಣದಲ್ಲಿ ಇನ್ನೂ ಎರಡು ಕೇಂದ್ರ ತೆರೆಯಬೇಕು. ಈಗಿರುವ ಒಂದು ಕೇಂದ್ರದಿಂದ 15 ದಿವಸದಿಂದ 400-500 ಕ್ವಿಂಟಾಲ್ ತೆಗೆದುಕೊಳ್ಳಲು ಆಗಿಲ್ಲ. ಇದರ ಬಗ್ಗೆ ಸಚಿವರು ವರದಿ ತರಿಸಿಕೊಂಡು ಇಲಾಖೆಯ ಇಬ್ಬರು ಆಫೀಸರನ್ನು ಹಾಕಿ ಏನು ಸವಲತ್ತು ಕೊಟ್ಟಿದ್ದಾರೆ ಅದು ಸದುಪಯೋಗವಾಗುವ ಹಾಗೆ ಮಾಡಬೇಕೆಂದು ಸರ್ಕಾರದಲ್ಲಿ ನಾನು ಮನವಿಮಾಡಿಕೊಳ್ಳುತ್ತೇನೆ. ಇದಾದ ಮೇಲೆ ಕಬ್ಬಿನದು. ಕಳೆದ ಮಾರ್ಚ್ ಅಧಿವೇಶನದಲ್ಲಿ ನಮ್ಮ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆಯು ರೈತರಿಗೆ 6 ಕೋಟಿ ರೂಪಾಯಿಗಳನ್ನು ಒಂದು ವರ್ಷದಿಂದ ದುಡ್ಡು ಕೊಟ್ಟಿಲ್ಲ. ಆಮೇಲೆ ಸರ್ಕಾರ ಆ 6 ಕೋಟಿಗೆ ಗ್ಯಾರಂಟಿ ನೀಡಿ ಅವರಿಗೆ ಹಣ ಕೊಡುವಂತಹ ಒಂದು ವ್ಯವಸ್ಥೆ ಮಾಡಿತ್ತು. ಆದರೆ ಇದುವರೆಗೂ ಆ ವ್ಯವಸ್ಥೆ ಪೂರ್ತಿಯಾಗಿಲ್ಲ. ಇನ್ನೂ ರೈತರಿಗೆ ಒಂದೂವರೆ ಎರಡು ಕೋಟಿಯಷ್ಟು ಹಳೇ ಸಾಲ ಬಾಕಿಯಿದೆ. ಹೊಸದಾಗಿ ಜೂನ್‌ನಿಂದ ಅರೆದಿರುವ ರೈತರಿಗೂ ಸುಮಾರು ಎರಡೂವರೆಯಿಂದ ಮೂರು ಕೋಟಿ ಬಾಕಿ ಇದೆ. ರೈತ ಕಂಗಾಲಾಗಿದ್ದಾನೆ. ತಲಾ ರೈತನಿಗೆ 100-200 ರೂಪಾಯಿ ಕ್ವಿಂಟಾಲಿಗೆ ಕೊಟ್ಟಿದ್ದು ಬಿಟ್ಟರೆ ಒಬ್ಬ ರೈತನಿಗೂ ಒಂದು ನಯಾಪೈಸೆ ಸಿಕ್ಕಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಪಿರಿಯಾಪಟ್ಟಣ ಎಪಿಎಂಸಿಯಲ್ಲಿ 8610 ಕ್ವಿಂಟಾಲ್ ನಿನ್ನೆವರೆಗೆ ಸಂಗ್ರಹವಾಗಿದೆ.

ಶ್ರೀ ಎಚ್.ಎಸ್. ಬಸವರಾಜು :— ಒಂದು ದಿವಸಕ್ಕೆ 100ರಿಂದ 200 ಕ್ವಿಂಟಾಲ್ ಅಂದರೆ ಒಂದೆರಡು ಲೋಡ್ ಮೇಲೆ ತೆಗೆದುಕೊಳ್ಳಲಾಗಿಲ್ಲ.

ಶ್ರೀ ಎ. ಪಾಪಣ್ಣ (ಹುಣಸೂರು) :— ಹುಣಸೂರಿನಲ್ಲಿ 6 ಸಾವಿರ ಹೆಕ್ಟೇರ್ ಮೆಕ್ಕೆಜೋಳವಿದೆ. ಆದ್ದರಿಂದ ಹುಣಸೂರಿನಲ್ಲಿ ಒಂದು ಸಂಗ್ರಹಣಾಕೇಂದ್ರ ದಯಮಾಡಿ ತೆರೆಯಬೇಕು.

ಶ್ರೀ ಹೆಚ್.ಸಿ. ಬಸವರಾಜು :— ಮಾನ್ಯ ಸಚಿವರು ತಿಳಿಸಿದಂತೆ 15 ದಿವಸಕ್ಕೆ 80 ಲೋಡ್ ಬಂದಿದೆ ಒಂದು ದಿವಸಕ್ಕೆ ಅರೈವಲ್ ಕನಿಷ್ಠ 20ರಿಂದ 25 ಲೋಡ್ ಜೋಳ ಬರುತ್ತದೆ. ಕನಿಷ್ಠ 10-15 ಲೋಡುಗಳನ್ನಾದರೂ ಜೋಳ ಇವರು ತೆಗೆದುಕೊಳ್ಳಬೇಕು. ಇನ್ನು ಕಬ್ಬಿನ ರೈತರಿಗೆ ಸರ್ಕಾರ ಏನು ಮಾತು ಕೊಟ್ಟಿದೆ ಅದರಂತೆ ನಡೆದುಕೊಳ್ಳಬೇಕು. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಇನ್ನೂ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸಾಲವನ್ನು ಕೊಟ್ಟಿಲ್ಲ. ದಯಮಾಡಿ ಸರ್ಕಾರ ತಕ್ಷಣ ಇವರ ಬಗ್ಗೆ ಕ್ರಮ ತೆಗೆದುಕೊಂಡು ಸಂಬಂಧಪಟ್ಟ ರೈತರಿಗೆ ಹಣ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತೆಂಗಿನ ಬಗ್ಗೆ ಈಗಾಗಲೇ ಬಹಳಷ್ಟು ಜನ ಮಾತನಾಡಿದ್ದಾರೆ. ತೆಂಗಿನಕಾಯಿ ಬೆಲೆ ನಿಂಬೆಕಾಯಿಗಿಂತ ಕಡಿಮೆಯಾಗಿಹೋಗಿದೆ. ಮಾರ್ಕೆಟ್‌ನಲ್ಲಿ ಒಂದು ನಿಂಬೆಗೆ ಎರಡು ರೂಪಾಯಿ ಹೇಳುತ್ತಾರೆ, ಆದರೆ ತೆಂಗಿನಕಾಯಿಗೆ ಎರಡು ರೂಪಾಯಿ ಸಿಗುವುದೂ ಕಷ್ಟವಾಗಿಹೋಗಿದೆ. ಇಂಥ ದುರ್ಗತಿ ತೆಂಗಿಗೆ ಬಂದಿರುವುದು ಬಹಳ ಶೋಚನೀಯ. ಸರ್ಕಾರ ತೆಂಗಿಗೆ ಬೆಂಬಲ ಬೆಲೆ ಕೊಡಲು ಆಗುವುದಿಲ್ಲವೆಂದು ಉತ್ತರ ಕೊಟ್ಟಾಗ ನನಗೆ ಬಹಳ ಬೇಜಾರಾಯಿತು, ಏನು ಸರ್ಕಾರ ಇಷ್ಟೊಂದು ನಿರ್ವೀರ್ಯವಾಗಿ ಹೋಯಿತಲ್ಲ ಇಷ್ಟೊಂದು ಅಸಹಾಯಕತೆ ವ್ಯಕ್ತಪಡಿಸುತ್ತಿದೆಯಲ್ಲ ಅಂತ ನನಗೆ ಬಹಳ ಆಶ್ಚರ್ಯವಾಯಿತು. ರೈತರಿಗೋಸ್ಕರ ಇವತ್ತು ನೂರಲ್ಲ ಸಾವಿರ ಕೋಟಿ ಖರ್ಚಾಗಲಿ ಬಿಡಿ. ಸರ್ಕಾರವೇನೂ ಪಾಪರ್ ಎದ್ದುಹೋಗುವುದಿಲ್ಲ. ರೈತನಿಗೆ ಕೊಟ್ಟಿದ್ದು ವಾಪಸ್ ಬಂದೇ ಬರುತ್ತದೆ. ಅವನು ಅನ್ನದಾತ. ದಯಮಾಡಿ ಅದಕ್ಕೂ ಒಂದು ಬೆಂಬಲ ಬೆಲೆ ಫಿಕ್ಸ್ ಮಾಡಿ. ಅದಕ್ಕಾಗಿ ಒಂದು ಸದನ ಸಮಿತಿ ಮಾಡಿ. ಟೆಕ್ನಿಕಲ್ ಕಮಿಟಿ ಮೂಲಕ ಅದನ್ನು ಮಾಡಬೇಕೇ ವಿನಾ ಅದಕ್ಕೆ ಐಎಎಸ್ ಅಧಿಕಾರಿಗಳನ್ನು ನೇಮಿಸಬೇಡಿ. ಅವರಿಗೆ ರಾಗಿ ಮರನೋ ಗಿಡನೋ ಅಂತ ಗೊತ್ತಾಗುವುದಿಲ್ಲ. ಅಂಥವರನ್ನು ಬೆಂಬಲ ಬೆಲೆ ಸಮಿತಿಗೆ ಹಾಕಿದರೆ ಉತ್ಪತ್ತಿಗಿಂತ ಕಮ್ಮಿ ಬೆಲೆಗೆ ಮಾಡುತ್ತಾರೆ ರೈತರೆಲ್ಲ ಹಾಳಾಗುತ್ತಾರೆ. ಆದ್ದರಿಂದ ದಯಮಾಡಿ ಎಲ್ಲಕ್ಕೂ ಬೆಂಬಲ ಬೆಲೆ ಮಾಡಬೇಕು. ಹೆಚ್ಚಿನ ರೀತಿಯಲ್ಲಿ ಕೊಡಬೇಕೆಂದು ಕೇಳುತ್ತಾ ಇನ್ನು ಎಪಿಎಂಸಿ ಬಗ್ಗೆ ಒಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ, ಅಧ್ಯಕ್ಷರೇ. ಪಿರಿಯಾಪಟ್ಟಣದಲ್ಲಿ ಎಪಿಎಂಸಿಗೆ ಎರಡು ವರ್ಷವಾಗಿದ್ದರೂ ಇನ್ನೂ ಕಾರ್ಯಾರಂಭ ಮಾಡಿಲ್ಲ. ಅನೇಕ ರೈತರು ತಮ್ಮ ಪದಾರ್ಥಗಳನ್ನು ಮಧ್ಯವರ್ತಿಗಳಿಗೆ ಆರಕ್ಕೆ ಮೂರಕ್ಕೆ ಕೊಡುತ್ತಿದ್ದಾರೆ. ಪಿರಿಯಾಪಟ್ಟಣದ ಎಪಿಎಂಸಿಯಲ್ಲಿ ಗೋಡೋನ್‌ಗಳಾಗಿದ್ದು ಅವು ಖಾಲಿಯಿವೆ, ಅವುಗಳಲ್ಲಿ ಜೋಳ ಒಯ್ದು ಇಡುತ್ತೇವೆಂದು ರೈತರು ಹೇಳಿದರೂ ಉಪಯೋಗವಿಲ್ಲ. ವರ್ತಕರು ಮಡಗಿಕೊಳ್ಳಬಹುದಂತೆ, ರೈತರು ಮಡಗಿಕೊಳ್ಳುವಹಾಗಿಲ್ಲವಂತೆ. ಈ ಕಾನೂನನ್ನು ಸ್ವಲ್ಪ ಬದಲಾಯಿಸಿಕೊಂಡು ರೈತರೂ ತಾವು ಬೆಳೆದ ಬೆಳೆಗೆ ಬೆಲೆ ಕುಸಿತವಾದಾಗ ಅದನ್ನು ಸ್ಟೋರ್ ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಡಬೇಕು. ಎರಡನೆಯದಾಗಿ ನಮ್ಮ ಅಲ್ಲಂ ವೀರಭದ್ರಪ್ಪನವರಿಗೆ, ತೋಟಗಾರಿಕೆ ಬೆಳೆಗಳೇನು ಕಮ್ಮಿಯಾಗಿದೆ ಅದಕ್ಕೋಸ್ಕರ

ಪ್ರತಿ ತಾಲ್ಲೂಕಿನಲ್ಲೂ ಒಂದು ಕನಿಷ್ಠ ಕೋಲ್ಡ್ ಸ್ಟೋರೇಜ್ ಸಿಸ್ಟಮನ್ನು ತೆರೆಯಲು ತಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಅವರಲ್ಲಿ ಮನವಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

+ಶ್ರೀ ಎಸ್.ಎಸ್. ಪುಟ್ಟರಂಗನಾಥ್ (ಬೇಲೂರು) :— ಅಧ್ಯಕ್ಷರೇ, ಎಲ್ಲ ಶಾಸಕರೂ ರೈತರ ಬೆಲೆ ಬೆಳೆಯುತ್ತಿದ್ದ ಬಗ್ಗೆ ಮಾತನಾಡಿದ್ದಾರೆ. ನಾನು ಮಲೆನಾಡು ಭಾಗದಿಂದ ಬಂದವನು. ತಾವೂ ಕೂಡ ಆಲೂಗಡ್ಡೆ ಬೆಳೆ ತರಬೇತಿ ಇರುವವರು. ಹಿಂದೆ ಆಲೂಗಡ್ಡೆ ಬೀಜವನ್ನು ಕೋಲಾರ ಜಿಲ್ಲೆಯಿಂದ ಕೊಳ್ಳುತ್ತಿದ್ದೆವು. ಈಗ ಬೀಜವನ್ನು ಪಂಜಾಬಿನಿಂದ ಕೊಳ್ಳುತ್ತಿದ್ದೇವೆ. ಈಗ ಬೀಜದ ದರ ಬಹಳಷ್ಟು ಜಾಸ್ತಿಯಾಗಿದೆ. ಈ ವರ್ಷ ಆಲೂಗಡ್ಡೆ ಬೆಳೆದವರ ಮನೆಯಲ್ಲ ಹಾಳಾಗಿಹೋದವು. ಕಳೆದ ಮೂರು ವರ್ಷದಿಂದಲೂ ಸರಿಯಾದ ಬೆಲೆ ಸಿಕ್ಕದೆ ಮಳೆ ಜಾಸ್ತಿಯಾಗಿದ್ದು ಒಂದು ಕಡೆಯಾದರೆ ಬೆಲೆ ಬಿದ್ದುಹೋಗಿದ್ದು ಇನ್ನೊಂದು ಕಡೆ. ಹೀಗಾಗಿ ಈ ಬೆಳೆ ಜೂಜಿನ ಬೆಳೆಯಾಗಿ ಪರಿಣಮಿಸಿದೆ. ನಮ್ಮ ತಾಲ್ಲೂಕಿನಲ್ಲಿ ಅರ್ಧ ಭಾಗ ಕಾಫಿ, ಏಲಕ್ಕಿ, ಮೆಣಸು ಬೆಳೆಯುತ್ತಾರೆ. ಇನ್ನರ್ಧ ಭಾಗದಲ್ಲಿ ಆಲೂಗಡ್ಡೆ ಹತ್ತಿ ಬೆಳೆಯುತ್ತಾರೆ. ಹೀಗಾಗಿ ರೈತ ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಕ್ಕದೆ ಅವ ತತ್ತರಿಸಿಹೋಗಿದ್ದಾನೆ. ಸ್ವಾಮಿ, ಆಲೂಗಡ್ಡೆ ಬೆಳೆಯುವುದು ತಮಗೆ ಗೊತ್ತಿದೆ: ಒಂದು ಎಕರೆಯಲ್ಲಿ ಆಲೂಗಡ್ಡೆ ಬೆಳೆಯಲು ಕನಿಷ್ಠ ಅವನು 10 ಸಾವಿರ ಖರ್ಚು ಮಾಡಬೇಕು. ಏಕೆಂದರೆ ನಾನೂ ಕೂಡ ಬೆಳೆಗಾರ. ಒಂದು ಎಕರೆಗೆ ನಾಲ್ಕು ಕ್ವಿಂಟಾಲ್ ಆಲೂಬೀಜ ಬೇಕು. ತಲಾ ಕ್ವಿಂಟಾಲ್ ಬೀಜದ ಬೆಲೆ 700 ರೂಪಾಯಿ. ಅದು 2800 ರೂಪಾಯಿ ಆಯಿತು. ಗೊಬ್ಬರ -1476 ರೂಪಾಯಿ. ಉಳುಮೆ 1000 ರೂಪಾಯಿ ನಾಟಿಗೆ 500 ರೂಪಾಯಿ ಕಳೆ ತೆಗೆಯಲು 500 ರೂಪಾಯಿ, ಮಧ್ಯಂತರ ಬೇಸಾಯಕ್ಕೆ 200 ರೂಪಾಯಿ. ಹಾಗೇ ಎರಡನೇ ರೌಂಡ್ ಕೊಡುವ ಯೂರಿಯಾಕ್ಕೆ 210 ರೂಪಾಯಿ. ಗೆಡ್ಡೆ ತೆಗೆಯಲು 500 ರೂಪಾಯಿ ಖಾಲಿ ಚೀಲ 600 ರೂಪಾಯಿ ಹಮಾಲಿ 400 ರೂಪಾಯಿ, ಸಾಗಾಣಿಕೆ ವೆಚ್ಚ 2000 ರೂಪಾಯಿ. ಇವೆಲ್ಲ ಸೇರಿ 10 ಸಾವಿರ ಚಿಲ್ಲರೆ ಆಗುತ್ತದೆ. ಆದರಿಂದ 20 ಚೀಲ ಬಂದರೂ ಆಯಿತು, 10 ಚೀಲ ಬಂದರೂ ಆಯಿತು. ಈ ವರ್ಷ ಹೆಚ್ಚಿಗೆ ಮಳೆ ಬಿದ್ದುದರಿಂದ ನಮ್ಮ ಭಾಗದಲ್ಲಿ ಆಲೂಗಡ್ಡೆ ಸಂಪೂರ್ಣ ಹಾಳಾಯಿತು. ಈ ಸಾರಿ ಬಿದ್ದ ಮಳೆ ನಾವು ಕಂಡಂತೆ ನಾವೆಲ್ಲ ಎಂದೂ ನೋಡಿರಲಿಲ್ಲ. ಒಂದೇ ದಿವಸ 37 ಸೆಂಟಿಮೀಟರ್‌ನಷ್ಟು ಮಳೆಯಾಯಿತು. 6 ಕೆರೆಗಳು ಒಡೆದುಹೋದವು. ಹೀಗಾಗಿ ಆಲೂಗಡ್ಡೆ ಹೊಲದಲ್ಲಿ ನೀರು ನಿಂತುಕೊಂಡು ಸಾಕಷ್ಟು ನಷ್ಟವಾಯಿತು. ನನ್ನ ಕ್ಷೇತ್ರದಲ್ಲಿ ಒಬ್ಬ ರೈತ ಆಲೂಗಡ್ಡೆ ಬೆಳೆದವನು ಪ್ರಾಣ ಕಳೆದುಕೊಂಡ. ವಿಷ ಕುಡಿದು ಸತ್ತುಹೋದ. ಅವನಿಗೆ ನಾಲ್ಕು ಸಣ್ಣ ಮಕ್ಕಳಿವೆ. ಅವನ ಮನೆ ಸ್ಥಿತಿ ಚಿಂತಾಜನಕವಾಗಿದೆ. ಹೀಗಾಗಿ ಏನಾಗಿದೆ ಎಂದರೆ ಈಗ ಹತ್ತಿ ಬೆಲೆ ಬಿದ್ದುಹೋಯಿತು, ತೊಗರಿ ಬೆಲೆ ಬಿದ್ದುಹೋಯಿತು ಎಂದು ಹೇಳಿ ರೈತ ಎಲ್ಲಾ ಕಡೆ

ಮಾರ್ಗದರ್ಶನವನ್ನು ಮಾಡಿಬಿಟ್ಟ. ವಿಷ ಕುಡಿದರೂ ಪರಿಹಾರ ಸಿಗಲಿಲ್ಲ. ಹಾಗಾಗಿ ನಮ್ಮಲ್ಲಿಯೂ ಕೂಡ ಒಬ್ಬನು ವಿಷವನ್ನು ಸೇವಿಸಿ ಸತ್ತುಹೋದ. ಇದುವರೆಗೂ ಆ ಕುಟುಂಬದವರಿಗೆ ಯಾವುದೇ ಪರಿಹಾರವನ್ನು ಕೊಟ್ಟಿಲ್ಲ. ನೀವೇನು ಅಲ್ಲಿ ಪರಿಹಾರವನ್ನು ಕೊಟ್ಟಿದ್ದೀರಿ, ಅದೇ ಪರಿಹಾರವನ್ನು ಇವನಿಗೂ ಕೂಡ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಆಲೂಗಡ್ಡೆ ಬೆಳೆದ ರೈತನ ಸ್ಥಿತಿ ಏನಾಗಿದೆ ಎಂದರೆ ಮೊನ್ನೆ ಯಾರೋ ಇಲ್ಲಿ ಸಪ್ಲೈ ಅಂಡ್ ಡಿಮ್ಯಾಂಡ್ ಬಗ್ಗೆ ಹೇಳುತ್ತಿದ್ದರು, ಸಪ್ಲೈ ಜಾಸ್ತಿಯಾದಾಗ ಅದರ ಡಿಮ್ಯಾಂಡ್ ಕಡಿಮೆಯಾಗುತ್ತದೆ, ನಿಜ. ಒಪ್ಪಿಕೊಳ್ಳುತ್ತೇನೆ. ಎಷ್ಟು ವರ್ಷದಿಂದ ಆಲೂಗಡ್ಡೆಯನ್ನು ಬೆಳೆಯುತ್ತಿದ್ದಾರೆ? ಈ ರೀತಿ ಎಷ್ಟು ವರ್ಷದಿಂದ ಅವರು ಪರಿತಾಪಪಡುತ್ತಿದ್ದನ್ನು ನೋಡಿದ್ದೀರಿ? ಆದರೆ ಇದಕ್ಕೇನಾದರೂ ಪರಿಹಾರವನ್ನು ಕಂಡುಹಿಡಿದಿದ್ದೀರಾ? ಕಂಡುಹಿಡಿದಿಲ್ಲ. ಪಂಜಾಬಿಗೆ ಹೋದಾಗ ಅನೇಕ ಜನ ದೊಡ್ಡ ದೊಡ್ಡ ರೈತರುಗಳು ಅಲ್ಲಿ ಸ್ವಂತವಾಗಿ ಶೀತಲಾಗಾರಗಳನ್ನು ಮಾಡಿದ್ದಾರೆ. ಅವರು ಹತ್ತು, ಇಪ್ಪತ್ತು ಸಾವಿರ ಕ್ವಿಂಟಾಲ್ ಹೀಗೆ ಅವರ ಕೆಪಾಸಿಟಿಗೆ ಅನುಗುಣವಾಗಿ ಅಲ್ಲಿ ಶೀತಲಾಗಾರಗಳನ್ನು ಕಟ್ಟಿಕೊಂಡಿದ್ದಾರೆ. ಕೊನೆಯ ಪಕ್ಷ ನಮ್ಮಲ್ಲಿ ದೊಡ್ಡ ರೈತರು ಇಲ್ಲದೇ ಹೋದರೂ ಕೂಡ ಸಣ್ಣ ರೈತರು ಬೆಳೆದಂಥ ಬೆಳೆಗೆ ನೀವು ಬೆಂಬಲ ಬೆಲೆಯನ್ನು ಕೊಡುವುದಕ್ಕಾಗದಿದ್ದರೂ ಕೂಡ ಅವುಗಳನ್ನು ಶೇಖರಿಸಿ ಇಡುವ ವ್ಯವಸ್ಥೆಯನ್ನಾದರೂ ಮಾಡಿದ್ದೀರಾ? ಅದನ್ನೂ ಮಾಡಲಿಲ್ಲ. ಎಷ್ಟು ವರ್ಷದಿಂದ ಹೇಳುತ್ತಿದ್ದೀರಿ? ಆದರೆ ಶೀತಲಗೃಹಗಳನ್ನು ಕಟ್ಟಿ ಆಯಾ ತಾಲ್ಲೂಕುಗಳಲ್ಲಿ ಬರುವ ಹೆಚ್ಚುವರಿ ಆಲೂಗಡ್ಡೆಯನ್ನು ಶೇಖರಣೆ ಮಾಡುವುದರಿಂದ ಬೆಲೆಯನ್ನು ನಿಯಂತ್ರಣ ಮಾಡಬಹುದು ಎಂದು ನಮಗೆಲ್ಲರಿಗೂ ಗೊತ್ತಿರುವ ವಿಚಾರ. ಆದರೂ ಕೂಡ ಇದನ್ನು ನಿಯಂತ್ರಣ ಮಾಡುವುದಕ್ಕೆ ತಾವೇನು ಸಕ್ರಿಯವಾದಂಥ ಒಂದು ಪ್ರಯತ್ನವನ್ನು ನಡೆಸಲಿಲ್ಲ ಎನ್ನುವ ಒಂದು ಆಪಾದನೆಯನ್ನು ನಾನು ಮಾಡುತ್ತೇನೆ. ಆಲೂಗಡ್ಡೆ ಬೆಳೆಗೆ ಖಾಯಿಲೆ ಬಂದಾಗ ಔಷಧಿಯನ್ನು ಸಿಂಪಡಿಸಬೇಕಲ್ಲ, ಆಗ ಸುಮಾರು ಜನರು ಸತ್ತು ಹೋಗಿದ್ದಾರೆ. ಅದೇನೂ ಬೆಳಕಿಗೆ ಬಂದಿಲ್ಲ. ಇದು ಒಂದು ರಾತ್ರಿಯಲ್ಲಿ ಸುಮಾರು ಒಂದು ಎಕರೆಯಲ್ಲಿ ಒಂದು ಗಿಡ ಕಾಣಿಸಿಕೊಂಡರೆ ಬೆಳಕು ಹರಿಯುವ ಹೊತ್ತಿಗೆ ಇದು ಇಡೀ ಏರಿಯಾವನ್ನೆಲ್ಲಾ ಆವರಿಸಿಕೊಳ್ಳುವಂಥ ಖಾಯಿಲೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಸುಮಾರು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಬೆಳೆ ನಷ್ಟವಾಗುತ್ತದೆ. ಅತೀವೃಷ್ಟಿಯಾದಾಗ, ಮಳೆ ಬಂದಾಗಲೂ ನಷ್ಟವಾಗುತ್ತದೆ. ಮತ್ತೆ ಖಾಯಿಲೆ ಬಂದಾಗಲೂ ರೈತರು ನಷ್ಟವನ್ನು ಅನುಭವಿಸುತ್ತಾರೆ. ಹಾಗಾಗಿ ಮೂರ್ನಾಲ್ಕು ವರ್ಷದಲ್ಲಿ ಒಂದು ಕ್ವಿಂಟಲ್ ಆಲೂಗಡ್ಡೆಯ ಬೆಲೆ ಒಂದು ಸಾವಿರ ರೂಪಾಯಿಗಳಾಯಿತು. ಹಾಗಾಗಿ ಬೆಳೆ ಕಡಿಮೆಯಾಯಿತು. ಸ್ವಾಮಿ, ನನಗೊಂದು ಮಾಹಿತಿಯನ್ನು ಕೊಡುತ್ತೀರಾ, ಎಷ್ಟು ಸಾವಿರ ಕ್ವಿಂಟಾಲ್ ಬಿತ್ತನೆ ಆಗಿದೆ, ಎಷ್ಟು ಇಳುವರಿ ಬಂದಿದೆ ಎಂದು ತಾವು ಮಾಹಿತಿಯನ್ನು ಕೊಡುವುದಕ್ಕೆ ಸಾಧ್ಯವೇ? ಇಲ್ಲ. ನಿಮ್ಮಲ್ಲಿ ಮಾಹಿತಿ ಇಲ್ಲ. ಮಾಹಿತಿ

ಏಕೆ ಇಟ್ಟಿದ್ದೇನೆಂದರೆ ಇದನ್ನು ತೋಟಗಾರಿಕೆ ಇಲಾಖೆಯವರು ಕೂಡ ನಮ್ಮದು ಎಂದು ಹೇಳುವ ಹಾಗೆ ಇಲ್ಲ. ಕೃಷಿ ಇಲಾಖೆಯವರೂ ಕೂಡ ಇದನ್ನು ನಮ್ಮದು ಎಂದು ಹೇಳಿ ವಹಿಸಿಕೊಳ್ಳುವ ಹಾಗೆ ಇಲ್ಲ. ಹೀಗಾಗಿ ಈ ಬೆಳೆ ಬಗ್ಗೆ ಯಾರೂ ಕೂಡ ಯೋಚನೆ ಮಾಡಿಲ್ಲ. ತರಕಾರಿ ಇಲ್ಲದಂತಹ ಕಾಲದಲ್ಲಿ ಇದನ್ನು ತರಕಾರಿಯಾಗಿ ಬಳಸುವುದಕ್ಕೆ ಒಂದು ವಿಧಾನ ಇದೆ. ಹಾಗಾಗಿ ಇದು ಬೇಗ ಕೆಟ್ಟುಹೋಗತಕ್ಕಂಥದ್ದು ಅಲ್ಲ. ಇದನ್ನು ಸರಿಯಾದ ರೀತಿಯಲ್ಲಿ ಇಟ್ಟರೆ ಆರು ತಿಂಗಳು ಕಾಲ ಇಡಬಹುದು. ಈ ಬೆಳೆ ಈ ಭಾಗದಲ್ಲಿ ಏನು ಮಳೆಯನ್ನಾಧರಿಸಿ ವ್ಯವಸಾಯವನ್ನು ರೈತರು ಮಾಡುತ್ತಾರೆ, ಅವರಿಗೆ ಇದು ದುಡ್ಡಿನ ಬೆಳೆ. ನಮ್ಮಲ್ಲಿ, ದುಡ್ಡಿನ ಬೆಳೆಯೆಂದರೆ ಆಲೂಗಡ್ಡೆ ಬೆಳೆ. ಆಲೂಗಡ್ಡೆ ಬಿಟ್ಟರೆ ಕಷ್ಟ. ಹಾಗೆ ಇನ್ನೊಂದು ಕಡೆಯಲ್ಲಿ ಕಾಫಿ, ಏಲಕ್ಕಿ, ಇವುಗಳನ್ನು ಬೆಳೆಯುತ್ತಾರೆ. ಈ ವರ್ಷ ಮೆಣಸಿನ ಬೆಳೆ ಕೂಡ, 25 ಸಾವಿರ ರೂಪಾಯಿ ಕ್ವಿಂಟಾಲ್‌ಗೆ ಇದ್ದ ಮೆಣಸು ಇವತ್ತು ಎಂಟು ಸಾವಿರ ರೂಪಾಯಿಗೆ ಬಂದು 80 ರೂಪಾಯಿ ಕೆಜಿ. ಮೆಣಸು ಸಿಗುತ್ತಿದೆ. ಕಾಫಿ ಬೆಳೆ ಕೂಡ ಬಿದ್ದು ಹೋಗಿದೆ. ಇವತ್ತು ಮಾರುಕಟ್ಟೆಯಲ್ಲಿ ಕಾಫಿಗೆ ಬೆಲೆ ಇಲ್ಲ. ಹಾಗಾಗಿ ಬಹುಶಃ ಇನ್ನೆರಡು ಇದೇ ಬೆಲೆ ಸರ್ಕಾರ ಮುಂದೆ ಬಂದು ಇದಕ್ಕೇನಾದರೂ ಚೈತನ್ಯ ಕೊಡದಿದ್ದರೆ ವಿದೇಶಿ ವಿನಿಮಯ ಕೂಡ ಹೋಗುತ್ತದೆ. ಇದನ್ನು ಜ್ಞಾಪಕ ಇಟ್ಟುಕೊಳ್ಳಬೇಕಾದುದು. ನಮಗೇನೂ ವಿದೇಶಿ ವಿನಿಮಯ ಬರುತ್ತಿದೆ, ಇದನ್ನು ಕೇಂದ್ರ ಸರ್ಕಾರದವರು ಸರಿಯಾದ ರೀತಿಯಲ್ಲಿ ಯೋಚನೆ ಮಾಡದಿದ್ದರೆ, ಇದಕ್ಕೆ ರಕ್ಷಣೆ ಕೊಡದೇ ಹೋದರೆ ಕಾಫಿ ಬೆಳೆ ಸಂಪೂರ್ಣವಾಗಿ ನಾಶವಾಗುತ್ತದೆ. ಏಕೆಂದರೆ ಇವತ್ತು ಇರುವ ಬೆಲೆಯನ್ನು ತೆಗೆದುಕೊಂಡರೆ 2600 ರಿಂದ 2800 ರೂಪಾಯಿ ಬೆಲೆ ಇದೆ. 50 ಕೆ.ಜಿ. ಕಾಫಿ ಬೆಳೆ ಇವತ್ತು 2600 ರೂಪಾಯಿಗೆ ಇಳಿದಿದೆ. 3000-3500 ರೂಪಾಯಿಗಳಿಗೆ ಬೆಲೆ ಕಡಿಮೆಯಾದರೆ ಈ ಬೆಳೆಯನ್ನೇ ಬೆಳೆಯುವುದಕ್ಕಾಗುವುದಿಲ್ಲ. ಅದಕ್ಕೆ ಔಷಧಿಯನ್ನು ಸಿಂಪಡಿಸುವುದಕ್ಕಾಗುವುದಿಲ್ಲ. ಒಂದು ವರ್ಷ ಔಷಧಿಯನ್ನು ಸಿಂಪಡಿಸದಿದ್ದರೆ ಇದಕ್ಕೆ ರೋಗ ಬಂದು ಈ ಗಿಡವೇ ನಾಶವಾಗುತ್ತದೆ. ಗಿಡ ನಾಶವಾದಮೇಲೆ ಮತ್ತೆ ಹತ್ತು ವರ್ಷಗಳ ಕಾಲ ಕಾಯಬೇಕು. ಮೆಣಸಿನ ಬಳ್ಳಿಗೂ ಕೂಡ ಕಾಯಿಲೆ ಬಂದು ಇವತ್ತು ಸಾಕಷ್ಟು ಕಡೆಗಳಲ್ಲಿ ಮೆಣಸಿನ ಬಳ್ಳಿ ಸುಟ್ಟುಹೋಗಿದೆ. ಅದಕ್ಕೆ ಸರಿಯಾದ ಔಷಧಿಯನ್ನು ನಿಮ್ಮ ಕೃಷಿ ಇಲಾಖೆಯಲ್ಲಾಗಲಿ, ತೋಟಗಾರಿಕೆ ಇಲಾಖೆಯಲ್ಲಾಗಲೀ ಯಾರೂ ಕೂಡ ಇದರ ಬಗ್ಗೆ ನಿಗಾವನ್ನು ತೆಗೆದುಕೊಂಡಿಲ್ಲ. ಇವತ್ತು ಮೆಣಸು ಕೂಡ ಹಾಳಾಗುತ್ತಿದೆ. ಅಡಿಕೆ ಬೆಳೆ ಕೂಡ ಇವತ್ತಿ ಬಿದ್ದುಹೋಗಿದೆ. ಹೀಗಾಗಿ ರೈತ ಕಂಗಾಲಾಗಿದ್ದಾನೆ. ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಹೇಳುತ್ತೇನೆ, ರೈತನಿಗೆ ಸರಿಯಾದ ಬೆಲೆ ಸಿಗಬೇಕಾದರೆ ಈ ಬೆಲೆಯನ್ನು ನಿಯಂತ್ರಣದಲ್ಲಿಡುವುದಕ್ಕೆ ಏನು ಸಹಕಾರವನ್ನು ಕೊಡಬೇಕೋ ಅದನ್ನು ಸರ್ಕಾರ ಕೊಡದಿದ್ದರೆ ಬಹುಶಃ ಈ ವ್ಯವಸಾಯ ಕ್ಷೇತ್ರ ಹಾಳಾಗುತ್ತದೆ. 80 ಪರ್ಸೆಂಟ್ ರೈತರು ಇರತಕ್ಕ ಈ ಕ್ಷೇತ್ರ ಬಹಳ ದೊಡ್ಡ ಕ್ಷೇತ್ರ. ಮಂತ್ರಿಗಳಿಗೆ ಇವತ್ತೇನಾಗಿದೆ ಎಂದರೆ

ಅವರಿಗೆ ಚರ್ಮ ದಪ್ಪವಾಗಿಬಿಟ್ಟಿದೆ. ಏನೂ ಹೇಳಿದರೂ ಒರಸ್ಸಿಕೊಳ್ಳುತ್ತಾರೆ. ಹೋಗಿಬಿಡ್ತಾರೆ. ರೈತ ಸಮೂಹ ದೊಡ್ಡದು. ಸಮುದ್ರಕ್ಕೆ ಉಪ್ಪು ಹಾಕುವುದಕ್ಕಾಗುತ್ತದೆಯೇ? ಖಾರವನ್ನು ಹಾಕುವುದಕ್ಕಾಗುತ್ತದೆಯೇ ಸಮುದ್ರಕ್ಕೆ? ಎನ್ನುವ ಒಂದು ಅಭಿಪ್ರಾಯ ಬಂದುಬಿಟ್ಟಿದೆ. ಯಾರು ಮಾತನಾಡಿದರೂ ಕೂಡ ಗ್ಯಾಟ್ ಎನ್ನುವ ಭೂತ ಜಾಸ್ತಿ ಆಗಿದೆ. ಹಾಗಾಗಿ ಈ ಗ್ಯಾಟ್ ಒಪ್ಪಂದದಿಂದ ನಮಗೆ ಈ ರೀತಿಯಾಗಿದೆ ಎಂದು ಬಹುತೇಕ ಜನ ಇದನ್ನು ಪ್ರಸ್ತಾಪಮಾಡಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಏನು ಆಹಾರ ಬೆಳೆಗಳನ್ನು ನಾವು ಹೊರ ದೇಶದಿಂದ ಇಂಪೋರ್ಟ್ ಮಾಡುವುದನ್ನು ತಡೆಯದೆ ಹೋದರೆ ರೈತರು ಖಂಡಿತವಾಗಿಯೂ ಉಳಿಯುವುದಿಲ್ಲ. ಅವನು ಸರ್ವನಾಶವಾಗುತ್ತಾನೆ. ಅನ್ನ ಕೊಡುವ ರೈತ ಸರ್ವನಾಶವಾದ ಮೇಲೆ ನಾವು ಕೂಡ ಸರ್ವನಾಶವಾಗುತ್ತೇವೆ ಎನ್ನುವುದನ್ನು ತಾವ್ಯಾರೂ ಮರೆಯಬಾರದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮಲ್ಲಿ ಮುಸುಕಿನ ಜೋಳ, ಈ ಅಲೂಗಡ್ಡೆಗೆ ರೇಟ್ ಹೋದ ಮೇಲೆ ಎರಡು-ಮೂರು ವರ್ಷಗಳಲ್ಲಿ ಈ ಮುಸುಕಿನ ಜೋಳವನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. ಈ ವರ್ಷ ಮಳೆ ಜಾಸ್ತಿಯಾಗಿ ಮುಸುಕಿನ ಜೋಳದ ಕಾಳು ಶೀತಕ್ಕೋಸ್ಕರ ಸ್ಟ್ರೈಕ್ ಕಡಿಮೆ ಬಂದಿದೆ. ಅದು ತಮಗೆಲ್ಲಾ ಗೊತ್ತಿರಬಹುದು. ಬೇಕಾದರೆ ನೀವು ಯಾರನ್ನಾದರೂ ಕೇಳಿ. ಮಳೆಗಾಲ ಜಾಸ್ತಿಯಾದಾಗ ಅದರ ಸ್ಟ್ರೈಕ್ ಕಡಿಮೆಯಾಗುತ್ತದೆ. ಶೀತಕ್ಕೆ ಕಾಳು ಸರಿಯಾದ ರೀತಿಯಲ್ಲಿ ಬರುವುದಿಲ್ಲ. ಹಾಗಾಗಿ ಸ್ವಲ್ಪ ಅಲ್ಲಲ್ಲಿ ಜೊಳ್ಳು ಕಾಳು ಬಂದಿರುತ್ತದೆ. ಹಾಗಾಗಿ ನಮ್ಮಲ್ಲಿ ಜೋಳ ಕೊಳ್ಳುತ್ತಿಲ್ಲ. ಆಲೂಗಡ್ಡೆ ಬೆಳೆದಿರುವವರು ಸಂಪೂರ್ಣವಾಗಿ ನಾಶವಾಗಿದ್ದಾರೆ. ಜೋಳ ಬೆಳೆದಿರುವವರೂ ಕೂಡ ಅವರೂ ನಾಶವಾಗುತ್ತಿದ್ದಾರೆ. ಮೊನ್ನೆ ಕೇಳಿದಾಗ ಯಾರೋ ಒಬ್ಬರು ಹೇಳಿದರು, ನಿಮ್ಮಲ್ಲಿ ಜೋಳ ಕೊಳ್ಳುವುದಕ್ಕಾಗುವುದಿಲ್ಲ. ನಿಮ್ಮ ಜೋಳ ಸರಿಯಾಗಿಲ್ಲವೆನ್ನುವ ಮಾತನ್ನು ಹೇಳಿದರು. ದೇವರು ಕೊಟ್ಟಿರುವುದು, ಏನೋ ಬಂದಿದೆ, ಅದನ್ನು ಕೊಂಡು ಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ. ಅದನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡದೆ ಹೋದರೆ ತುಂಬ ಕಷ್ಟವಾಗುತ್ತದೆ. ನಮ್ಮಲ್ಲೂ ಕೂಡ ಹತ್ತು ಸಾವಿರ ಕ್ವಿಂಟಾಲ್ ಮೇಲೆ ಜೋಳವಿದೆ. ಅದನ್ನು ಖರೀದಿ ಮಾಡಿಲ್ಲ. ಇದರ ಬೆಲೆ 300 ರೂಪಾಯಿಗೆ ಬಂದಿದೆ. ಹಾಗಾಗಿ ರೈತ ಕಂಗಾಲಾಗಿದ್ದಾನೆ. ರೈತ ಒಂದು ಸಾರಿ ಮೇಲಕ್ಕೆ ಎದ್ದರೆ ನೀವು ಅಡಗಿಸುವುದು ಕಷ್ಟವಾಗುತ್ತದೆ. ಹಿಂದೆ ಈಸೂರು ಪ್ರಕರಣದ ಬಗ್ಗೆ ಗೊತ್ತಲ್ಲ, ಕರ ನಿರಾಕರಣೆಯದು, ಹಾಗಾಗದರೆ ಈ ರೈತರನ್ನು ಅಡಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಾ ಕಡೆಯಲ್ಲಿ ಇವತ್ತೇನು ರೈತರುಗಳು ಮಾತನಾಡುತ್ತಾರೆ ಎಂದರೆ ಸರ್ಕಾರ ನಮ್ಮ ಸಂಕಷ್ಟದಲ್ಲಿ ಭಾಗಿಯಾಗುವುದಿಲ್ಲ. ನಮಗೆ ಇಂಥ ತೊಂದರೆ ಕೊಡುತ್ತಾರೆ, ಈಗ ಏನಾಗಿದೆ ಆರ್‌ಎಂಸಿ ಯಾರ್ಡ್‌ನಲ್ಲಿ ರೈತರು ತಂದ ಜೋಳವನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ ತಕ್ಷಣ ಖಾಸಗಿಯವರು ಬಿಸಿನೆಸ್ ಮಾಡುವವರು ಜೋಳವನ್ನು ಕೊಂಡುಕೊಳ್ಳುತ್ತಾರೆ. ಆ ಜೋಳವನ್ನು ಕೊಂಡುಕೊಂಡು ಆ ಯಾರ್ಡ್‌ನಲ್ಲೇ ಹಾಕುವುದು.

ರೈತ ಕೊಡುವ ಜೋಳವನ್ನು ವ್ಯಾಪಾರಸ್ಥರು ಕೊಂಡುಕೊಂಡು ಅಲ್ಲೇ ನಿಮ್ಮ ಮಾರ್ಕೆಟ್‌ನಲ್ಲಿ ಮಾರುತ್ತಾರೆ. ಇದು ಸರಿಯಾಗುತ್ತದೆಯೇ? ಆಗ ಜೋಳ ಸರಿಯಾಗಿಬಿಡುತ್ತದಾ? ಈ ರೀತಿ ವ್ಯವಸ್ಥೆಯಾಗುತ್ತಿದೆ, ನೋಡಿ. ಮಧ್ಯವರ್ತಿಗಳಿಂದ ರೈತರಿಗೆ ಸುಮಾರು ತೊಂದರೆಯಾಗುತ್ತಿದೆ. ಆರ್‌ಎಂಸಿ ಯಾರ್ಡ್‌ನಲ್ಲಿ ಆಗುವ ಅನ್ಯಾಯವನ್ನು ನೀವು ತಡೆಗಟ್ಟದೆ ಹೋದರೆ, ನಿಮ್ಮ ಸಿಬ್ಬಂದಿ ವರ್ಗದವರು ಅಲ್ಲಿ ಇಲ್ಲದೆ ಹೋದರೆ ರೈತರಿಗೆ ನ್ಯಾಯ ಸಿಗುವುದಿಲ್ಲ. ಆ ದೃಷ್ಟಿಯಲ್ಲಿ ತಾವು ದಯಮಾಡಿ ಈ ಜೋಳವನ್ನು ಕೊಂಡುಕೊಳ್ಳುವ ಬಗ್ಗೆ ಸೆಂಟರ್‌ಗಳನ್ನು ಏನು ಮಾಡಿದ್ದೀರಿ, ಆ ಸೆಂಟರ್‌ಗಳಲ್ಲಿ ನಿಮ್ಮ ಅಧಿಕಾರಿಗಳು ಇರಬೇಕಾಗುತ್ತದೆ. ನಮ್ಮಲ್ಲಿ ಒಂದು ಸಾರಿ ಏನಾಯಿತು ಎಂದರೆ ಅದು ಪತ್ರಿಕೆಗಳಲ್ಲಿ ಎಲ್ಲಾ ಬಂತು. ಏನಾದರೂ ಬೆಲೆ ಸಿಗುತ್ತೆ ಎಂದು ಹೇಳಿ ಮೆಣಸಿನಕಾಯಿಯನ್ನು ಸ್ವಲ್ಪ ಜಾಸ್ತಿ ಬೆಳೆದರು. ಒಂದೇ ದಿವಸದಲ್ಲಿ ಮೆಣಸಿನಕಾಯಿ ಬೆಳೆಯನ್ನು ಕುಯ್ದು ತಂದುದ್ದೆಲ್ಲಾ ಹಾಳಾಗಿ ಹೋಯಿತೆಂದು ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ಮಾತನಾಡುತ್ತಾ ಏನು ಹೇಳಿದ್ದಾರೆ, ಒಂದೇ ದಿವಸದಲ್ಲಿ ಕುಯ್ದುಕೊಂಡು ಹೋಗಬೇಕೆಂದು ರೈತರೆಲ್ಲಾ ಮಾತನಾಡಿಕೊಂಡರೇ? ವಿಚಾರ ಅದಲ್ಲ. ಬೆಳೆ ಜಾಸ್ತಿ ಪ್ರಮಾಣದಲ್ಲಿ ಬಂದುದ್ದರಿಂದ ಮಾರುಕಟ್ಟೆಗೆ ತೆಗೆದುಕೊಂಡು ಹೋದರು. ಮಧ್ಯವರ್ತಿಗಳು ಹೊರ ರಾಜ್ಯದಿಂದ ಇಲ್ಲಿನ ಮಾರುಕಟ್ಟೆಗೆ ಬಂದು ವ್ಯಾಪಾರ ಮಾಡದಂತೆ ನೋಡಿಕೊಳ್ಳಿ, ನಿಮ್ಮ ಕೃಷಿ ಉತ್ಪನ್ನಗಳನ್ನು ನಾವೇ ಕೊಂಡುಕೊಳ್ಳುತ್ತೇವೆಂಬ ರೀತಿಯಲ್ಲಿ ವ್ಯವಸ್ಥೆಯಾದಾಗ ಮಾರಾಟ ಮಾಡಲು ಮಾರುಕಟ್ಟೆಗೆ ತಂದಿದ್ದ ಮೆಣಸಿನಕಾಯಿ ಬೆಳೆಯನ್ನೆಲ್ಲಾ ರಸ್ತೆಯಲ್ಲಿ ಸುರಿದು ಪ್ರತಿಭಟಿಸಿದರು. ಮೂರು ದಿವಸಗಳ ಕಾಲ ನಾವು ರಸ್ತೆಯಲ್ಲಿ ಓಡಾಡುವುದಕ್ಕೆ ಸಾಧ್ಯವಾಗಲಿಲ್ಲ. ರೈತರಿಗೆ ಸಿಟ್ಟು ಬಂದಾಗ ಅವರು ಏನೇ ಮಾಡುವುದಕ್ಕೂ ಹೇಸುವುದಿಲ್ಲ. ರೈತರ ಕೃಷಿ ಉತ್ಪನ್ನಗಳ ಬೆಲೆಯನ್ನು ನಿಯಂತ್ರಿಸುವುದಕ್ಕೆ ನೀವು ಸರಿಯಾದ ವ್ಯವಸ್ಥೆ ಮಾಡದೇ ಹೋದರೆ ಸರ್ಕಾರಕ್ಕೆ ಅವರೇ ಮುಳುವಾಗುತ್ತಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಸನ್ಮಾನ್ಯ ಅಧ್ಯಕ್ಷರೆ, ನನ್ನದೇನೂ ಭಾಷಣವಲ್ಲ. ಕೆಲವು ಸಲಹೆಗಳನ್ನು ಸಭೆಯ ಮುಂದಿಡಬೇಕೆಂಬುದು ಅಪೇಕ್ಷೆಯಾಗಿದೆ. ಇವೊತ್ತು ಸದನದಲ್ಲಿ ರಾಜ್ಯದಲ್ಲಿ ಕೃಷಿ ಉತ್ಪನ್ನಗಳ ಬೆಲೆ ಕುಸಿತವಾಗಿರುವ ಕುರಿತು ಮಾತನಾಡಬೇಕೆಂದು ಇಚ್ಛಿಸಿ, ಶಾಸಕರ ಭವನದ ನನ್ನ ಕೊಠಡಿಯಿಂದ ಹೊರಬಂದ ಸಂದರ್ಭದಲ್ಲಿ ನನ್ನೆದುರಿಗೆ ಒಬ್ಬ ರೈತರು ಬಂದು, "ಏನ್ ಸ್ವಾಮಿ ಸದನದಲ್ಲಿ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಚರ್ಚೆಯಾಗುತ್ತಿದೆ, ನೀವು ಏನು ಮಾಡುತ್ತೀರಿ? ಸಮಸ್ಯೆಯನ್ನು ಎದುರಿಸುತ್ತೀರಾ? ನಿಮ್ಮಿಂದಾಗುತ್ತದೆಯೇ? ಎಂದಾಗ ನಾನು ಹೌದು, ಖಂಡಿತವಾಗಿಯೂ ಪ್ರಯತ್ನ ಮಾಡುತ್ತಿದ್ದೇವೆ, ಈ ವಿಚಾರದಲ್ಲಿ ಎಲ್ಲರೂ ಒಂದೇ ಅಭಿಪ್ರಾಯ ಹೊಂದಿದ್ದೇವೆ" ಎಂದು ಹೇಳಿದಾಗ ಆತ ಮಾರ್ಮಿಕವಾಗಿ ನುಡಿದ ಸಂಗತಿ

ಏನೆಂದರೆ, 'ಈ ದೇಶದಲ್ಲಿ ಬೆಲೆಗಳು ಮೇಲಕ್ಕೆ ಹೋಗಿದ್ದು ಕೆಳಗಡೆ ಬಂದಿಲ್ಲ, ಹಾಗೆಯೇ ಕೆಳಗಡೆ ಹೋಗಿದ್ದು ಮೇಲಕ್ಕೆ ಬಂದಿಲ್ಲ' ಎಂದ. ನಾವು ಈ ಸದನದಲ್ಲಿ ರೈತರ ಪರವಾಗಿ ಏನಾದರೂ ಮಾಡುತ್ತೇವೆಂದಾಗ ಅವರಿಗೂ ಕೂಡ ಖುಷಿ ಪಡುವಂಥ ಕೆಲವು ಅನುಮಾನಗಳು ಬಂದುಬಿಟ್ಟಿವೆ. ಇಲ್ಲಿ ನಾವು ಯೋಚನೆ ಮಾಡುವಂಥ ಕೆಲವು ವಿಚಾರಗಳನ್ನು ನಾನು ತಮ್ಮ ಮುಂದಿಡುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ಜಾತಿ, ಮತ, ಧರ್ಮ, ಕುಲ, ಭಾಷೆ ಮುಂತಾದ 108 ವೈಪರೀತ್ಯಗಳೇನಿವೆ, ಮತ್ತು ಇದರೊಂದಿಗೆ ಬೆಲೆ ಏರಿಕೆ, ಇಳಿತ ಎಂದೇನಿದೆ, ಇವೆಲ್ಲಾ ಮಾನವ ನಿರ್ಮಿತವೆಂದು ನಾನು ಹೇಳುತ್ತಿಲ್ಲ. ಅಮಾರ್ಕೆಸ್ ಎಂಬುವವನು ಹೇಳುತ್ತಾನೆ. ನನ್ನ ಬಳಿ ಅಮಾರ್ಕೆಸ್ ಬರೆದಿರುವ ಆರ್ಥಿಕ ಚಿಂತನೆ ಕುರಿತ ಪುಸ್ತಕವಿದ್ದು, ಮಾನ್ಯ ಸದಸ್ಯರಿಗೆ ಯಾವಾಗಲಾದರೂ ಬಿಡುವು ಸಿಕ್ಕಿದರೆ ಈ ಪುಸ್ತಕವನ್ನು ಓದಬಹುದು. ಪ್ರಪಂಚದಾದ್ಯಂತ ಬೆಲೆ ಏರಿಕೆ ಹೇಗಾಗುತ್ತದೆ? ಇಳಿತ ಹೇಗಾಗುತ್ತದೆ? ವ್ಯವಸ್ಥೆ ಹೇಗೆ ನಡೆಯುತ್ತದೆ? ಮುಂತಾದ ವಿಷಯಗಳನ್ನೆಲ್ಲಾ ವಿವರಿಸುತ್ತಾನೆ. ಅದರಲ್ಲೂ ವಿಶೇಷವಾಗಿ ಭಾರತದ ಬಗ್ಗೆ ಹೇಳುವುದೇನೆಂದರೆ, it is more a politically oriented-man made, ಇದು ಹೇಗೆಂದು ಆತ ಬಿಡಿಸಿ ಹೇಳುತ್ತಾನೆ. ಆದರೆ, ಒಂದು ಮಾತನ್ನು ನಾನು ಸಭೆಯ ಮುಂದಿಡಬಯಸುವುದೇನೆಂದರೆ, ರೈತ ಕಬ್ಬು ಬೆಳೆದಾಗ ಅಳುವಂಥ ಪರಿಸ್ಥಿತಿ ಬಂತು. ಅದೇ ರೀತಿ ಆಲೂಗಡ್ಡೆ, ಟೊಮ್ಯಾಟೋ ಬೆಳೆದಾಗಲೂ ಅತ್ತ. ಈಗ ತೆಂಗು ಬೆಳೆಗೂ ಅಳುವ ಸರದಿ ಬಂದಿದೆ. ನಾನೊಬ್ಬ ತೆಂಗು ಬೆಳೆಗಾರನಾಗಿ ಹೇಳುವುದೇನೆಂದರೆ, ತೆಂಗು ಬಗ್ಗೆ ಅದೊಂದು 'ಕಲ್ಪವೃಕ್ಷ'ವೆಂದು ತೋಟಗಾರಿಕೆ ಇಲಾಖೆಯವರು ನನಗೆ ಹೇಳಿದ್ದೇ ಹೇಳಿದ್ದು. ಆದರೆ, ಈಗ ಅದು ನಮಗೆಲ್ಲರಿಗೂ 'ಮರಣ ವೃಕ್ಷ'ವಾಗಿ ಪರಿಣಮಿಸಿದೆ! ನನ್ನನ್ನು ನೀನು ಏಳು ವರ್ಷ ಕಾಪಾಡು, ನಾನು ನಿನ್ನನ್ನು ನೂರು ವರ್ಷಗಳ ಕಾಲ ಕಾಪಾಡುತ್ತೇನೆ. ಎಂದು ಕಲ್ಪವೃಕ್ಷ ಹೇಳುತ್ತಿತ್ತಂತೆ. ಇವೊತ್ತು ಆ ಮಾತು ತಿರುಗುಮುರುಗಾಗಿದೆ. ಇಂತಹ ಪರಿಸ್ಥಿತಿ ಏಕೆ ಬಂತೆಂದು ನಾವೊಮ್ಮೆ ಚಿಂತನೆ ಹರಿಸಿದಾಗ it is all purely man-made problems. ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಸದನದಲ್ಲಿ ಸಕ್ಕರೆ ಸಚಿವರಾಗಿರುವ ಕೃಷ್ಣಪ್ಪನವರಿದ್ದು, 'ನಮ್ಮಲ್ಲಿ ಇಂತಿಷ್ಟು ಸಾವಿರ ಟನ್‌ಗಳಷ್ಟು ಸಕ್ಕರೆ ಸ್ಟಾಕ್ ಇರುವುದರಿಂದ, ನಮ್ಮ ದೇಶದಲ್ಲಿ ಸಕ್ಕರೆ ಕೊರತೆಯಿಲ್ಲ'ವೆಂದು ಮೊನ್ನೆ ದಿವಸ ಮಾತನಾಡುತ್ತಾ ಹೇಳಿದರು. ಆದರೂ ಸಹ ಸಕ್ಕರೆಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ಪರಿಸ್ಥಿತಿ ಹೀಗಿದ್ದರೂ ಸಹ ಸಕ್ಕರೆಯನ್ನು ಕೇಂದ್ರ ಸರ್ಕಾರ ಆಮದು ಮಾಡಿಕೊಳ್ಳುತ್ತಿದೆ ಎನ್ನುವ ಮಾತನ್ನೂ ಕೇಳಿದ್ದೇವೆ. ಇಂತಹ ಪರಿಸ್ಥಿತಿ ಏಕೆ? ಇದು ಮಾನವ ನಿರ್ಮಿತವಲ್ಲವೇ? ಸಕ್ಕರೆ ಸಾಕಷ್ಟು ದಾಸ್ತಾನು ಇದ್ದರೂ ಸಹ ರಾಜಕೀಯವಾಗಿ ಯೋಚನೆ ಮಾಡಿಕೊಂಡು ಇಲ್ಲಿನ ರೈತರನ್ನು ನಿಯಂತ್ರಿಸಬೇಕೆನ್ನುವ ವಿಚಾರದಲ್ಲಿ ಅಥವಾ ಇವರ ಇಕಾನಮಿಯನ್ನು ನಿಯಂತ್ರಿಸಬೇಕೆಂಬ ದೃಷ್ಟಿಯಿಂದ ಬಹುಶಃ ಈ ರೀತಿ ಮಾಡುತ್ತಿದ್ದಾರೋ ಏನೋ ನನಗೆ ಗೊತ್ತಿಲ್ಲ. ಒಂದು ಕಾಲದಲ್ಲಿ ನಮ್ಮ ದೇಶದಲ್ಲಿ ಗೋಧಿಯನ್ನು

ಯಥೇಚ್ಛವಾಗಿ ಬೆಳೆದಾಗ, ಅದು ಸಾಕಷ್ಟು ದಾಸ್ತಾನು ಇದ್ದಾಗಲೂ ಗೋಧಿಯನ್ನು ಆಮದು ಮಾಡಿಕೊಳ್ಳಲಾಯಿತು. ಇದರ ಪರಿಣಾಮವಾಗಿ ಗೋಧಿಗೆ ಸಿಗಬೇಕಾಗಿದ್ದ ಸೂಕ್ತ ದರ ಸಿಗದೆ ನೆಲಕಚ್ಚಿತು. ಇದನ್ನು ಏಕೆ ಮಾಡುತ್ತಾರೆಂದು ನೀವು ಪ್ರಶ್ನೆ ಹಾಕಿಕೊಂಡರೆ ಗೊತ್ತಾಗುತ್ತದೆ ನಮ್ಮ ಅಗ್ರಿಕಲ್ಚರ್ ಸೆಕ್ಟರ್ ಅನ್-ಆರ್ಗನೈಸ್ಡ್ ಸೆಕ್ಟರ್ ಆಗಿದೆ. ಆರ್ಗನೈಸ್ಡ್ ಸೆಕ್ಟರ್‌ನಲ್ಲಿ ನೀವು ಈ ರೀತಿ ಮಾಡಲು ಸಾಧ್ಯವಿಲ್ಲ. ಎಲ್ಲಿ ಜನ ವರ್ಗ ಸಂಘಟಿತವಾಗಿದೆಯೋ, ಎನ್.ಜಿ.ಓ. ಏನಿದ್ದಾರೆ, ಅವರನ್ನು ಮುಟ್ಟಿ ನೋಡಿ. ಅವರನ್ನು ತೆಗೆಯುವುದಕ್ಕಾಗುತ್ತದೆಯೇ? ಆಗುವುದಿಲ್ಲ. ನಾವು ಅನ್-ಆರ್ಗನೈಸ್ಡ್ ಸೆಕ್ಟರ್ ಜನರಾಗಿದ್ದು, ಕೃಷಿಕರಾಗಿರುವ ನಾವು ಶೇಕಡ 70ರಷ್ಟು ಭಾಗ ಇದ್ದೇವೆಂದು ಏನು ನಾವು ಟ್ರಂಪ್ ಕಾರ್ಡ್ ಹೊಡೆದುಕೊಳ್ಳುತ್ತಿದ್ದೇವೆ, We all belong to unorganised sectors, ನಮ್ಮ ಪ್ರೊಟೆಕ್ಷನ್‌ಗೆ ಯಾರೂ ಬರುವುದಿಲ್ಲ. ನಾವುಗಳೆಲ್ಲರೂ ಬಡವರಾಗಿರಬೇಕೆಂದೇ ಬಹಳಷ್ಟು ಜನರು ಆಸೆ ಪಡುತ್ತಾರೆ. ಇದು ಅಮಾರ್ಕೆಸ್ ಹೇಳುವ ವಿಚಾರವಾಗಿದೆ. 80%of the people, if they are below the poverty line, ಇದು ಯಾವತ್ತೂ ಕೂಡ ವೋಟು ಬ್ಯಾಂಕಿಗೆ ಅನುಕೂಲವಾಗುವಂಥ ಸಿದ್ಧಾಂತ ಎಂಬುದನ್ನು ಇವೊತ್ತು ರಾಜಕಾರಣಿ ಸೃಷ್ಟಿಸಿಕೊಂಡಿದ್ದಾನೆಂದು ಅಮಾರ್ಕೆಸ್ ತನ್ನ ಆರ್ಥಿಕ ಚಿಂತನೆಯ ಪುಸ್ತಕದಲ್ಲಿ ಹೇಳುತ್ತಾನೆ. ನಾವು ಇದನ್ನು ಗಂಭೀರವಾಗಿ ಆಲೋಚಿಸಿದಾಗ ನಿಜಕ್ಕೂ ಇದು ಸತ್ಯವೆಂಬುದು ನನಗನಿಸುತ್ತಿದೆ. ಇದು ಆಗಬಾರದು. ದೇಶದ ಹಿತದೃಷ್ಟಿಯಿಂದ ಕೆಟ್ಟ ರೀತಿಯಲ್ಲಿ ಯೋಚಿಸುವಂಥ ಪದ್ಧತಿ ಬರುವುದು ದುರದೃಷ್ಟವೆಂದು ಹೇಳುತ್ತೇನೆ. ಕೇಂದ್ರ ಸರ್ಕಾರವನ್ನು ಬಯ್ಯುತ್ತಿದ್ದಾರೆಂದು ನನ್ನ ಮಿತ್ರರೊಬ್ಬರು ಹೇಳುತ್ತಿದ್ದರು. ಯಾರನ್ನು ಬಯ್ದರೆ ನಮಗೇನು ಬರುತ್ತದೆ? ಮೊದಲು ನಾವೆಲ್ಲರೂ ಆರ್ಗನೈಸ್ಡ್ ಸೆಕ್ಟರ್‌ನೊಳಗೆ ಬರಬೇಕು. ನಮ್ಮದೇ ಆದ ಒಂದು ಫೋರಂ ಸೃಷ್ಟಿಯಾಗದ ಹೊರತು ಬೆಲೆ ಇಳಿತದ ಬಗ್ಗೆ ಯಾರೂ ಚಿಂತನೆ ಮಾಡುವುದಿಲ್ಲ. ಬೆಲೆ ಇಳಿದಷ್ಟೂಕೂಡ ನಗರದಲ್ಲಿರುವ ಮತದಾರರೆಲ್ಲರೂ ಬಹಳ ಸಂತೋಷಪಡುತ್ತಾರೆ. ನಗರದಲ್ಲಿ ವಾಸಿಸುತ್ತಿರುವ ಬುದ್ಧಿಜೀವಿಗಳೇನಿದ್ದಾರೆ, ಅವರನ್ನು ಪ್ಲೀಸ್ ಮಾಡುವುದಕ್ಕೆ ಅನುಕೂಲವಾಗುವ ಸಿದ್ಧಾಂತ ಇದಾಗುತ್ತದೆ. ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿರುವ ಮತ್ತೊಂದು ವಿಚಾರದ ಕುರಿತು ಹೇಳುವುದಾದರೆ, ಸದನಕ್ಕೆ ರೇಷ್ಮೆ ಮತ್ತು ಜವಳಿ ಮಂತ್ರಿಗಳು ಬಂದಿಲ್ಲ. ಮೈಸೂರು ಮತ್ತು ಕೋಲಾರ ಜಿಲ್ಲೆಯಲ್ಲಿ ರೇಷ್ಮೆಯನ್ನು ಯಥೇಚ್ಛವಾಗಿ ಬೆಳೆಯುತ್ತಾರೆ. ಆದರೂ ಚೈನಾ ದೇಶದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ. ಕಾರಣ ಕೇಳಿದರೆ, ನಮ್ಮ ರೇಷ್ಮೆಯ ಗುಣಮಟ್ಟ ಅಷ್ಟು ಚೆನ್ನಾಗಿಲ್ಲವೆಂದು, ಚೈನಾ ದೇಶದ ರೇಷ್ಮೆಯ ಗುಣಮಟ್ಟ ಉತ್ತಮವಾಗಿದೆಯೆಂದು ಹೇಳುತ್ತಾರೆ. ಈ ದೇಶದಲ್ಲಿ ಶೇಕಡ 70ರಷ್ಟು ಜನರಿಗೆ ಊಟವಿಲ್ಲ. ಬಡತನ ರೇಖೆಗಿಂತ ಕೆಳಗಡೆ ವಾಸಿಸುತ್ತಿರುವ ಈ ದೇಶದಲ್ಲಿ ಉತ್ತಮವಾದ ರೇಷ್ಮೆ ಬಟ್ಟೆಯನ್ನು ತೆಗೆದುಕೊಳ್ಳುವಂಥ ಅಗತ್ಯವೇನಿದೆ? ಇದನ್ನೇ ಮಾನವ ನಿರ್ಮಿತ

ಸಿದ್ಧಾಂತವೆನ್ನುವುದು. ಇದನ್ನು ಮನುಷ್ಯನೇ ನಿರ್ಮಾಣ ಮಾಡಿದ್ದಾನೆ. ಇದೊಂದು ಸೆಕ್ಟರ್ ಅನ್ನು ಕಂಟ್ರೋಲ್ ಮಾಡಬೇಕು. ಈ ಕ್ಷೇತ್ರ ಬ್ಯಾಲೆಟ್ ಬಾಕ್ಸ್ ದೃಷ್ಟಿಯಿಂದ ಶಾಶ್ವತವಾಗಿ ನಮ್ಮ ಜೊತೆಗೇ ಉಳಿಯಬೇಕೆಂಬ ರಾಜಕೀಯ ದೃಷ್ಟಿಯಿಂದ ಇದರ ಬಗ್ಗೆ ಚಿಂತನೆ ಹರಿಸಿದ್ದಾರೆಂಬ ಮಾತನ್ನು ಹೇಳಬಯಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವಂತೆ, ಪ್ರಪಂಚದಾದ್ಯಂತ ಕೃಷಿ ವಲಯಕ್ಕೆ ಸ್ವಲ್ಪ ರೋಗ ಬಡಿದಿದೆ. ಈ ವಲಯ ಅಂತಹ ಸಮೃದ್ಧವಾದುದೇನಲ್ಲ. ಅಮೆರಿಕಾದಲ್ಲಿ ಪರಿಸ್ಥಿತಿ ಏನಿದೆಯೆಂದರೆ, ವರ್ಷಕ್ಕೆ ಇಂತಿಷ್ಟು ಟನ್ ಗೋಧಿ ಬೇಕೆಂದು ರೈತರಿಗೆ ಮೊದಲೇ ಹೇಳುವುದರಿಂದ, ಎಷ್ಟು ಬೇಡಿಕೆ ಇದೆಯೋ ಅಷ್ಟಕ್ಕೆ ರೈತರು ಸೀಮಿತವಾಗಿ ಬೆಳೆಯುತ್ತಾರೆ. ಆದರೆ, ನಮ್ಮ ದೇಶದಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲ. ನಮ್ಮ ರೈತ ಕೇಳುವ ಸ್ಥಿತಿಯಲ್ಲಿಲ್ಲ, ಆತನನ್ನು ನಾವು ಮುಕ್ತನಾಗಿ ಇಟ್ಟಿದ್ದೇವೆ. ಅರ್ಥಶಾಸ್ತ್ರದಲ್ಲಿ ಡಿಮ್ಯಾಂಡ್ ಅಂಡ್ ಸಪ್ಲೈ ಬಗ್ಗೆ ಆಡಂ ಸ್ಮಿತ್ ಹೇಳುವ ನಿಯಮಗಳೇನಿವೆ, ಅವನ್ನೆಲ್ಲಾ ಮುರಿದು ಮಾನವ ನಿರ್ಮಿತ ನಿಯಮ ಮಾಡಿಕೊಂಡಿದ್ದೇವೆ. In economics, prices are determined by demand and supply, but in our country they are all man made demands. ಆದುದರಿಂದ, ಆಡಳಿತ ನಡೆಸುತ್ತಿರುವ ನಾವುಗಳು ಈ ಕುರಿತು ಚಿಂತನೆ ನಡೆಸಬೇಕಿರುವುದೇನೆಂದರೆ, ಈ ವಲಯದತ್ತ ನಾವುಗಳು ಸ್ವಲ್ಪ ಕಾರ್ಯಮಗ್ನರಾಗಬೇಕೆಂಬ ಮಾತನ್ನು ಹೇಳಬಯಸುತ್ತೇನೆ. ಈ ಕುರಿತು ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳಬಯಸುವುದೇನೆಂದರೆ, ಬ್ರೆಜಿಲ್ ದೇಶದಲ್ಲಿ ಒಮ್ಮೆ ಗೋಧಿಯನ್ನು ರೈತರು ಹೆಚ್ಚಿನ ಪ್ರಮಾಣದಲ್ಲಿ ಬೆಳೆದಂಥ ಸಂದರ್ಭದಲ್ಲಿ ಖರೀದಿಸುವ ಅಗತ್ಯ ಸರ್ಕಾರಕ್ಕಿಲ್ಲದಿದ್ದರೂ ರೈತರುಗಳೆಲ್ಲಾ ಕಂಗೆಡುತ್ತಾರೆಂಬುದನ್ನು ಯೋಚಿಸಿ ಸರ್ಕಾರ ಗೋಧಿಯನ್ನು ರೈತರುಗಳಿಂದ ಖರೀದಿಸಿ ಸಮುದ್ರದಲ್ಲಿರುವ ಜಲಚರಗಳಾದರೂ ತಿಂದು ಚೆನ್ನಾಗಿ ಬೆಳೆಯಲೆಂದು ಹೆಚ್ಚುವರಿಯಾಗಿ ಬೆಳೆದ ಗೋಧಿಯನ್ನೆಲ್ಲವನ್ನೂ ಖರೀದಿಸಿದ ಸರ್ಕಾರ ಅದನ್ನು ಸಮುದ್ರಕ್ಕೆ ಹಾಕಿತಂತೆ! ರೈತರ ಹೊಟ್ಟೆಯ ಮೇಲೆ ಹೊಡೆಯಬಾರದೆಂಬ ದೃಷ್ಟಿಯಿಂದ ಅಲ್ಲಿನ ಸರ್ಕಾರ ಆ ರೀತಿ ಮಾಡಿತು. ನಮ್ಮ ದೇಶದಲ್ಲಿ ಈ ರೀತಿ ಮಾಡುತ್ತಾರೆಯೇ? ಬರೆ ಹಾಕುವುದು, ಅದರ ಮೇಲೆಯೇ ಮತ್ತೊಂದು ಬರೆ ಹಾಕುವುದು. ಇದಕ್ಕೆ ಕೊನೆ ಇಲ್ಲವೇ? ಸರ್ಕಾರ ನಡೆಸುವಂತಹವರು ಯಾರೇ ಇರಲಿ, ಈ ಪಕ್ಷ ಆ ಪಕ್ಷವೆಂದಲ್ಲ. ಇದರಿಂದ ನನಗೂ ಹಾಗೂ ಎಲ್ಲರಿಗೂ ಪರಿಣಾಮವುಂಟಾಗುತ್ತದೆ. ಸುಂಟರಗಾಳಿ ಬಂದರೆ ಎಲ್ಲರಿಗೂ ಬೀಸುತ್ತದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಇವೊತ್ತು ಹೇಳುವುದೇನೆಂದರೆ, ನನ್ನ ದೃಷ್ಟಿಯಲ್ಲಿ, ನನಗಾಗಿರುವ ಅನುಭವದಲ್ಲಿ ಇದಕ್ಕೆ

4.20 ಪಿ.ಎಂ.

ಪರಿಹಾರಗಳಿವೆ, ಇಲ್ಲವೆಂದಲ್ಲ. Agriculture should be treated as an industry ಇದನ್ನು ಮಾಡಬೇಕೆಂದು ಕೇಂದ್ರ ಸರ್ಕಾರದವರು ಪ್ರಯತ್ನ ಮಾಡಿದ್ದಾರೆ. ನಮ್ಮಲ್ಲಿ ಸಹ

ಇದರ ಬಗ್ಗೆ ಚಿಂತನೆ ಹರಿಸಿದ್ದಾರೆ. ದಯಮಾಡಿ ಈ ಸದನವು it should pass an unanimous resolution, stating that the agriculture should be treated on par with the industry. ಎಂದು ಸರ್ವಾನುಮತದಿಂದ ರೆಸಲ್ಯೂಷನ್‌ನ್ನು ಪಾಸ್ ಮಾಡಿಕೊಡಬೇಕು. ಅದನ್ನು ಮಾಡಿದಾಗ ಅನೇಕ ರೀತಿಯಾದ ರಕ್ಷಣೆ ನಮಗೆ ಬರುತ್ತದೆ. ರೈತರಿಗೆ ರಕ್ಷಣಾತ್ಮಕ ಹಕ್ಕು ಬರುತ್ತದೆ. ಇವತ್ತು ರೋಗಗ್ರಸ್ತ ಕೈಗಾರಿಕೆಗಳಲ್ಲಿ ಕೋಟಿಗಟ್ಟಲೆ ಹಣವು ನಷ್ಟವಾಗಿದೆ. ಅವರಿಗೆಲ್ಲ ಪ್ರೊಟೆಕ್ಷನ್ ಆಕ್ಟ್ ಕೊಟ್ಟಿಲ್ಲವೇನು? ಇದನ್ನು ರೈತರಿಗೇಕೆ ಕೊಡುವುದಿಲ್ಲ? ಅನ್ನವನ್ನು ಕೊಡುವಂಥ ನಮಗೆ ಇದನ್ನು ಕೊಡುವುದಿಲ್ಲವೆಂದರೆ somewhere there is some weakness, that weakness is that agriculture is not treated as an industry. ದಯಮಾಡಿ ನಾನು ಸದನದಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ Agriculture should be treated as an industry ಎಂಬುದನ್ನು ಸರ್ವಾನುಮತದಿಂದ ನಿರ್ಣಯ ಮಾಡಿಕೊಡಬೇಕು. ಮತ್ತೆ ಕೃಷಿ ಉತ್ಪನ್ನಗಳೇನಿದೆ ಅದು ಸಾಧ್ಯವಾದ ಮಟ್ಟಿಗೆ ಕೈಗಾರಿಕಾ ಉತ್ಪಾದನೆಯಂತೆ ಪರಿವರ್ತನೆಯಾಗಲೇಬೇಕು. ಹಾಗಾದರೆ ಮಾತ್ರ ಬೆಲೆ ಸಿಗುತ್ತದೆಯೇ ಹೊರತು ಕೇವಲ ಊಟ ಮಾಡಲು ಉಪಯೋಗ ಮಾಡುವುದಾದರೆ ಜಗತ್ತಿನಲ್ಲಿ ಎಲ್ಲೂ ಬೆಲೆ ಸಿಗುವುದಿಲ್ಲ. ಯೂರೋಪ್‌ನಲ್ಲಿ ಕೃಷಿ ಉತ್ಪನ್ನಕ್ಕೆ ಒಳ್ಳೆಯ ಬೆಲೆ ಬರುತ್ತದೆ ಎನ್ನುವುದಾಗಿದ್ದರೆ ಅವರು ಪ್ರತಿಯೊಂದು ವಸ್ತುವನ್ನು ಕೈಗಾರಿಕಾ ಉತ್ಪನ್ನವಾಗಿ ಪರಿವರ್ತನೆ ಮಾಡಿದ್ದಾರೆ. ಆ ಪದ್ಧತಿಯನ್ನು ಇಲ್ಲಿ ತರಬೇಕಾದುದು ಬಹಳ ಮುಖ್ಯವಾದುದು. ಇವತ್ತು ತೆಂಗಿನ ಬೆಲೆ ಇಳಿದುಹೋಗಿದೆ. ಇದರ ಬಗ್ಗೆ ಹೋರಾಟ ಮಾಡಿ ಬೆಲೆಯನ್ನು ತಂದು ಕೊಟ್ಟಿರುವವರು ಯಾರು ಎಂದರೆ ಕೇರಳಾ ಮತ್ತು ತಮಿಳುನಾಡು ಸಂಸತ್ ಸದಸ್ಯರುಗಳು ಮಾತ್ರ. ನಮ್ಮ ಸಂಸತ್ ಸದಸ್ಯರುಗಳು ಆ ಕೆಲಸವನ್ನು ಮಾಡುವುದಿಲ್ಲ. ನಮ್ಮವರು ಇದರ ಬಗ್ಗೆ ಸಂಸತ್ತಿನಲ್ಲಿ ಚಕಾರವನ್ನೇ ಎತ್ತಿಲ್ಲ. ಇದರ ಬಗ್ಗೆ ನಮ್ಮವರು ಫೋರಂನ್ನು ಮಾಡಿಕೊಂಡಿಲ್ಲ. ಯಾವ ಕೇಂದ್ರಿಯ ಸಚಿವರನ್ನೂ ನಮ್ಮವರು ನೋಡಿಲ್ಲವೆಂದು ಘಂಟಾಘೋಷವಾಗಿ ಹೇಳಬೇಕಾಗುತ್ತದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ನಮ್ಮ ಎಂ.ಪಿ.ಗಳ ಒಂದು ಫೋರಂನ್ನು ರಚನೆ ಮಾಡಿ ಅದಕ್ಕೆ ಒಬ್ಬರು ಕ್ಯಾಬಿನೇಟ್ ದರ್ಜೆಯ ನಾಯಕರನ್ನು ಅಲ್ಲಿ ನೇಮಕ ಮಾಡಿ ನಮ್ಮ ರಾಜ್ಯದಲ್ಲಾಗುವ ಸಮಸ್ಯೆಯನ್ನು ಸಂಸತ್ತಿನಲ್ಲಿ ಫೋಕಸ್ ಮಾಡುವ ವ್ಯವಸ್ಥೆ ಮಾಡಬೇಕು. ಹಿಂದೆ ಇದ್ದ ಸರ್ಕಾರದಲ್ಲಿ ರಾಯರೆಡ್ಡಿ ಎಂಬುವವರನ್ನು ಆ ರೀತಿ ನೇಮಕ ಮಾಡಿದ್ದರು. It is a good institution ನಮ್ಮ ರಾಜ್ಯದ 174 ಯೋಜನೆಗಳು ಕೇಂದ್ರ ಸರ್ಕಾರದಿಂದ ಒಪ್ಪಿಗೆಯನ್ನು ಪಡೆಯಲು ಇದ್ದಾವೆ ಎಂದು ಹೇಳಿದರು. ಏಕೆ ಹೀಗಾಯಿತು? ಎಂಬುದು ನನಗೆ ಗೊತ್ತಿಲ್ಲ. ಕಾರಣ ನಮ್ಮ ಎಂ.ಪಿ. ಯವರ ಫೋರಂ ಬಹಳ ವೀಕ್ ಆಗಿದೆ. ಕೃಷಿ ಸಚಿವರು ಇದರ ಬಗ್ಗೆ ಚಿಂತನೆ ಮಾಡಬೇಕು. ತಾವು ಸೋಮವಾರ ದೆಹಲಿಗೆ ಡೆಲಿಗೇಷನ್‌ನ್ನು ತೆಗೆದುಕೊಂಡು ಹೋಗುತ್ತಿರುವುದಾಗಿ ಹೇಳಿದಿರಿ, ಒಂದು ದಿನ ಹೋಗಿ

ಬರುವುದರಿಂದ ಪರಿಹಾರ ಸಿಗುವುದಿಲ್ಲ. ಇದಕ್ಕೆ ಶಾಶ್ವತವಾದ ಪರಿಹಾರ ಸಿಗಬೇಕಾಗಿದ್ದರೆ ಎಂ.ಪಿ.ಗಳ ಫೋರಂನ್ನು ಶಕ್ತಿಶಾಲಿಗೊಳಿಸಲೇ ಬೇಕು. ಕೃಷಿಯನ್ನು ಅನ್ ಆರ್ಗನೈಸಡ್ ಸೆಕ್ಟರ್ ಎಂದು ಹೇಳಿದ್ದೇನೆ. ಇದಕ್ಕೆ ಒಂದು ಪರಿಹಾರವಿದೆ. ನಮ್ಮಲ್ಲಿ ಕೃಷಿ ಸಮಾಜ ಸಂಸ್ಥೆಗಳು ಎಲ್ಲಾ ತಾಲ್ಲೂಕುಗಳಲ್ಲಿವೆ. ಆದರೆ ಅದಕ್ಕೆ ಏನೇನೂ ಇಲ್ಲ. ತಾವು ಆ ಕೃಷಿ ಸಮಾಜಕ್ಕೆ ಶಕ್ತಿ ತುಂಬಬೇಕು, ಅದು ರೈತರನ್ನು ಆರ್ಗನೈಸ್ ಮಾಡುವಂಥ ಸಂಸ್ಥೆಯಾಗಬೇಕು. ರೈತರಿಗೆ ತಿಳುವಳಿಕೆ, ಎಚ್ಚರಿಕೆಯನ್ನು ಕೊಡುವಂಥ ಸಂಸ್ಥೆಯನ್ನಾಗಿ ಮಾಡಬೇಕು. ಹೊಸದಾಗಿ ಮಾಡಬೇಕಾದರೆ ಹಣದ ಅವಶ್ಯಕತೆ ಇರುತ್ತದೆ. ಆದ್ದರಿಂದ ಈಗಾಗಲೇ ಎಲ್ಲಾ ತಾಲ್ಲೂಕುಗಳಲ್ಲೇನು ಕೃಷಿ ಸಮಾಜವಿದೆ ಅದನ್ನು ಚುರುಕುಗೊಳಿಸುವ ಕ್ರಮ ತೆಗೆದುಕೊಳ್ಳಬೇಕು. ಮಂತ್ರದಿಂದ ಜಗತ್ತಿನಲ್ಲಿ ಎಲ್ಲೂ ಆಡಳಿತ ಮಾಡಿಲ್ಲ, ಮಂತ್ರದಿಂದ ಎಲ್ಲೂ ಬೆಲೆ ಇಳಿದಿಲ್ಲ. ಶ್ರಮದಿಂದಲೇ ಎಲ್ಲಾ ಆಗಬೇಕಾಗುತ್ತದೆ. ಶ್ರಮಕ್ಕೆ ಸರ್ಕಾರ ಬೆಲೆಯನ್ನು ಕೊಡಬೇಕಾಗುತ್ತದೆ. ಇದು ಕೇಂದ್ರ ಸರ್ಕಾರವಿರಬಹುದು, ರಾಜ್ಯ ಸರ್ಕಾರ ಇರಬಹುದು. ಆದರೆ ಎಲ್ಲ ವಿಚಾರಕ್ಕೆ ಕೇಂದ್ರ ಸರ್ಕಾರವನ್ನು ದೂರುವುದಕ್ಕೆ ಬದಲಾಗಿ ನಾವೂ ಸಹ ಅನೇಕರು ನೇರವಾಗಿ ಇಲ್ಲವೆ ಅಂತರಿಕವಾಗಿ ಹಲವಾರು ಒಪ್ಪಂದಗಳಲ್ಲಿ ಶಾಮೀಲಾಗಿದ್ದೇವೆ. ಗ್ಯಾಟ್‌ನ ಒಪ್ಪಂದವಾಯಿತು, ಡಬ್ಲ್ಯೂ.ಟಿ.ಒ. ಒಪ್ಪಂದವಾಯಿತು, ಈ ಒಪ್ಪಂದಗಳಲ್ಲಿ ನೇರವಾಗಿ, ಅಂತರಿಕವಾಗಿ ಎಲ್ಲರೂ ಇನ್‌ವಾಲ್ವ್ ಆಗಿದ್ದೇವೆ. ಆ ದಿನ ಇದನ್ನು ಪ್ರೊಟೆಸ್ಟ್ ಮಾಡಿದವರು ಎಷ್ಟು ಜನ? ಇತಿಹಾಸದ ಪುಟಗಳಲ್ಲಿ ಇದೆಲ್ಲಾ ಸೇರಿಬಿಟ್ಟಿದೆ. "ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ"ವೆಂಬ ಗಾದೆಮಾತೊಂದು ಇದೆ. ಮಾತು ಬಲ್ಲವನು ಸಾಮಾನ್ಯವಾಗಿ ನಾಯಕನಾಗಿಯೂ ಇರುತ್ತಾನೆ. ಆದ್ದರಿಂದ ದೆಹಲಿಯಲ್ಲಿ ಅವರ ಕಿವಿ ಮುಟ್ಟಬೇಕಾಗಿದ್ದರೆ ಇಂಥ ಮಾತುಬಲ್ಲ ಮತ್ತು ಆರೋಗ್ಯವುಳ್ಳ ನಾಯಕರನ್ನು ಬಿಟ್ಟರ ಅನುಕೂಲವಾಗುತ್ತದೆ. ಸಾಯಲು ವಿಷ ತೆಗೆದುಕೊಳ್ಳಲು ತೆಂಗು ಮಾರಿದರೆ ಹಣ ಬರುವುದಿಲ್ಲ ಎಂಬ ಮಾತನ್ನು ತಾವು ಹೇಳಿದ್ದೀರಿ. ಇದು ನೂರಕ್ಕೆ ನೂರು ಸತ್ಯ. ನಾನು ಬದುಕಿರುವುದೇ ತೆಂಗಿನಿಂದ. ಅದನ್ನು ಬಿಟ್ಟರೆ ನನಗೆ ಗತಿಯೇ ಇಲ್ಲ. ಅದು ಕಲ್ಪವೃಕ್ಷ ಹೋಗಿ ಮರಣ ವೃಕ್ಷವಾಗಿ ಬಿಟ್ಟಿದೆ. ಇದರ ಬಗ್ಗೆ ಕೇರಳಾ ರಾಜ್ಯದಲ್ಲಿ ಏನು ಚಿಂತನೆ ಮಾಡಿದ್ದಾರೆ ಅದೇ ರೀತಿ ನಮ್ಮಲ್ಲೂ ಮಾಡಬೇಕೆಂದು ನನ್ನ ಮನವಿ. ಕೇರಳಾದಲ್ಲಿ ಬಾರ್ಟರ್ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಬಾರ್ಟರ್ ಪದ್ಧತಿಯಿಂದ ವಸ್ತುಗಳಿಗೆ ವಸ್ತುಗಳನ್ನು ಬದಲಾಯಿಸಿಕೊಳ್ಳುವುದು. ಹಳ್ಳಿಯಲ್ಲಿ ರಾಗಿ ಕೊಟ್ಟರೆ ಜೋಳ ಕೊಡುತ್ತಿದ್ದರು ಎಂಬುದಿತ್ತಲ್ಲ ಆ ರೀತಿ ಕಾಯಿ ಕೊಟ್ಟರೆ ಬೇರೆಯದನ್ನು ಕೊಡುತ್ತಿದ್ದಾರೆ. ಆ ಪದ್ಧತಿಯನ್ನು ನಮ್ಮಲ್ಲಿ ಜಾರಿಗೆ ತನ್ನಿ. ವಿಶೇಷವಾಗಿ ತೆಂಗಿನ ಬೆಳೆಗಾರರಿಗೆ ಅದನ್ನು ಮಾಡಿ. ಏನೂ ಬೇಡವೆಂದರೂ ಪೆಟ್ರೋಲ್ ಬಂಕ್‌ನಲ್ಲಿ ಕಾಯಿ ಕೊಟ್ಟರೆ ಪೆಟ್ರೋಲ್, ಡೀಸೆಲ್ ಕೊಡುವಂತೆ ಮಾಡಿ. ಡೀಸೆಲ್ ತರಲೂ ನಮಗೆ ಗತಿ ಇಲ್ಲ. ಇದರ ಬಗ್ಗೆ ತಾವು ಗಮನಕೊಡಬೇಕು. ನಾನು ಇರತಕ್ಕ ಸ್ಥಿತಿಯನ್ನು ಹೇಳಿದ್ದೇನೆ. ಬೆಲೆ ಕುಸಿತವು ಎಲ್ಲರಿಗೂ ತಟ್ಟುವಂಥದ್ದು.

ಇದನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಂಡು ನನ್ನ ಐದಾರು ಸಲಹೆಗಳನ್ನು ಜಾರಿಗೆ ತರಬೇಕೆಂದು ಮನವಿ ಮಾಡುತ್ತ, 'ಎಕಾನಾಮಿಕ್ ಥಾಟ್' ಎಂಬ ಪುಸ್ತಕವೇನಿದೆ ಇದನ್ನು ಅಮಾರ್ಕಸ್ ಸೇನ್‌ರವರು ಬರೆದಿದ್ದಾರೆ, ಇದನ್ನು ಶಾಸಕರ ಮಿತ್ರರಿಗೆ ಬಿಡುವು ಇದ್ದರೆ ಓದಿ ಸರ್ಕಾರಕ್ಕೆ ಸಲಹೆಗಳನ್ನು ಬರೆದುಕಳಿಸಿದರೆ ಬಹುಶಃ ಇದಕ್ಕೆ ಏನಾದರೂ ಪರಿಹಾರ ಸಿಗಬಹುದು. ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರ ಗೌಡ (ಕಲ್ಘಟಗಿ) :— ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶೇಂಗಾ, ಮೆಣಸಿನಕಾಯಿ, ಹತ್ತಿ, ಭತ್ತವನ್ನು ರೈತರು ಬೆಳೆಯುತ್ತಿದ್ದಾರೆ. ಬೆಣ್ಣೆಯಾಳದಿಂದ ನೆರೆಹಾವಳಿಗೆ ತುತ್ತಾದಂಥ ಕುಂದಗೋಳ, ಹುಬ್ಬಳ್ಳಿ, ನವಲಗುಂದ ಈ ಮೂರು ತಾಲ್ಲೂಕುಗಳಿಗೆ ಮುಖ್ಯಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ಕೊಟ್ಟಿದ್ದರು. ಅಲ್ಲಿಯ ರೈತರಿಗೆ ನೆರೆಹಾವಳಿಯಿಂದ ಸಾಕಷ್ಟು ನಷ್ಟವಾಯಿತು. ಹೊಲದಲ್ಲಿರುವ ಒಡ್ಡುಗಳು ಸಾಕಷ್ಟು ಒಡೆದುಹೋದವು. ಇದರಿಂದ ಇಬ್ಬರು ರೈತರು ವಿಷ ತೆಗೆದುಕೊಂಡು ಸತ್ತರು. ಇವತ್ತು ರೈತರು ಬೆಳೆದ ಬೆಳೆಗಳಿಗೆ ಅವರು ಬೀಜಕ್ಕಾಗಿ ಏನನ್ನು ಖರೀದಿ ಮಾಡಿರುತ್ತಾರೋ ಅಷ್ಟು ಹಣವೂ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿಲ್ಲ. ಇವತ್ತು ಎಕರೆಗೆ ಆರರಿಂದ ಏಳು ಚೀಲ ಶೇಂಗಾವನ್ನು ಬೆಳೆಯುತ್ತಾರೆ. ಆದರೆ ಬೀಜಕ್ಕಾಗಿ ನಾಲ್ಕು ಸಾವಿರ ರೂಪಾಯಿ ಖರ್ಚಾಗುತ್ತದೆ. ಬೀಜ ಖರೀದಿ ಮಾಡುವುದಲ್ಲದೆ ಗೊಬ್ಬರವನ್ನು ಹಾಕಬೇಕು, ಕೀಟನಾಶಕಗಳನ್ನು ಹಾಕಬೇಕು, ಮನೆಯ ಮಂದಿಯೆಲ್ಲಾ ಹೊಲದಲ್ಲಿ ದುಡಿಯಬೇಕು. ಅವರು ಬೆಳೆದಂಥ ಬೆಳೆಯನ್ನು ಮಾರಾಟ ಮಾಡಿದರೆ ಅವರುಗಳು ಪುಕ್ಕಟೆಯಾಗಿ ದುಡಿದಂತೆ ಆಗಿರುತ್ತದೆ. ಇವತ್ತು ಸರ್ಕಾರ ಕೈಗಾರಿಕೆಗಳಿಗೆ ಸಾಕಷ್ಟು ಸಹಾಯವನ್ನು ಕೊಟ್ಟಿರುತ್ತದೆ. ಇವತ್ತು ಕೈಗಾರಿಕೆಗಳಲ್ಲಿ ತಯಾರಾದ ಸೂಜಿ, ದಾರ, ಬ್ಲೇಡು ಯಾವುದನ್ನೇ ನಾವು ತೆಗೆದುಕೊಳ್ಳಬೇಕಾಗಿದ್ದರೆ ಅದಕ್ಕೆ ಇಂತಿಷ್ಟೇ ಎಂದು ಸರ್ಕಾರ ಬೆಲೆಯನ್ನು ನಿಗದಿ ಮಾಡಿದೆ. ಆದರೆ ನಮ್ಮ ರೈತರು ಉತ್ಪಾದನೆ ಮಾಡಿದ ವಸ್ತುಗಳಿಗೆ ಆ ರೀತಿ ಬೆಲೆ ನಿಗದಿ ಮಾಡಿಲ್ಲ. ನಮ್ಮ ರೈತರು ಏನು ಮಾಡಿದ್ದರು? ನಮ್ಮ ರೈತರು ಏನು ಅನ್ಯಾಯ ಮಾಡಿದ್ದಾರೆ? ನಮ್ಮ ರೈತರು ಹೇಗೆ ಬದುಕಬೇಕು? ಬೆಲೆ ಕುಸಿತದಿಂದಾಗಿ ವಿಷ ತೆಗೆದುಕೊಂಡು ಸತ್ತಂತಹ ಸಾಕಷ್ಟು ಉದಾಹರಣೆಗಳಿವೆ. ಒಂದು ಬ್ಲೇಡಿಗೆ ಇಷ್ಟೇ ಕಿಮ್ಮತ್ತು ಎಂದು ಸರ್ಕಾರ ನಿಗದಿ ಮಾಡಿದೆ. ಆದರೆ ನಮ್ಮ ರೈತರು ಬೆಳೆದಂತಹ ಬೆಳೆಗಳಿಗೆ ಸರ್ಕಾರ ಏನು ಬೆಲೆ ನಿಗದಿ ಮಾಡಿದೆ ಎಂದು ನಾನು ಇವತ್ತು ಸರ್ಕಾರವನ್ನು ಕೇಳುತ್ತಿದ್ದೇನೆ. ನಮ್ಮ ರೈತರಿಗೂ ಇಂಥಿಂಥ ಬೆಳೆಗಳಿಗೆ ಇಷ್ಟಿಷ್ಟು ರೇಟ್ ಎಂದು ಫಿಕ್ಸ್ ಮಾಡಿ ಅವರನ್ನು ಸರ್ಕಾರ ಕಾಪಾಡಬೇಕು. ರೈತನೊಬ್ಬ ಇವತ್ತು 30-40 ಎಕರೆ ಜಮೀನು ಹೊಂದಿದ್ದರೂ ಕೂಡ ಆತ ದುಡಿದು ಬದುಕುವಂತಹ ಪರಿಸ್ಥಿತಿ ಇಲ್ಲ. ಕೇವಲ 700-800 ರೂಪಾಯಿಗಳ

ಬಂಡವಾಳ ಹೂಡಿ ಪೆಟ್ಟಿ ಅಂಗಡಿ, ಲಾಟರಿ ಅಂಗಡಿ ನಡೆಸುವವರು ಇವತ್ತು ಒಳ್ಳೆಯ ಜೀವನವನ್ನು ನಡೆಸುವುದನ್ನು ನಾವು ಮತ್ತು ನೀವು ನೋಡಿದ್ದೇವೆ. ರೈತರಿಗಿಂತ ಲಾಟರಿ ಮತ್ತು ಪೆಟ್ಟಿ ಅಂಗಡಿಯವರೇ ಲಾಭ ಗಳಿಸುತ್ತಿದ್ದಾರೆ. ಸರ್ಕಾರ ನಮ್ಮ ರೈತರ ಬಗ್ಗೆ ಚಿಂತನೆ ಮಾಡಬೇಕು. ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ ಅದು ರೈತರ ಹಿತ ಕಾಪಾಡಬೇಕು. ಬಹಳಷ್ಟು ಎಕರೆ ಜಮೀನಿದ್ದರೂ ರೈತನಿಗೆ ಇವತ್ತು ತನ್ನ ಮಕ್ಕಳಿಗೆ ಒಂದು ಹೊತ್ತಿನ ಕೂಳು ಹಾಕಲೂ ಸಹಾ ಸಾಧ್ಯವಿಲ್ಲದಂತಾಗಿದೆ. ಆತ ತನ್ನ ಜಮೀನನ್ನು ಮಾರಿ ರಿಕ್ಷಾ ತೆಗೆದುಕೊಂಡು ಉಪ ಜೀವನ ಮಾಡುವಂತಹ ಸಂದರ್ಭ ಬಂದಿದೆ. ಉಡಿದಾರ, ಬ್ಲೇಡ್‌ಗಳಿಗೆ ನಿಶ್ಚಿತ ಬೆಲೆ ನಿಗದಿಪಡಿಸಿದ್ದರೂ ಕೂಡ ರೈತರು ಬೆಳೆದಂತಹ ಬೆಳೆಗಳಿಗೆ ಯಾವ ಸರ್ಕಾರ ಕೂಡ ಬೆಲೆ ನಿಗದಿ ಮಾಡಿಲ್ಲ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹಿತ ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ರೈತರಿಗೆ ಸರಿಯಾದ ಬೆಂಬಲವನ್ನು ಕೊಡುತ್ತಿಲ್ಲ. ಈ ಸರ್ಕಾರವಾದರೂ ರೈತರ ಉತ್ಪನ್ನಗಳಿಗೆ ಸರಿಯಾದ ಬೆಲೆ ನಿಗದಿಪಡಿಸಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಮಾನ್ಯ ಅಧ್ಯಕ್ಷರಿಗೆ ನನ್ನ ಅನಂತ ನಮಸ್ಕಾರಗಳನ್ನು ಸಲ್ಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್ ಜೈ ಕರ್ನಾಟಕ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮನಗೌಡ (ತಿಕೋಟ) :— ಮಾನ್ಯ ಅಧ್ಯಕ್ಷರೇ, ನಾನು ಈ ಬಗ್ಗೆ ಹೆಚ್ಚು ಸಮಯ ತೆಗೆದುಕೊಳ್ಳದೇ ಕೇವಲ ಐದು ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈಗಾಗಲೇ ಇದರ ಬಗ್ಗೆ ನಮ್ಮ ಪಕ್ಷದವರೇ ಆದ ಮಾನ್ಯ ಪೂಜಾರ್‌ರವರು ಮಾತನಾಡಿದ್ದಾರೆ. ಮುಖ್ಯವಾಗಿ ಒಂದೇ ಒಂದು ವಿಚಾರದಲ್ಲಿ ನಾನು ಎರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಬೆಳೆಯುತಕ್ಕಂಥ ಜೋಳದ ಬಗ್ಗೆ ನಾನು ಸ್ವಲ್ಪ ವಿಚಾರಗಳನ್ನು ಪ್ರಸ್ತಾಪ ಮಾಡಲು ಬಯಸುತ್ತಿದ್ದೇನೆ. ಹಿಂದಿನ ಸದನದಲ್ಲಾಗಲೀ ಈ ಸದನದಲ್ಲಾಗಲೀ ಕೃಷಿಯ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡುವಾಗ ಹೆಚ್ಚಾಗಿ ಜೋಳದ ಬಗ್ಗೆ ಪ್ರಸ್ತಾಪಿಸಿಲ್ಲ. ಟೊಮ್ಯಾಟೋ, ಉಳ್ಳಾಗಡ್ಡಿ ಬೆಲೆ ಕುಸಿತದ ಬಗ್ಗೆ ಇಲ್ಲಿ ಚರ್ಚೆಯಾಗಿದ್ದರೂ ಕೂಡ ಜೋಳದ ಬಗ್ಗೆ ಹೆಚ್ಚಾಗಿ ಇಲ್ಲಿ ಪ್ರಸ್ತಾಪವಾಗಿಲ್ಲ. ಜೋಳಕ್ಕೆ ವಿಶೇಷವಾದ ಬೆಂಬಲ ಬೆಲೆಯನ್ನು ಘೋಷಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಮೂಲಭೂತವಾಗಿ ಇರತಕ್ಕ ಬೆಳೆ ಎಂದರೆ ಈ ಜೋಳ ಮಾತ್ರ. ನಾವು ಮುಂಗಾರು ಮತ್ತು ಹಿಂಗಾರು ಎರಡು ಸಮಯದಲ್ಲಿಯೂ ಬೆಳೆ ಬೆಳೆಯುವುದಿಲ್ಲ. ಕೇವಲ ಹಿಂಗಾರಿನಲ್ಲಿ ಮಾತ್ರ ನಾವು ಬೆಳೆ ಬೆಳೆಯುತ್ತೇವೆ. ವಿಶೇಷವಾಗಿ ವರುಣದೇವನ ಕೃಪೆಯಾದರೆ ಮಾತ್ರ ನಾವು ಮುಂಗಾರು ಬೆಳೆ ಬೆಳೆಯಲು ಸಾಧ್ಯ. ಇಲ್ಲದಿದ್ದರೆ ನಮ್ಮಲ್ಲಿ ಅದು ಸಾಧ್ಯವೇ

ಇಲ್ಲ. 8-10 ವರ್ಷಗಳ ಹಿಂದಿನ ದಾಖಲೆ ನೋಡಿದರೆ ಮುಂಗಾರು ಬೆಳೆ ನಮ್ಮಲ್ಲಿ ಬೆಳೆಯುತ್ತಿದ್ದನ್ನು ನೋಡಬಹುದಾಗಿದೆ. ಆದರೆ ಹಿಂಗಾರು ಬೆಳೆಯನ್ನು ಮಾತ್ರ ನಾವು ಕಡ್ಡಾಯವಾಗಿ ಬೆಳೆಯುತ್ತೇವೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಬೆಳೆಯುತಕ್ಕ ಜೋಳ ಕೇವಲ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ರಾಷ್ಟ್ರವ್ಯಾಪ್ತಿಯಾಗಿ ಕೂಡ ಮೆಚ್ಚುಗೆಯನ್ನು ಪಡೆದಿದೆ. ಜಿಯಾಗ್ರಫಿಕಲೀ ನಾನು ಹೇಳುವುದಾದರೆ, ಕನಿಷ್ಟ ಮೂರುವರೆ ಲಕ್ಷ ಹೆಕ್ಟೇರುಗಳಷ್ಟು ಜೋಳವನ್ನು ಬಿಜಾಪುರ ಜಿಲ್ಲೆಯಲ್ಲಿ ನಾವು ಬೆಳೆಯುತ್ತೇವೆ. ಬಾಗಲಕೋಟೆಯಲ್ಲಿ 1 ಲಕ್ಷ 60 ಸಾವಿರ ಹೆಕ್ಟೇರುಗಳಷ್ಟು ಜೋಳವನ್ನು ಬೆಳೆಯಲಾಗುತ್ತಿದೆ. ಗುಲ್ಬರ್ಗಾ ಮತ್ತು ಬೆಳಗಾಂ ಜಿಲ್ಲೆಯ ಸ್ವಲ್ಪಭಾಗದಲ್ಲೂ ಸಹ ಜೋಳವನ್ನು ಬೆಳೆಯಲಾಗುತ್ತಿದೆ. ಆದರೆ ದುರದೃಷ್ಟವಶಾತ್ ಜೋಳದ ಬಗ್ಗೆ ಯಾರೂ ಕೂಡ ಚಿಂತನೆ ಮಾಡುತ್ತಿಲ್ಲ. ಇಂಗ್ಲೀಷಿನಲ್ಲಿ ``out of sight is out of way" ಎಂದು ಒಂದು ಗಾದೆ ಇದೆ. ಕೋಲಾರದ ಟೊಮ್ಯಾಟೋ ಮತ್ತು ಉಳ್ಳಾಗಡ್ಡಿ ಬಗ್ಗೆಯೇ ಇಲ್ಲಿ ಹೆಚ್ಚಾಗಿ ಚರ್ಚೆಯಾಗುವುದರಿಂದ ನಮ್ಮ ಜೋಳದ ಬಗ್ಗೆ ಬಹುತೇಕ ಯಾರಿಗೂ ಗೊತ್ತಾಗುವುದೇ ಇಲ್ಲ. ಮಾನ್ಯ ಅಧ್ಯಕ್ಷರೆ, ಕಣ್ಣಿಗೂ ಕೂಡ ಕೋಲಾರದವರೇ ಮೊದಲು ಕಣ್ಣಿಗೆ ಬೀಳುವುದರಿಂದ ಅವರಿಗೇ ಚರ್ಚೆ ನಡೆಸಲು ಅವಕಾಶ ಸಿಗುತ್ತದೆ, ನಮಗೆ ಯಾರಿಗೂ ಅವಕಾಶವೇ ಸಿಗುವುದಿಲ್ಲ. ಬೆಂಬಲ ಬೆಲೆ ಘೋಷಿಸುವಾಗ ವಿಶೇಷವಾಗಿ ಜೋಳ ಇದರ ಬಗ್ಗೆ ಗಮನದಲ್ಲಿಟ್ಟುಕೊಳ್ಳಬೇಕೆಂದು ಕೋರುತ್ತೇನೆ. ಈಗಾಗಲೇ ಕೇಂದ್ರ ಸರ್ಕಾರದವರು ಪ್ರಕಟಣೆ ಮಾಡಿರತಕ್ಕ ಬೆಂಬಲ ಬೆಲೆಯ ಯಾದಿ ಈಗ ನನ್ನ ಬಳಿ ಇದೆ. ಕೇಂದ್ರ ಸರ್ಕಾರದಲ್ಲಿ ಜೋಳದ ಬಗ್ಗೆ ಅರಿವು ಇರತಕ್ಕವರು ಇದ್ದಾರೋ ಇಲ್ಲವೋ ಎನ್ನತಕ್ಕ ಸಂಶಯ ನನಗೆ ಬರುತ್ತಿದೆ. ನಮ್ಮಲ್ಲಿ ಜೋಳ, ಮಕ್ಕೆಜೋಳ ಮತ್ತು ಸಜ್ಜೆ ಮೂರನ್ನೂ ಕೂಡ ಬೆಳೆಯಲಾಗುತ್ತಿದೆ. ಮೆಕ್ಕೆ ಜೋಳವನ್ನು ನಾವು ಬಹುತೇಕವಾಗಿ ದನಕ್ಕೆ ಹಾಕುತ್ತೇವೆ. ಅದನ್ನು ಮನುಷ್ಯರು ಯಾರೂ ತಿನ್ನುವುದಿಲ್ಲ, ಅದೇ ರೀತಿಯಾಗಿ ಸಜ್ಜೆಯನ್ನೂ ಕೂಡ ಬಹಳ ಡೌನ್‌ಟ್ರಾಡನ್ ಕ್ಲಾಸಿನವರು ಬಳಸುತ್ತಿದ್ದಾರೆ. ಅವರಿಗೆ ಬೇರೆ ಏನೂ ಸಿಗದಿರುವ ಹಿನ್ನಲೆಯಲ್ಲಿ ಬಹಳ ಕಷ್ಟಪಟ್ಟು ಸಜ್ಜೆಯನ್ನು ಅವರು ಖರೀದಿ ಮಾಡುತ್ತಾರೆ. ದುರ್ದೈವದಿಂದ ಕೇಂದ್ರ ಸರ್ಕಾರದವರು ಮೆಕ್ಕೆಜೋಳ, ಜೋಳ ಮತ್ತು ಸಜ್ಜೆ ಮೂರಕ್ಕೂ ಕೂಡ 445 ರೂಪಾಯಿಗಳ ಒಂದೇ ಬೆಂಬಲ ಬೆಲೆಯನ್ನು ಘೋಷಿಸಿದ್ದಾರೆ. ಈ ಸದನದಲ್ಲಿ ಜೋಳ ಬೆಳೆಯುತಕ್ಕ ಬಹಳಷ್ಟು ಜನ ಶಾಸಕರುಗಳು ಮತ್ತು ಸಚಿವರುಗಳು ಇಲ್ಲಿದ್ದಾರೆ. ಅವರಿಗೆ ಇದರ ಬಗ್ಗೆ ಅನುಭವ ಇದೆ. ಒಂದಾನೊಂದು ಕಾಲದಲ್ಲಿ ಕ್ವಿಂಟಾಲಿಗೆ 800-1000 ರೂಪಾಯಿಗಳಿಗೆ ಜೋಳವನ್ನು ಮಾರಿದ್ದೇವೆ. ಆದರೆ ಇವತ್ತು ಮಾರ್ಕೆಟ್‌ನಲ್ಲಿ ಕ್ವಿಂಟಾಲಿಗೆ 350-400 ರೂಪಾಯಿಗಳನ್ನಾದರೂ ಕೊಟ್ಟು ಜೋಳವನ್ನು ಖರೀದಿಸುವವರೇ ಇಲ್ಲವಾಗಿದೆ. ಕೇಂದ್ರ ಸರ್ಕಾರದವರು ಇದನ್ನು ಗಣನೆಗೆ ತೆಗೆದುಕೊಂಡು ಜೋಳಕ್ಕೆ ವಿಶೇಷವಾದಂತಹ ಬೆಂಬಲ ಬೆಲೆಯನ್ನು ಘೋಷಿಸುತ್ತಾರೆಂದು

ನಾನು ಭಾವಿಸಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕೃಷಿ ಸಚಿವರು ಬೆಂಬಲ ಬೆಲೆಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ಸ್ವಲ್ಪ ಮಟ್ಟಿಗೆ ಕೊಡತಕ್ಕಂಥ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಲು ಯಾವುದೇ ನಿರ್ದೇಶನವಾದಂತಹ ಆದೇಶವನ್ನು ಸರ್ಕಾರ ಜಿಲ್ಲಾಧಿಕಾರಿಗಳಿಗೆ ಕೊಟ್ಟಿಲ್ಲ. ಬೆಲೆ ಕುಸಿತದ ಬಗ್ಗೆ ಈ ಸದನದಲ್ಲಿ ಸುಮಾರು 15 ದಿವಸಗಳ ಹಿಂದೆಯೇ ಪ್ರಸ್ತಾಪವಾಯಿತು. ಇವತ್ತಿನವರೆಗೂ ಕೂಡ ನಮ್ಮ ಬಿಜಾಪುರ ಜಿಲ್ಲೆಯ ಜಿಲ್ಲಾಧಿಕಾರಿಗಳು ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿ ಖರೀದಿ ಕೇಂದ್ರ ತೆರೆಯತಕ್ಕಂಥ ಪ್ರಯತ್ನ ಮಾಡಿಲ್ಲ. ಜಿಲ್ಲಾಧಿಕಾರಿಯವರನ್ನು ಈ ಬಗ್ಗೆ ಕೇಳಿದರೆ ನಿರ್ದೇಶನವಾಗಿ ನಮಗೆ ಒಂದು ಆದೇಶ ಬರಬೇಕು ಎನ್ನುತ್ತಾರೆ. ಮಾರ್ಕೆಟ್‌ನಲ್ಲಿ ಜೋಳದ ಬೆಂಬಲ ಬೆಲೆ ಕುಸಿದಿದೆ ಎನ್ನತಕ್ಕಂಥದ್ದನ್ನು ನನ್ನ ಗಮನಕ್ಕೆ ಬರಬೇಕೆಂದು ಅವರು ಹೇಳುತ್ತಾರೆ. ನಾವು ಇಷ್ಟೆಲ್ಲಾ ಹೇಳುತ್ತಿದ್ದರೂ ಅದು ಯಾವಾಗ ಅವರ ಗಮನಕ್ಕೆ ಬರುತ್ತದೋ ನನಗಂತೂ ಗೊತ್ತಿಲ್ಲ. ಇಡೀ ರಾಜ್ಯದಲ್ಲಿ ಇದುವರೆವಿಗೂ ಕೂಡ ಜೋಳವನ್ನು ಖರೀದಿ ಮಾಡತಕ್ಕಂಥ ಒಂದೇ ಒಂದು ಕೇಂದ್ರ ಕೂಡ ಓಪನ್ ಆಗಿಲ್ಲ. ಅಂತಹ ಕೇಂದ್ರ ಓಪನ್ ಆಗಿದ್ದರೆ ದಯಮಾಡಿ ಮಾನ್ಯ ಸಚಿವರು ಹೇಳಲಿ.

ಶ್ರೀ. ಟಿ.ಬಿ. ಜಯಚಂದ್ರ (ಮಾನ್ಯ ಕೃಷಿ ಸಚಿವರು) :— ಮಾನ್ಯ ಸದಸ್ಯರು ಹೇಳುವುದು ಸರಿ. ಜೋಳವನ್ನು ಖರೀದಿಸಲು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಖರೀದಿಸಲು ಅವರು ಒಪ್ಪಿಗೆಯನ್ನು ಕೂಡ ಕೊಟ್ಟಿದ್ದಾರೆ. ಆದಷ್ಟು ಬೇಗ ಖರೀದಿ ಕೇಂದ್ರ ತೆರೆದು ಜೋಳವನ್ನು ಕೊಳ್ಳತಕ್ಕಂಥ ಕೆಲಸ ಮಾಡುತ್ತೇವೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ :— ಆದಕ್ಕೋಸ್ಕರವೇ ನಾನು ಹೇಳಿದ್ದು. ಕಳೆದ 15 ದಿವಸಗಳಿಂದ ಸದನದಲ್ಲಿ ಚರ್ಚೆಯಾದ ಮೇಲೆ ಮೆಕ್ಕೆಜೋಳವನ್ನು ಖರೀದಿ ಮಾಡಲು ಇಡೀ ಬಿಜಾಪುರ್, ಬಾಗಲಕೋಟೆ ಜಿಲ್ಲೆಗೆ ಮುಧೋಳ್ ತಾಲ್ಲೂಕಿನಲ್ಲಿ ಮಾತ್ರ ಖರೀದಿ ಸೆಂಟರ್ ತೆಗೆದಿದ್ದಾರೆ ಹೊರತು ಬೇರೆ ಎಲ್ಲೂ ಕೂಡ ಖರೀದಿ ಸೆಂಟರ್ ಓಪನ್ ಮಾಡಲಿಲ್ಲ. ಆದರೆ ಇಡೀ ರಾಜ್ಯದಲ್ಲಿ ಜೋಳದ ಬಗ್ಗೆ ಒಂದೂ ಪ್ರೊಕ್ಯೂರ್‌ಮೆಂಟ್ ಸೆಂಟರ್ ಓಪನ್ ಆಗಿಲ್ಲ. ಇನ್ನು ಬೆಂಬಲ ಬೆಲೆ ಜೋಳಕ್ಕೆ 445 ರೂಪಾಯಿಗಳನ್ನು ಮಾಡಿದ್ದೀರಿ, ಆದರೆ ಕಾಸ್ಟ್ ಆಫ್ ಕಲ್ಟಿವೇಷನ್ ಇಂದು ಬಹಳ ಹೆಚ್ಚಾಗಿದ್ದು, ಇದು ಒಂದು ಎಕರೆಗೆ 800 ರೂಪಾಯಿಗಳು ಕೇವಲ ಬಿತ್ತನೆಗೆ ಖರ್ಚಾಗುತ್ತದೆ. ಈ ವಿಷಯ ಕೃಷಿ ಸಚಿವರಿಗೂ ಕೂಡ ತಿಳಿದಿರುತ್ತದೆ. ಆದುದರಿಂದ ರೈತ ಒಂದು ಎಕರೆ ಜೋಳ ಬೆಳೆದರೆ ಅದಕ್ಕೆ ಬೆಂಬಲ ಬೆಲೆಯಾಗಿ 500 ರಿಂದ 600 ರೂಪಾಯಿಗಳಾದರೂ ಸಿಗುವ ರೀತಿಯಲ್ಲಿ ಸರ್ಕಾರ ಮಾಡಿದರೆ ಖಂಡಿತವಾಗಿ ರೈತರಿಗೆ ಪರಿಹಾರ ಕೊಟ್ಟಂತಾಗುತ್ತದೆಯಾದ ಕಾರಣ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಕೇಂದ್ರ ಸರ್ಕಾರ ಏನು ಬೆಂಬಲ ಬೆಲೆಯನ್ನು ನಿಗದಿ ಮಾಡಿದೆ ಅದೇ ರೀತಿ ರಾಜ್ಯ ಸರ್ಕಾರ ಕೂಡ ಬೆಂಬಲ ಬೆಲೆಯನ್ನು ಪ್ರಕಟಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಎಸ್ ಆತ್ಮಾನಂದ (ಮಂಡ್ಯ) :— ಮಾನ್ಯ ಅಧ್ಯಕ್ಷರೇ, ಈಗಾಗಲೇ ರೈತರ ಸಮಸ್ಯೆ ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಇದಕ್ಕೆ ಪೂರಕವಾಗಿ ಹೇಳಬೇಕೆಂದರೆ ಮಂಡ್ಯದಲ್ಲಿ ಬೆಲ್ಲವನ್ನು ರೈತರು ತಯಾರು ಮಾಡಿದರೂ ಕೂಡ ಅದನ್ನು ತೆಗೆದುಕೊಂಡು ಹೋಗುವ ವ್ಯಾಪಾರಿಗಳಿಗೆ ಇರುವ ಆರ್ಥಿಕ ಸುಭದ್ರತೆ ರೈತರಿಗಿರುವುದಿಲ್ಲ. ಆದುದರಿಂದ ಯಾವುದೇ ಕೃಷಿ ಉತ್ಪನ್ನವಾದರೂ ಕೂಡ ಅದಕ್ಕೆ ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಈಗಾಗಲೇ ಇಬ್ಬರು ಸದಸ್ಯರು ವ್ಯವಸಾಯಕ್ಕೆ ಕೈಗಾರಿಕೆ ದರ್ಜೆಯನ್ನು ನೀಡಬೇಕೆಂದು ಏನು ಒತ್ತಾಯ ಮಾಡಿದ್ದಾರೆ ಅದಕ್ಕೆ ನಾನು ಕೂಡ ಬೆಂಬಲಿಸುತ್ತೇನೆ. ಕೃಷಿ ಉತ್ಪನ್ನದ ಬೆಲೆಯನ್ನು ಮೂರನೆಯವರು ನಿಗದಿಪಡಿಸುವುದಕ್ಕಿಂತ ಅದನ್ನು ಬೆಳೆಯುವ ರೈತರೇ ಬೆಲೆ ನಿಗದಿಪಡಿಸುವಂತೆ ಕೃಷಿಗೆ ಕೈಗಾರಿಕಾ ದರ್ಜೆಯನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಆವರ್ತ ನಿಧಿಯ ಮೂಲಕ ಮಾರ್ಕೆಟ್ ಇಂಟರ್‌ವೆನ್‌ಷನ್‌ನಲ್ಲಿ ಬೆಲ್ಲವನ್ನು ಕೂಡ ಖರೀದಿ ಮಾಡಬೇಕೆಂದು ಹೇಳುತ್ತೇನೆ. ಇಂದು ಸಕ್ಕರೆ ಉದ್ಯಮ ಕೂಡ ಸಂಕಷ್ಟದಲ್ಲಿರುವುದರಿಂದ ಕಬ್ಬು ಬೆಳೆಗಾರರಿಗೆ ದೊರೆಯಬೇಕಾದ ಹಣ ಕೂಡ ಸಿಗಲು ಬಹಳ ತಡವಾಗುತ್ತಿದೆ. ಆದುದರಿಂದ ಸಕ್ಕರೆ ಕಾರ್ಖಾನೆಗಳಿಗೆ ಸಹಕಾರಿಯಾಗುವ ರೀತಿಯಲ್ಲಿ ಸಕ್ಕರೆ ಉದ್ಯಮಕ್ಕೂ ಕೂಡ ಆವರ್ತ ನಿಧಿಯನ್ನು ಸ್ಥಾಪಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಎಸ್.ಎಂ. ಕೃಷ್ಣ (ಸನ್ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಈ ಸಭೆಯ ಗೌರವಾನ್ವಿತ ಸದಸ್ಯರುಗಳು ಕೃಷಿ ಬೆಳೆಗಳ ಕುಸಿಯುತ್ತಿರುವ ಬೆಲೆಗಳ ಬಗ್ಗೆ ತೀವ್ರ ಕಾತರ ವ್ಯಕ್ತಪಡಿಸಿದ್ದಾರೆ. ಸದಸ್ಯರುಗಳು ಸರ್ಕಾರವು ಈ ಬಗ್ಗೆ ಮಧ್ಯ ಪ್ರವೇಶಿಸಬೇಕೆಂದು ಕೋರಿರುತ್ತಾರೆ. ಸದಸ್ಯರುಗಳು ನೀಡಿರುವ ಎಲ್ಲಾ ಉತ್ತಮ ಸಲಹೆಗಳನ್ನೂ ಸಹಾ ನಾನು ಗಣನೆಗೆ ತೆಗೆದುಕೊಂಡು ನನ್ನ ಸಂಘಟಿತ ಸಹೋದ್ಯೋಗಿಗಳ ಜೊತೆಯೂ ಸಹಾ ಚರ್ಚಿಸಿದ್ದೇನೆ.

ಕರ್ನಾಟಕದಲ್ಲಿ 2000ನೇ ಸಾಲಿಗೆ ಮುಂಗಾರು ಹಂಗಾಮು ಬಹಳ ಯಶಸ್ವಿಯಾಗಿದೆ. ರಾಜ್ಯವು ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳಿನವರೆಗೆ ಸಮೃದ್ಧ ಮಳೆಯನ್ನು ಪಡೆಯಿತು. ಇದರ ಪರಿಣಾಮವಾಗಿ ರಾಜ್ಯದ್ಯಂತ ವ್ಯಾಪಕವಾಗಿ ಬಿತ್ತನೆಯನ್ನು ಕೈಗೊಳ್ಳಲಾಯಿತು ಮತ್ತು 68.88 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮುಂಗಾರು ಬೆಳೆಯನ್ನು ಬೆಳೆಯಲಾಯಿತು. ಮಳೆಯು ಬಿದ್ದ ರೀತಿ ಹಾಗೂ ಹಿಂದಿನ ಮಾರುಕಟ್ಟೆ ಬೆಲೆಗಳು ಬೆಳೆ ಪದ್ಧತಿಯ ಮೇಲೆ ಸಹಾ ಪರಿಣಾಮ ಬೀರಿತು. ಭತ್ತ, ತೊಗರಿ ಮತ್ತು ಮುಸುಕಿನ ಜೋಳದ ವಿಸ್ತೀರ್ಣವು ಹೆಚ್ಚಾಯಿತು ಮತ್ತು ನೆಲಗಡಲೆ ಹಾಗೂ ಸೂರ್ಯಕಾಂತಿ ಬೆಳೆ ಪ್ರದೇಶವು ಹಾಗೂ ಕೆಲವು ಮಟ್ಟಿಗೆ ಜೋಳದ ಪ್ರದೇಶವು ಕಡಿಮೆಯಾಯಿತು ಕಳೆದ ಹಂಗಾಮಿನಲ್ಲಿ ಎಣ್ಣೆಕಾಳುಗಳ ಮಾರುಕಟ್ಟೆ ಬೆಲೆಯು ಕುಸಿದ ಪರಿಣಾಮವಾಗಿ ಪ್ರಸ್ತುತ ಹಂಗಾಮಿನಲ್ಲಿ ಬೆಳೆ ಪದ್ಧತಿಯಲ್ಲಿ ಬದಲಾವಣೆ ಉಂಟಾಗಲು ಕಾರಣವಾಯಿತು.

ಕನಿಷ್ಠ ಬೆಂಬಲ ಬೆಲೆಗಳು

ಪ್ರಸಕ್ತ ಸಾಲಿನಲ್ಲಿ, ಪ್ರಮುಖ ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನು ಈಗಾಗಲೇ ಘೋಷಿಸಲಾಗಿದೆ. ಈ ಬೆಲೆಗಳು ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆ. ವಿವರಗಳು ಕೆಳಗಿನಂತಿವೆ.

ಕ್ರ.ಸಂ.	ಬೆಳೆ	ಕನಿಷ್ಠ ಬೆಂಬಲ ಬೆಲೆ
1.	ಭತ್ತ	
	1. ಸಾಧಾರಣ	510
	2. ಉತ್ತಮ	540
	3. ಅತಿ ಉತ್ತಮ	540
2.	ಜೋಳ	445
3.	ಸಜ್ಜೆ	445
4.	ಮುಸುಕಿನ ಜೋಳ	445
5.	ರಾಗಿ	445
6.	ತೊಗರಿ	1200
7.	ಹೆಸರು	1200
8.	ಉದ್ದು	1200
9.	ನೆಲಗಡಲೆ	1200
10.	ಸೂರ್ಯಕಾಂತಿ	1170
11.	ಹತ್ತಿ - ಕಪ್ಪಾಸ್	1625
12.	ಹತ್ತಿ - ಹೆಚ್-4	1825

ಮಾರುಕಟ್ಟೆ ಪರಿಸ್ಥಿತಿ

ಮುಂಗಾರು ಬೆಳೆಗಳು ಕಟಾವಿಗೆ ಬರುತ್ತಿವೆ. ಭತ್ತ, ಮುಸುಕಿನ ಜೋಳ, ಜೋಳ, ನೆಲಗಡಲೆ, ಸೂರ್ಯಕಾಂತಿ, ಕಡಲೆ. ಹೆಸರು, ಉದ್ದು ಮುಂತಾದವುಗಳು ಈಗಾಗಲೇ ಮಾರುಕಟ್ಟೆಗೆ ಬರಲು ಪ್ರಾರಂಭಿಸಿವೆ. ನಾವು ಮಾರುಕಟ್ಟೆ ಧಾರಣೆಗಳ ಬಗ್ಗೆ ಬಹಳಷ್ಟು ಕಾಳಜಿ ವಹಿಸುತ್ತಿದ್ದೇವೆ. ಸರ್ಕಾರವು ಕೃಷಿ ಉತ್ಪನ್ನಗಳು ಮಾರುಕಟ್ಟೆಗೆ

ಬರುತ್ತಿರುವ ಬಗ್ಗೆ ಹಾಗೂ ಅವುಗಳಿಗೆ ಕೃಷಿ ಮಾರುಕಟ್ಟೆಯಲ್ಲಿ ದೊರೆಯುತ್ತಿರುವ ಬೆಲೆಗಳ ಬಗ್ಗೆ ಸತತವಾಗಿ ಉಸ್ತುವಾರಿಯನ್ನು ನಡೆಸುತ್ತಿದೆ. ಬೆಲೆ ಕುಸಿತವು ಸಾಮಾನ್ಯವಾಗಿ ಹಂಗಾಮಿನ ಪ್ರಾರಂಭದಲ್ಲಿ ಇರುವ ಒಂದು ಸ್ವಾಭಾವಿಕ ಬೆಳವಣಿಗೆ. ವ್ಯಾಪಾರಗಾರರು ಹೊಸ ಉತ್ಪನ್ನವು ಮಾರುಕಟ್ಟೆಗೆ ಬರುವ ಮುಂಚೆ ತಮ್ಮಲ್ಲಿರುವ ದಾಸ್ತಾನನ್ನು ಮುಗಿಸುವ ಕಾತುರ ಹೊಂದಿರುತ್ತಾರೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಬೆಲೆಗಳು ಕುಸಿಯುತ್ತವೆ.

ಹೆಚ್ಚಿನ ಮಾರುಕಟ್ಟೆಗಳಲ್ಲಿ ಭತ್ತದ ಬೆಲೆಯು ಕನಿಷ್ಟ ಬೆಂಬಲ ಬೆಲೆಗಿಂತ ಹೆಚ್ಚಾಗಿಯೇ ಇದೆ. ಆದರೆ ಕನಿಷ್ಟ ಬೆಂಬಲ ಬೆಲೆಗಿಂತ ಮಾರುಕಟ್ಟೆ ಬೆಲೆಯು ಕಡಿಮೆಯಾಗಿರುವ ಮಾರುಕಟ್ಟೆಗಳಲ್ಲಿ ಹಾಗೂ ಯಾವ ಮಾರುಕಟ್ಟೆಗಳಲ್ಲಿ ಭತ್ತವು ಹೆಚ್ಚು ಪ್ರಮಾಣದಲ್ಲಿ ಮಾರಾಟವಾಗುವುದೋ ಅಂತಹವುಗಳಲ್ಲಿ ಕನಿಷ್ಟ ಬೆಂಬಲ ಬೆಲೆಯನ್ನು ನೀಡಲು ಆದೇಶವನ್ನು ಈಗಾಗಲೇ ನೀಡಲಾಗಿದೆ.

ರಾಜ್ಯದಲ್ಲಿ ಮುಸುಕಿನ ಜೋಳವನ್ನು ಸಾಧಾರಣವಾಗಿ 4.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಆದರೆ ಈ ವರ್ಷ ಈ ಬೆಳೆಯನ್ನು 5.71 ಲಕ್ಷ ಹೆಕ್ಟೇರ್ ಪ್ರದೇಶಕ್ಕಿಂತಲೂ ಹೆಚ್ಚಿನ ವಿಸ್ತೀರ್ಣದಲ್ಲಿ ಬೆಳೆಯಲಾಗಿದೆ. ಅಡಿಗೆಗೆ ಉಪಯೋಗಿಸುವ ಎಣ್ಣೆಗಳ ಬೆಲೆಗಳು ಕುಸಿದಿದ್ದು ಇದಕ್ಕೆ ಮುಖ್ಯ ಕಾರಣವಾಗಿದೆ. ಇದುವರೆವಿಗೂ ನೆಲಗಡಲೆ ಮತ್ತು ಸೂರ್ಯಕಾಂತಿ ಬೆಳೆಗಳನ್ನು ಬೆಳೆಯುತ್ತಿದ್ದ ಕೆಲವು ರೈತರು ಈಗ ಮುಸುಕಿನ ಜೋಳಕ್ಕೆ ಬದಲಾಯಿಸಿಕೊಂಡಿದ್ದಾರೆ. ದುರಾದೃಷ್ಟವಶಾತ್ ಎಲ್ಲಾ ಮಾರುಕಟ್ಟೆಗಳಲ್ಲೂ ಸಹಾ ಮುಸುಕಿನ ಜೋಳದ ಬೆಲೆಯು ಕುಸಿದಿದೆ. ಮಾರುಕಟ್ಟೆಗಳ ಪ್ರಸ್ತುತ ಧಾರಣೆಯು 350 ರೂ.ಗಳಾಗಿದ್ದು, ಕನಿಷ್ಟ ಬೆಂಬಲ ಬೆಲೆಯು 445 ರೂ.ಗಳಾಗಿದೆ. ನಾವು ಈಗಾಗಲೇ ಭಾರತೀಯ ಆಹಾರ ನಿಗಮದ ಮೂಲಕ 25 ಕೇಂದ್ರಗಳಲ್ಲಿ ಕನಿಷ್ಟ ಬೆಂಬಲ ಬೆಲೆಯ ಮೂಲಕ ಮುಸುಕಿನ ಜೋಳವನ್ನು ಸಂಗ್ರಹಿಸಲು ಪ್ರಾರಂಭಿಸಿದ್ದು, ಸಂಗ್ರಹಿಸಿದ ಪ್ರಮಾಣವು ಸುಮಾರು 1,15,690 ಕ್ವಿಂಟಾಲ್ ಆಗಿರುತ್ತದೆ. ಆದರೂ ಮಾರುಕಟ್ಟೆ ಬೆಲೆಯು ಹೆಚ್ಚಾಗಿಲ್ಲ. ಪ್ರಾರಂಭದಲ್ಲಿ ರೈತರು ಸಾಕಷ್ಟು ಒಣಗಿಲ್ಲದೇ ಇದ್ದ ಧಾನ್ಯಗಳನ್ನು ತಂದಿದ್ದರು. ಈ ಧಾನ್ಯಗಳು ಸಾಧಾರಣ ಉತ್ತಮ ಗುಣಮಟ್ಟದ ಪ್ರಮಾಣವಾದ ಶೇ.14ರಷ್ಟು ತೇವಾಂಶದ ಬದಲು ಶೇ.20ರಷ್ಟು ತೇವಾಂಶವನ್ನು ಹೊಂದಿದ್ದು, ಈಗ ಈ ಸಮಸ್ಯೆಯನ್ನು ನಿವಾರಿಸಲಾಗಿದೆ. ಇದರ ಜೊತೆಗೆ ಇನ್ನೊಂದು ಅಂಶವು ಸಂಬಂಧಿಸಿದೆ. ಭಾರತೀಯ ಆಹಾರ ನಿಗಮವು ಬಣ್ಣ ಕೆಟ್ಟಿರುವ ಧಾನ್ಯಗಳನ್ನು ಸಂಗ್ರಹಿಸುತ್ತಿಲ್ಲ. ಕನಿಷ್ಟ ಪಕ್ಷ ಈ ವರ್ಷವಾದರೂ ಗುಣ ಮಟ್ಟಕ್ಕೆ ಪಂಜಾಬ್ ರಾಜ್ಯದಲ್ಲಿ ಮಾಡಿರುವಂತೆ ಸ್ವಲ್ಪಮಟ್ಟಿನ ವಿನಾಯಿತಿಯನ್ನು ಕೊಟ್ಟು ರೈತರು ಮಾರುಕಟ್ಟೆಯಲ್ಲಿ ಉತ್ತಮ ಬೆಲೆಯನ್ನು ಪಡೆಯುವಂತೆ ಮಾಡಬೇಕಾಗಿದೆ. ನಾನು ಈ ವಿಷಯವನ್ನು ಭಾರತ ಸರ್ಕಾರದ ಅತ್ಯುನ್ನತ ಮಟ್ಟದಲ್ಲಿ ಕೈಗೆತ್ತಿಕೊಂಡಿದ್ದೇನೆ ಹಾಗೂ ಮುಸುಕಿನ ಜೋಳದ ರಫ್ತು ಪ್ರಮಾಣವನ್ನು ಹೆಚ್ಚಿಸಲು ಭಾರತ ಸರ್ಕಾರವನ್ನು ಕೋರಿಕೊಂಡಿದ್ದೇನೆ. ನಮ್ಮ ರಾಜ್ಯದ ಆಹಾರ ಮಂತ್ರಿಗಳು ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳೊಡನೆ

ಬೆಳೆಗಾದ ನಂತರ ಮುಸುಕಿನ ಜೋಳ ರಾಜ್ಯ ಸರ್ಕಾರ ಖರೀದಿಸಿ ಪಿ.ಡಿ.ಎಸ್. ಮೂಲಕ ವಿತರಿಸಿದಲ್ಲಿ ಕೇಂದ್ರ ಸರ್ಕಾರವು ಧನಸಹಾಯ ನೀಡುವ ಆಶ್ವಾಸನೆ ನೀಡಿದೆ. ಆದಾಗ್ಯೂ ಎಫ್.ಎ.ಕ್ಯೂ ಸ್ವಲ್ಪಮಟ್ಟಿಗೆ ಸಡಿಲಿಸಿ ಕ್ವಿಂಟಾಲಿಗೆ ರೂ. 400 ನಂತೆ ಮುಸುಕಿನ ಜೋಳ ರಾಜ್ಯದ ಆಹಾರ ಮತ್ತು ಸರಬರಾಜು ಕಾರ್ಪೊರೇಷನ್ ಹಾಗೂ ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಖರೀದಿಸಲು ಪಿಡಿಎಸ್‌ನಲ್ಲಿ ಮಾರಲು ತೀರ್ಮಾನಿಸಲಾಗಿದೆ.

ಕರ್ನಾಟಕದಲ್ಲಿ ಜೋಳ ಮತ್ತು ರಾಗಿ ಬೆಳೆಗಳು ಎರಡು ಮುಖ್ಯ ಬೆಳೆಗಳಾಗಿವೆ. ಜೋಳ ಮತ್ತು ರಾಗಿ ಧಾನ್ಯಗಳು ಮಾರುಕಟ್ಟೆಗೆ ಈಗಾಗಲೇ ಬರುತ್ತಿವೆ. ಬೀದರ್ ಮತ್ತು ರಾಮದುರ್ಗ ಮಾರುಕಟ್ಟೆಗಳಲ್ಲಿ ಮಾತ್ರ ಜೋಳದ ಬೆಲೆಯು ಕನಿಷ್ಠ ಬೆಂಬಲ ಬೆಲೆಗಿಂತ ಸ್ವಲ್ಪ ಮಟ್ಟಿಗೆ ಹೆಚ್ಚಾಗಿದ್ದು ಇನ್ನೆಲ್ಲಾ ಮಾರುಕಟ್ಟೆಗಳಲ್ಲೂ ಸಹಾ ಮಾರುಕಟ್ಟೆ ಬೆಲೆಯು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಾಗಿದೆ. ಬೆಂಗಳೂರು ಮಾರುಕಟ್ಟೆಯು ಮಾತ್ರ ಇದಕ್ಕೆ ಅಪವಾದವಾಗಿದೆ. ಬಹಳಷ್ಟು ಮಾರುಕಟ್ಟೆಗಳಲ್ಲಿ ರಾಗಿಯ ಬೆಲೆಯು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ಇದೆ. ಆದುದರಿಂದ ಭಾರತೀಯ ಆಹಾರ ನಿಗಮ ಮತ್ತು ಮಾರುಕಟ್ಟೆ ಇಲಾಖೆಗಳ ಮೂಲಕ ಈ ಧಾನ್ಯವನ್ನು ಕನಿಷ್ಠ ಬೆಂಬಲ ಬೆಲೆಯ ಮೂಲಕ ಸಂಗ್ರಹಿಸಲು ನಾವು ನಿರ್ಧರಿಸಿದ್ದೇವೆ.

ನೆಲಗಡಲೆ ಮತ್ತು ಸೂರ್ಯಕಾಂತಿ ಬೆಳೆಗಳ ಬೆಲೆಯು ಬಹಳಷ್ಟು ಮಾರುಕಟ್ಟೆಗಳಲ್ಲಿ ಕನಿಷ್ಠ ಬೆಂಬಲ ಬೆಲೆಗಿಂದ ಕಡಿಮೆಯಿರುವುದು ನನಗೆ ಆತಂಕ ತರುವ ಬೆಳವಣಿಗೆಯಾಗಿದೆ. ತೆಂಗಿನ ಕಾಯಿಯ ಬೆಲೆಯೂ ಸಹಾ ತೃಪ್ತಿಕರವಾಗಿಲ್ಲ. ಅಡಿಗೆ ಯೋಗ್ಯವಾದ ಎಣ್ಣೆಗಳ ಬೆಲೆ ಕುಸಿತಕ್ಕೆ ಪ್ರಧಾನವಾದ ಕಾರಣ ಈ ಎಣ್ಣೆಗಳ ಆಮದು ಜಾಸ್ತಿಯಾಗಿದೆ. 1999-2000 ಸಾಲಿನಲ್ಲಿ ಖಾದ್ಯ ಎಣ್ಣೆಗಳ ಆಮದು 45 ಲಕ್ಷ ಟನ್ ಆಗಿತ್ತು. ಅಡಿಗೆ ಎಣ್ಣೆಗಳ ಬೆಲೆಯು ಕುಸಿದಿರುವುದು ಭಾರತ ಸರ್ಕಾರದ ತಪ್ಪು ಆಯಾತನೀತಿಯಿಂದ ಆಗಿದೆ. ನಾವು ಈಗಾಗಲೇ ಈ ವಿಷಯವನ್ನು ಭಾರತ ಸರ್ಕಾರದೊಡನೆ ಕೈಗೆತ್ತಿಕೊಂಡಿದ್ದೇವೆ. ಇದನ್ನೆಲ್ಲಾ ಗಮನಿಸಿ ಈಗ (21.11.2000ರಂದು) ಭಾರತ ಸರ್ಕಾರ ಈ ಎಣ್ಣೆಗಳ ಮೇಲೆ ಆಮದು ಸುಂಕವನ್ನು ಹೆಚ್ಚಿಸಿದೆ. ಕಚ್ಚಾ ಪಾಮ್ ಎಣ್ಣೆಯ ಮೇಲೆ ಸುಂಕವನ್ನು ಶೇಕಡ 15 ರಿಂದ 20ಕ್ಕೆ ಹೆಚ್ಚಿಸಿದ್ದರೆ, ರಿಫೈನ್ಡ್ ಪಾಮ್ ಎಣ್ಣೆಯ ಮೇಲೆ ಸುಂಕವನ್ನು 35 ರಿಂದ 65 ರಷ್ಟು ಹೆಚ್ಚಿಸಲಾಗಿದೆ. ಇತರೆ ಸಂಬಂಧಪಟ್ಟ ಪದಾರ್ಥಗಳ ಮೇಲೆ ಸುಂಕವನ್ನು ಸ್ವಲ್ಪ ಏರಿಸಲಾಗಿದೆ. ಆದರೆ ಇದು ಸಾಲದು. ಖಾದ್ಯ ಎಣ್ಣೆಯ ಮೇಲೆ ಶೇಕಡ 300 ರಷ್ಟು ಸುಂಕ ಹಾಕಲು ಅವಕಾಶವಿದೆ. ಅದೇ ರೀತಿ ಕೇಂದ್ರ ಸರ್ಕಾರವು ಮುಸುಕಿನ ಜೋಳ, ರಾಗಿ, ಇತ್ಯಾದಿ ಧಾನ್ಯಗಳ ರಫ್ತನ್ನು 25,000 ಟನ್ನುಗಳಿಗೆ ಸೀಮಿತಗೊಳಿಸಿತ್ತು. ನಮ್ಮ ಆಗ್ರಹದ ಮೇಲೆ, ಈಗ ಮತ್ತೊಂದು 25,000 ಟನ್ನುಗಳನ್ನು

ರಕ್ಷಣೆ ಮಾಡಲು ಅವಕಾಶ ಕಲ್ಪಿಸಿದ್ದಾರೆ. ಮಾರುಕಟ್ಟೆ ಪರಿಸ್ಥಿತಿಯನ್ನು ಪರಿಶೀಲಿಸಿ ಪುನಃ ಕೇಂದ್ರ ಸರ್ಕಾರದೊಂದಿಗೆ ಈ ವಿಷಯವನ್ನು ತೆಗೆದುಕೊಳ್ಳುತ್ತೇವೆ. ನಾವು ಈಗ ಕರ್ನಾಟಕ ಎಣ್ಣೆಕಾಳು ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಮಹಾ ಮಂಡಳಿಗಳೊಂದಿಗೆ ಸಂಗ್ರಹಣಾ ಕಾರ್ಯದ ಬಗ್ಗೆ ಕ್ರಮವನ್ನು ಪ್ರಾರಂಭಿಸಲಿದ್ದೇವೆ. ಆಲೂಗಡ್ಡೆಯ ಬೆಲೆ ಧಾರಣೆಯ ವ್ಯತ್ಯಾಸಗಳನ್ನು ಸಹ ಗಮನಿಸಿ ಆಲೂಗಡ್ಡೆಯನ್ನು ಕನಿಷ್ಠ ಬೆಲೆ ಕ್ವಿಂಟಾಲಿಗೆ ರೂ. 360 ರಂತೆ ಖರೀದಿಸಲು ತೀರ್ಮಾನಿಸಲಾಗಿದೆ.

ಮೇಲ್ಕಂಡ ಆಶ್ವಾಸನೆಗಳನ್ನು ನೀಡಿದ ನಂತರ ನಾನು ಕೃಷಿ ಬೆಳೆಗಳ ಬೆಲೆಗಳಿಗೆ ಸಂಬಂಧಿಸಿದಂತೆ ದೀರ್ಘಾವಧಿ ಕ್ರಮಗಳ ಬಗ್ಗೆ ಸ್ವಲ್ಪ ಹೇಳಬಯಸುತ್ತೇನೆ.

ಭಾರತವು ವಿಶ್ವ ಮಾರುಕಟ್ಟೆ ಸಂಸ್ಥೆ-ಗ್ಯಾಟ್ ಒಪ್ಪಂದ ಮಾಡಿಕೊಂಡಿರುವ ಒಂದು ರಾಷ್ಟ್ರವಾಗಿರುವುದರಿಂದ ಇನ್ನು ಮುಂದೆ ಈ ಒಪ್ಪಂದವು ಭಾರತವೂ ಸೇರಿದಂತೆ ಬಹಳಷ್ಟು ರಾಷ್ಟ್ರಗಳ ಅಂತರರಾಷ್ಟ್ರೀಯ ಮಾರುಕಟ್ಟೆ ನಿರ್ಧರಿಸುತ್ತದೆ. WTO ಪ್ರಕಾರ ಕೃಷಿಯೂ ಸಹಾ ಅಂತರರಾಷ್ಟ್ರೀಯ ಮಾರುಕಟ್ಟೆಯ ಒಂದು ಅಂಗವಾಗಿದೆ. ಬಹಳಷ್ಟು ಜನರಲ್ಲಿ, ಕುಸಿಯುತ್ತಿರುವ ಬೆಲೆಯು WTO ಅಸ್ತಿತ್ವದ ನಿಬಂಧನೆಗಳ ಮೂಲಕ ಉಂಟಾಗಿದೆ ಎಂಬ ಭಾವನೆ ಇದೆ. ನನ್ನ ಸಂಪುಟದ ಸಹೋದ್ಯೋಗಿಗಳೂ ಸಹಾ WTO ಒಪ್ಪಂದದ ಪರಿಣಾಮಗಳ ಬಗ್ಗೆ ಕಾತರ ಹೊಂದಿದ್ದಾರೆ. ಈ ದೃಷ್ಟಿಯಿಂದ WTO ಒಪ್ಪಂದವು ನಮ್ಮ ಕೃಷಿಯ ಮೇಲೆ ಉಂಟುಮಾಡುವ ಪರಿಣಾಮವನ್ನು ಅರ್ಥಮಾಡಿಕೊಳ್ಳುವ ಅಗತ್ಯವು ಬಹಳಷ್ಟು ಇದೆ. ಕರ್ನಾಟಕವು WTO ಘಟಕವನ್ನು ರಾಜ್ಯ ಮಟ್ಟದಲ್ಲಿ ವಿಶ್ವ ಆಹಾರ ಸಂಸ್ಥೆಯ ಒಬ್ಬ ನಿವೃತ್ತ ಸಹಾಯಕ ಮಹಾ ನಿರ್ದೇಶಕರಾದ ಡಾ: ಶ್ರೀವರ್ನಾಥರವರ ಅಧ್ಯಕ್ಷತೆಯಲ್ಲಿ, ಸ್ಥಾಪಿಸಿರುವ ಮೊದಲ ರಾಜ್ಯವಾಗಿದೆಯೆಂದು ಈ ಸಭೆಯ ಗೌರವಾನ್ವಿತ ಸದಸ್ಯರುಗಳಿಗೆ ತಿಳಿಸಲಿಚ್ಛಿಸುತ್ತೇನೆ. ಈ ಘಟಕವು ಈಗಾಗಲೇ ನಮ್ಮ ರಾಜ್ಯಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ಪರಿಶೀಲಿಸಿ ಕರಡು ವರದಿಯನ್ನು ತಯಾರಿಸಿ ಅದನ್ನು ಇತ್ತೀಚೆಗೆ ಚರ್ಚಿಸಲಾಗಿದೆ. ಅಂತಿಮ ವರದಿಯನ್ನು ಪಡೆದ ನಂತರ ತಿದ್ದುಪಡಿಗಳು ಮತ್ತು ವಿಧೇಯಕಗಳನ್ನು ಮಾಡುವ ಸಲುವಾಗಿ ನಾವು ಭಾರತ ಸರ್ಕಾರವನ್ನು ಕೋರುತ್ತೇವೆ. ಒಟ್ಟಿನಲ್ಲಿ ನಮ್ಮ ಕೃಷಿ ಸಮುದಾಯಕ್ಕೆ ಅನುಕೂಲವಾಗಲು ನಾವು ಎಲ್ಲಾ ತರಹದ ಪ್ರಯತ್ನಗಳನ್ನು ಮಾಡುತ್ತೇವೆ.

ಎರಡನೆಯದಾಗಿ, ಸಂಗ್ರಹಣಾ ಕಾರ್ಯಗಳನ್ನು ದೀರ್ಘಾವಧಿಯ ಕಾರ್ಯಕ್ರಮವಾಗಿ ರೂಪಿಸುವ ದೃಷ್ಟಿಯಿಂದ ಒಂದು ಖಾಯಂ ನಿಧಿ (Revolving Fund) ಸ್ಥಾಪಿಸಲು ನಿರ್ಣಯ ತೆಗೆದುಕೊಂಡಿದ್ದೇವೆ. ಈ ನಿಧಿಗೆ ಮಾರುಕಟ್ಟೆ ಸಮಿತಿಗಳಿಂದ 50 ಕೋಟಿ ರೂ.ಗಳನ್ನು ಹಾಗೂ ಸರ್ಕಾರ 25 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಿದೆ. ನಾವು ಈ ಕಾರ್ಯಾಚರಣೆಯನ್ನು 75 ಕೋಟಿ ರೂ.ಗಳೊಂದಿಗೆ ಪ್ರಾರಂಭಿಸಲಿದ್ದು, ಅದು

ನಂತರ 100 ಕೋಟಿ ರೂ.ಗಳ ವರೆಗೆ ಆಗಬಹುದಾಗಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಬೆಳೆಗಳ ಬೆಲೆ ಕುಸಿತದ ಸಂದರ್ಭದಲ್ಲಿ ಮಾರುಕಟ್ಟೆ ಪ್ರವೇಶಿಸಿ ರೈತರ ನೆರವಿಗೆ ಬರಲು ಸಾಧ್ಯವಾಗುವುದು.

ಈ ಗೌರವಾನ್ವಿತ ಸಭೆಯ ಎಲ್ಲಾ ಸದಸ್ಯರುಗಳಿಗೂ ನಾನು ನೀಡುವ ಭರವಸೆ ಏನೆಂದರೆ ಕರ್ನಾಟಕ ರೈತರಿಗೆ ಲಾಭದಾಯಕ ಬೆಲೆಗಳನ್ನು ನೀಡುವ ಸಲುವಾಗಿ ಅಗತ್ಯವಾಗಿರುವ ಎಲ್ಲಾ ಕ್ರಮಗಳನ್ನು ನಮ್ಮ ಸರ್ಕಾರವು ಕೈಗೊಳ್ಳಲಿದೆ. ಕನಿಷ್ಠ ಬೆಂಬಲ ಬೆಲೆಯ ಕಾರಣದಿಂದ ಹಾಗೂ ಬೇರೆ ರಾಜ್ಯಗಳಿಂದ ಬರುತ್ತಿರುವ ಬೇಡಿಕೆ ಕಾರಣದಿಂದ ಬೆಲೆ ಪರಿಸ್ಥಿತಿಯು ಉತ್ತಮಗೊಳ್ಳುತ್ತದೆ ಎಂದು ನಾನು ಆಶಿಸುತ್ತೇನೆ.

4.50 ಪಿ.ಎಂ.

ಈ ಮನೆಯ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಆ ಮನೆಯ ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲರೂ ದೆಹಲಿಗೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ, ಬೆಲೆ ಕುಸಿತದ ಬಗ್ಗೆ ಈವಾಗ ತರುತ್ತಿರತಕ್ಕಂಥ ಗಂಭೀರ ಸ್ವರೂಪದ ಸನ್ನಿವೇಶ ಏನು ಉಂಟಾಗಿದೆ ಅದರಿಂದ ನಾವು ಹೊರ ಬರುವುದಕ್ಕೆ ಬೇಕಾದಂತಹ ಯೋಗ್ಯ ನಿರ್ಧಾರಗಳನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳಬೇಕು ಎನ್ನುವ ಒಂದು ಮನವಿಯನ್ನು ಕೊಡುವುದಕ್ಕೋಸ್ಕರ 28ನೇ ತಾರೀಖು ಕೇಂದ್ರದ ಕೃಷಿ ಮತ್ತು ಆಹಾರ ಮಂತ್ರಿಗಳ ಜೊತೆಯಲ್ಲಿ ಮಾತುಕತೆ ನಡೆಸುವುದಕ್ಕೆ ಹೋಗುತ್ತಿದ್ದೇವೆ. ಆ ನಿಯೋಗದಲ್ಲಿ ನಾನೂ ಕೂಡ ಭಾಗವಹಿಸುತ್ತೇನೆ ಎನ್ನುವ ಭರವಸೆಯನ್ನು ಸದನಕ್ಕೆ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಬೆಲೆ ಕುಸಿತದ ಬಗ್ಗೆ ಚರ್ಚೆಯಾಗಿತ್ತು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ ಮತ್ತು ಆಗಲೇ ಪ್ರಸ್ತಾಪ ಮಾಡಿದ ಪ್ರಕಾರ ನಾವೇನು ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನು ಹೋಗಬೇಕೆಂದು ಇದ್ದೇವೆ ಅದರ ಬಗ್ಗೆ ಮಾನ್ಯ ಆಹಾರ ಸಚಿವರು ಇನಾಂದಾರ್ ಹೇಳಿದ್ದರು. ಅದರ ಪ್ರಕಾರ ನಾವು 27ನೇ ತಾರೀಖು ಹೋಗುತ್ತಿದ್ದೇವೆ. ಮಾನ್ಯ ಸಿಂಧ್ಯರವರು ಹಾಗೂ ನಾವು ರಾಜ್ಯ ಸರ್ಕಾರಕ್ಕೆ ವಿನಂತಿ ಮಾಡಿದ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಕೂಡ ಅಲ್ಲಿಗೆ ಬಂದರೆ ಬಹಳ ಒಳ್ಳೆಯದು ಎಂದು ಹೇಳಿದಾಗ, ಅದಕ್ಕೆ ಅವರು ಬರುತ್ತೇವೆಂದು ಒಪ್ಪಿಕೊಂಡಿದ್ದಾರೆ. ಬಹಳ ಒಳ್ಳೆಯ ಸಂಗತಿ, ಅದಕ್ಕಾಗಿ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಇವತ್ತು ರೈತನ ಬಗ್ಗೆ ಈ ಸದನದಲ್ಲಿ ದೀರ್ಘ ಕಾಲಾವಧಿಯಲ್ಲಿ ರೈತನ ಹಿತಾಸಕ್ತಿ

ಸಲುವಾಗಿ ಆತ ಏನು ಕಷ್ಟಪಟ್ಟು ಬೆಳೆದಿದ್ದಾನೆ ಆ ಉತ್ಪನ್ನದ ಬಗ್ಗೆ ಮುಕ್ತವಾಗಿ ಚರ್ಚೆಯಾಗಿದೆ. ಇವತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಪಾಲಿಸಿ ಇರಬಹುದು, ಬಹಳ ರಚನಾತ್ಮಕವಾದ ಸಲಹೆ ಸೂಚನೆಗಳು ಬಂದವು. ಹಾಗೂ ರಚನಾತ್ಮಕವಾದ ಟೀಕೆಗಳು ಬಂದವು. ಅದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಇವತ್ತು ಎಲ್ಲರೂ ಕೂಡ ಪ್ರಯತ್ನ ಮಾಡುವಂತಹ ಕೆಲಸ ಆಗಬೇಕಾಗಿದೆ. ಕೊನೇ ಪ್ಯಾರಾದಲ್ಲಿ ಏನು ಹೇಳಿದ್ದೀರಿ, ಒಂದು ಗ್ಯಾಟ್ ಒಪ್ಪಂದ ಮತ್ತು ಡಬ್ಲ್ಯೂಟಿಒ ಒಪ್ಪಂದದ ಪ್ರಕಾರ ಬಹಳಷ್ಟು ಜನರಲ್ಲಿ 1991ನೇ ಇಸವಿಯಿಂದ ಡಾ: ಮನಮೋಹನ್‌ಸಿಂಗ್ ಅವರು ಏನು ಒಂದು ಆರ್ಥಿಕ ಉದಾರೀಕರಣ ನೀತಿಯನ್ನು ಶ್ರೀಮಾನ್ ಪಿ.ವಿ. ನರಸಿಂಹರಾವ್ ಅವರು ಪ್ರಧಾನ ಮಂತ್ರಿಗಳಾಗಿದಂತಹ ಕಾಲದಲ್ಲಿ ಅದನ್ನ ನಾವು ಅನುಸರಣೆ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಅದರ ಪರಿಣಾಮಗಳು ಕೆಲವೊಂದು ಉದ್ಯಮಗಳಲ್ಲಿ ಒಳ್ಳೆಯದು ಆಗಿದೆ, ಕೆಟ್ಟದ್ದು ಆಗಿದೆ. ಇವತ್ತು ನಾವು ಕೈಗಾರೀಕರಣ ತೆಗೆದುಕೊಂಡರೆ ಬೇರೆ ಬೇರೆ ರಂಗಗಳು ತೆಗೆದುಕೊಂಡರೆ ಅದರಲ್ಲಿ ನಾವು ಪರ್ಸೆಂಟೇಜ್ ನೋಡಿದರೆ ಕೆಲವೊಂದು ಫೀಲ್ಡ್‌ನಲ್ಲಿ ಒಳ್ಳೆಯದಾಗಿದೆ. ಇವತ್ತು ವಿಶ್ವ ಮಾರುಕಟ್ಟೆಗೆ ಹೋಗುತ್ತಿದ್ದೇವೆ. ಕೇವಲ ನಾವು ಕೂಪಮಂಡೂಕರಾಗಿ ಕುಳಿತುಕೊಂಡರೆ ಬೇರೆ ಅಡ್ವಾಂಟೇಜ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ ಇವತ್ತು ಬೇರೆ ಎಲ್ಲಾ ರಂಗಗಳಲ್ಲಿ ಬೆನಿಫಿಟ್ ಆದರೂ ಕೃಷಿ ರಂಗಕ್ಕೆ ಬೆನಿಫಿಟ್ ಆಗುತ್ತಿಲ್ಲ. ಇವತ್ತು ಗ್ಯಾಟ್ ಮತ್ತು ಡಬ್ಲ್ಯೂಟಿಒ ಒಪ್ಪಂದದ ನಂತರ ಕೃಷಿ ರಂಗಕ್ಕೆ ಹೆಚ್ಚು ಪೆಟ್ಟು ಬೀಳುತ್ತಿದೆ. ಇವತ್ತು ಇಂಪೋರ್ಟ್ ಪಾಲಿಸಿ ಇರಬಹುದು, ಎಕ್ಸ್‌ಪೋರ್ಟ್ ಇರಬಹುದು, ಬೇರೆ ದೇಶದಿಂದ ಇಂಪೋರ್ಟ್ ಮಾಡಿಕೊಂಡಂತಹ ಪಾಮ್ ಆಯಿಲ್ ಒಂಬತ್ತು ಹತ್ತು ರೂಪಾಯಿ ಇದ್ದರೆ, ಇಲ್ಲಿ 17 ರೂಪಾಯಿ ಇದೆ. ಅವರಲ್ಲಿ ಬೇಕಾದಷ್ಟು ಸಿಗುತ್ತದೆ. ಅವರು ಕಳುಹಿಸಿದರೆ ಇಲ್ಲಿ ಚೀಪ್ ಆಗುತ್ತದೆ. ಹೀಗಾಗಿ ನಮ್ಮಲ್ಲಿ ಬೆಳೆಯುವಂತಹ ಎಣ್ಣೆ ತಯಾರಿಸುವಂತಹ ಬೀಜಗಳು ಬೆಲೆ ಕುಸಿತವಾಗುವ ಸಾಧ್ಯತೆ ಇದೆ. ಆದುದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಆದುದರಿಂದ ಈ ಗ್ಯಾಟ್ ಮತ್ತು ಡಬ್ಲ್ಯೂಟಿಒ ಇದರ ಬಗ್ಗೆ ಇನ್ನು ಹೆಚ್ಚು ಚರ್ಚೆ ಆಗಬೇಕಾಗಿತ್ತು. ಅದರ ಬಗ್ಗೆ ಅವಕಾಶ ಸಿಗಲಿಲ್ಲ. ಅದರ ಬಗ್ಗೆ ಸಹ ಡಾ: ಪ್ರೇಮ್‌ನಾಥ್ ಅವರ ಜೊತೆಯಲ್ಲಿ ಚಿಂತನೆ ಮಾಡಬೇಕೆಂದು ಇದೆ ಎನ್ನುವ ವಿಚಾರ ಹೇಳಿದಿರಿ. ಈ ಒಪ್ಪಂದಗಳು ಮತ್ತು ಅದರ ಪರಿಣಾಮಗಳು ಇದರ ಬಗ್ಗೆ ಹೆಚ್ಚು ಚಿಂತನೆಯಾಗಬೇಕಾಗಿದೆ. ಮತ್ತು ಈ ಕೃಷಿ ರಂಗಕ್ಕೆ ಇದರಿಂದ ಆಗುವಂತಹ ಅಡ್ವಾಂಟೇಜ್ ಹಾಗೂ ಡಿಸ್-ಅಡ್ವಾಂಟೇಜ್ ಬಗ್ಗೆ ಚಿಂತನೆ ಆಗಬೇಕಾಗಿದೆ. ಮತ್ತು ಇವತ್ತು ನಾವು ತಕ್ಷಣ ಮಾಡಬೇಕಾಗಿರುವುದು ಏನೆಂದರೆ, ಒಂದು ಪಾಲಿಸಿ ಡಿಸಿಷನ್ ಇದರ ಬಗ್ಗೆ ಕೇಂದ್ರ ಸರ್ಕಾರ ಕೈಗೊಳ್ಳಬೇಕು. ಈ ಗ್ಯಾಟ್ ಮತ್ತು ಡಬ್ಲ್ಯೂಟಿಒ ಒಪ್ಪಂದದಿಂದ ನಮಗೆ ಅನಾನುಕೂಲತೆಯಾಗಿದೆ, ಆ ಒಂದು

ನಿರ್ಣಯದಿಂದ ಹೊರಗೆ ಬರಲು ಏನು ಪ್ರಯತ್ನ ಮಾಡಬೇಕು ಅದನ್ನು ಚಿಂತನೆ ಮಾಡಬೇಕಾಗಿದೆ. ಇಲ್ಲದೆ ಇದ್ದರೆ ನಾವೇನು ಈ ಒಪ್ಪಂದಗಳನ್ನು ಮಾಡಿಕೊಂಡಿದ್ದೇವೆ ಅದರಿಂದ ಬೆಲೆ ಕುಸಿತ ಪ್ರಾರಂಭವಾದಮೇಲೆ ಈ ಕಾರಣಕ್ಕಾಗಿ ಅನ್ಯಾಯವಾಗುತ್ತಿದೆ, ದುಷ್ಪರಿಣಾಮಗಳು ಆಗುತ್ತಿವೆ ಎಂದು ಎಲ್ಲಾ ಕಡೆ ಇರುವಂತಹ ಸುದ್ದಿ. ಅದರ ಸಲುವಾಗಿ ನಿರ್ದಿಷ್ಟವಾದ ನಿರ್ಣಯಗಳನ್ನು ಈ ಸಂಬಂಧದಲ್ಲಿ ಕೈಗೊಳ್ಳಬೇಕಾಗುತ್ತದೆ. ಈಗ ತುರ್ತಾಗಿ ಬೆಳೆದ ಬೆಳೆಗಳು ಅದು ಮೆಕ್ಕೆಜೋಳ ಇರಬಹುದು, ತೆಂಗು, ಅಡಿಕೆ ಇವತ್ತು ಇಲ್ಲಿ ಕೆಲವೊಂದು ಮಿನಿಮಂ ಸಪೋರ್ಟ್ ಪ್ರೈಸ್ ಕೇಂದ್ರ ಸರ್ಕಾರದವರು ಅನೌನ್ಸ್ ಮಾಡಿದ್ದಾರೆ. ಖರೀದಿ ಕೇಂದ್ರ ತೆಗೆಯಬೇಕೆಂದು ನಾವೆಲ್ಲಾ ಹೇಳಿದೆವು. ಆದರೆ ಈಗಾಗಲೇ ನೂರು ಕೋಟಿ ರೂಪಾಯಿ ಆವರ್ತ ನಿಧಿ ಕೂಡ ಅನೌನ್ಸ್ ಮಾಡಿದ್ದಾರೆ. ಈಗ ನಾವು ಕಳೆದ ಒಂದು ಹದಿನೈದು ದಿವಸದ ಹಿಂದೆ ಈ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. ಮಾನ್ಯ ಶಿವಾನಂದ ಪಾಟೀಲ್‌ರವರು ಹೇಳಿದಂತಹ ಜೋಳದ ಬಗ್ಗೆ ಇರಬಹುದು. ಇನ್ನು ಕೇಂದ್ರ ಸರ್ಕಾರದವರು ಬಿಜಾಪುರದಲ್ಲಿ ಆಹಾರ ಖರೀದಿ ಕೇಂದ್ರವನ್ನು ತೆರೆಯಲು ಅನುಮತಿಯನ್ನು ಕೊಟ್ಟರೂ ಅದು ಸ್ಥಾಪನೆ ಆಗಿಲ್ಲ. ಈ ಕೆಲಸಗಳು ಯುದ್ಧದೋಪಾದಿಯಲ್ಲಿ ಆಗಬೇಕಾಗುತ್ತದೆ. ಆ ಕೆಲಸವಾಗಿಲ್ಲವೆನ್ನುವುದರ ಬಗ್ಗೆ ಬಹಳಷ್ಟು ಶಾಸಕರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆ. ಮೊನ್ನೆ ನಾನು ಮಾತನಾಡುವಂತಹ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಹಾಕಿದ್ದು ಏನೆಂದರೆ ಈಗ ರಾಜ್ಯ ಸರ್ಕಾರದವರು ಒಂದು ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಅನೌನ್ಸ್ ಮಾಡಿದ್ದೀರಿ, ಮತ್ತೆ ರಾಜ್ಯದಲ್ಲಿ ನಾವು ಇಲ್ಲಿಯವರೆಗೆ ಎಷ್ಟು ಖರೀದಿ ಕೇಂದ್ರಗಳನ್ನು ತೆಗೆದಿದ್ದೀರಿ? ಎಷ್ಟು ಕ್ವಿಂಟಾಲ್ ದವಸ ಧಾನ್ಯಗಳನ್ನು ನೀವು ಮಿನಿಮಮ್ ಸಪೋರ್ಟ್ ಪ್ರೈಸ್‌ನಲ್ಲಿ ರೈತರಿಂದ ಖರೀದಿ ಮಾಡಿದ್ದೀರಿ? ಅದರ ಕ್ವಾಂಟಿಟಿ ಎಷ್ಟು? ಈಗಾಗಲೇ ಎಷ್ಟು ಹಣವನ್ನು ಇದಕ್ಕೆ ಕೊಟ್ಟಿದ್ದೀರಿ? ಇದರ ಅಂಕಿಸಂಖ್ಯೆಗಳು ನಮಗೆ ಗೊತ್ತಾದರೆ, ಇದರಲ್ಲಿ ರಾಜ್ಯ ಸರ್ಕಾರಕ್ಕೆ ಎಷ್ಟು ಕಳಕಳಿ ಇದೆಯೆಂಬುದು ನಮಗೆ ಗೊತ್ತಾಗುತ್ತಿತ್ತು. ಇದರಿಂದ ರೈತರಿಗೂ ವಿಶ್ವಾಸ ಬರುತ್ತಿತ್ತು, ಅವರಿಗೂ ಸರ್ಕಾರ ಖರೀದಿ ಮಾಡುವ ವಿಚಾರದಲ್ಲಿ, ರಾಜ್ಯ ಸರ್ಕಾರ ಇಷ್ಟು ಸಪೋರ್ಟ್ ಪ್ರೈಸ್ ಕೊಟ್ಟು ರೈತರಿಂದ ಆಹಾರಧಾನ್ಯವನ್ನು ಖರೀದಿ ಮಾಡುತ್ತಿದೆಯೆಂಬುದು ತಿಳಿಯುತ್ತಿತ್ತು, ಮತ್ತೆ ಮಾರ್ಕೆಟ್‌ನಲ್ಲೂ ರೈತರು ಉತ್ಪಾದನೆಗೆ ಬೆಲೆ ಸಿಗುವುದಕ್ಕೆ ಅನುಕೂಲವಾಗುತ್ತದೆ. ಇದೊಂದು ಸೈಕಾಲಜಿ ಕ್ರಿಯೇಟ್ ಆಗಬೇಕಾಗುತ್ತದೆ; ನಾವು ಅಷ್ಟನ್ನೂ ಖರೀದಿ ಮಾಡಿ ಎಂದು ಹೇಳುವುದಿಲ್ಲ, ಆದರೆ ಮಾರ್ಕೆಟ್ ಇಂಟರ್‌ವೆನ್ಷನ್ ಸ್ವಲ್ಪ ಜಾಸ್ತಿ ಪ್ರಮಾಣದಲ್ಲಿ ಸರ್ಕಾರ ಮಾಡಿದರೆ ರೈತರಿಗೂ ವಿಶ್ವಾಸ ಮೂಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಬೇರೆ ಬೇರೆ ವ್ಯಾಪಾರಸ್ಥರೂ ಆಹಾರವನ್ನು ಖರೀದಿ ಮಾಡುವುದಕ್ಕೆ ಚಾಲು ಮಾಡುತ್ತಾರೆ. ಈಗ ಮಾನ್ಯ

ಮುಖ್ಯಮಂತ್ರಿಯವರು ಕೊಟ್ಟಿರುವಂತಹ ಉತ್ತರದಲ್ಲಿ ಇದು ಸ್ಪಷ್ಟವಾಗಿಲ್ಲ. ಈ ವಿಚಾರವನ್ನು ಮಾನ್ಯ ಕೃಷಿಮಂತ್ರಿಗಳಾದ ಟಿ.ಬಿ. ಜಯಚಂದ್ರರವರು ಸ್ಪಷ್ಟವಾಗಿ ತಿಳಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಇನ್ನೂ ಹಲವಾರು ವಿಷಯಗಳ ಬಗ್ಗೆ ಚಿಂತನೆ ಮಾಡುವಂಥಾದ್ದು ಇದೆ. ಈ ರೀತಿಯಾಗಿ ಚಿಂತನೆ ಮಾಡುವಂತಹ ಅಗತ್ಯವೂ ಇದೆ. ಇದೆಲ್ಲವನ್ನು ನಾವು ವಿಚಾರ ಮಾಡಿ ಕೇಂದ್ರ ಸರ್ಕಾರಕ್ಕೆ ನಿಯೋಗವನ್ನು ಹೋಗುತ್ತಿದ್ದೇವೆ, ಕೇಂದ್ರ ಸರ್ಕಾರದ ಕೃಷಿ ಸಚಿವರಾದ ಶ್ರೀ ನಿತೀಶ್ ಕುಮಾರ್‌ರವರು ನಿನ್ನೆ ಲೋಕಸಭೆಯಲ್ಲಿ ಬಹಳ ದೀರ್ಘವಾದಂತಹ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರ ಪೂರ್ಣ ವರದಿಯನ್ನು ಈಗ ನಾನು ತರಿಸುತ್ತಿದ್ದೇನೆ, ಬಹಳಷ್ಟು ವಿಚಾರಗಳನ್ನು ಇದರಲ್ಲಿ ಯಾವ ರೀತಿಯ ಬದಲಾವಣೆಯನ್ನು ಮಾಡಬೇಕು, ಕೃಷಿ ನೀತಿಯನ್ನು ಯಾವ ರೀತಿಯಾಗಿ ಜಾರಿಗೆ ತರಬೇಕೆನ್ನುವುದನ್ನು ಬಹಳ ಕೂಲಂಕುಷವಾಗಿ ಚರ್ಚೆ ಮಾಡಿದ್ದಾರೆ. ನಾವು ಸಹ ಅವರ ಜೊತೆಯಲ್ಲಿ ಚರ್ಚೆ ಮಾಡಿ ನಮ್ಮ ರಾಜ್ಯದ ರೈತರಿಗೆ ಯಾವ ರೀತಿಯಲ್ಲಿ ಅನುಕೂಲವಾಗಬೇಕೆಂಬುದರ ಬಗ್ಗೆ ಪ್ರಯತ್ನ ಮಾಡಬೇಕು. ಇನ್ನು ಮಾನ್ಯ ಮುಖ್ಯಮಂತ್ರಿಯವರು ಪಂಜಾಬ್ ಉದಾಹರಣೆಯನ್ನು ಕೊಟ್ಟು ಮಾತನಾಡಿದರು. ಈಗ ನಾವು ಕ್ವಾಲಿಟಿ ಕಂಟ್ರೋಲ್ ಬಗ್ಗೆ ಮಾತನಾಡುತ್ತೇವೆ, ಇಷ್ಟು ಪ್ರಮಾಣದ ಕ್ವಾಲಿಟಿ ಇಲ್ಲವೆಂದರೆ ಅದನ್ನು ರಿಜೆಕ್ಟ್ ಮಾಡುವಂಥಾದ್ದು, ಅಂದರೆ ಶೇಕಡ 14ರಷ್ಟು ತೇವಾಂಶವಿರಬೇಕು, ಅದಕ್ಕಿಂತಲೂ ಜಾಸ್ತಿ ತೇವಾಂಶವಿದ್ದರೆ ರಿಜೆಕ್ಟ್ ಮಾಡುವಂಥಾದ್ದು. ಈ ರೀತಿಯಾದಾಗ ರೈತರಿಗೆ ಅನ್ಯಾಯವಾಗುತ್ತದೆ. ಅದಕ್ಕೆ ಶೇಕಡ 1, ಶೇಕಡ 2 ರಷ್ಟು ಹೆಚ್ಚು ಕಡಿಮೆ ಇದ್ದರೆ ಸ್ವಲ್ಪ ಟಾಲರೆಟ್ ಮಾಡಿ ಆಹಾರವನ್ನು ಖರೀದಿ ಮಾಡಿದರೆ ರೈತರು ಉದ್ಧಾರವಾಗುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಪಂಜಾಬ್ ರಾಜ್ಯದಲ್ಲಿ ಗುಣಮಟ್ಟದ ಬಗ್ಗೆ ಸ್ವಲ್ಪ ರಿಯಾಯಿತಿಯನ್ನು ಕೊಟ್ಟಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಹೇಳಿದರು. ತಾವು ಸಹ ಅದೇ ರೀತಿಯಲ್ಲಿ ನಮ್ಮ ರೈತರಿಗೆ ರಿಯಾಯಿತಿ ಕೊಡುವ ಬಗ್ಗೆ ಕೇಳಿದೆವು, ಈ ರೀತಿಯಲ್ಲಿ, ತಾವು ಸ್ವಲ್ಪ ಪ್ರಯತ್ನ ಮಾಡಿ. ತಾವು ಕೇಂದ್ರ ಸರ್ಕಾರದ ಪರ್ಮಿಷನ್ ತೆಗೆದುಕೊಂಡು ಇದರ ಬಗ್ಗೆಯೂ ಏನಾದರೂ ಪ್ರಯತ್ನ ಮಾಡಿದರೆ ಕೆಲವೊಂದು ಕಡೆಗಳಲ್ಲಿ ಈ ತೊಂದರೆಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ತಾವು ಕೆಲವೊಂದು ಸ್ಪಷ್ಟೀಕರಣವನ್ನು ಕೊಡಬೇಕು, ಅದೇನೆಂದರೆ ಇವತ್ತು ರಾಜ್ಯದಲ್ಲಿ ಎಷ್ಟು ಖರೀದಿ ಕೇಂದ್ರಗಳು ಆಗಿವೆ, ಎಷ್ಟು ಆಹಾರವನ್ನು ಖರೀದಿ ಮಾಡಿದ್ದೀರಿ? ಎಂಬುದನ್ನು ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕೃಷಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಡಬ್ಲ್ಯುಟಿಒ ಎನ್ನುವಂಥಾದ್ದು 1991-92 ರಲ್ಲಿ ಮಾನ್ಯ ಪಿ. ನರಸಿಂಹರಾವ್‌ರವರು ಪ್ರಧಾನಮಂತ್ರಿಯಾಗಿದ್ದಾಗ ಪ್ರಾರಂಭವಾಗಿರುವಂಥಾದ್ದು ಅಲ್ಲ. 1948ರಲ್ಲಿ ಪ್ರಪಂಚದ

ಎರಡನೆಯ ಮಹಾಯುದ್ಧವಾದ ಮೇಲೆ ಗ್ಯಾಟ್ ಎನ್ನುವಂಥಾದ್ದು ಬಂದಿದ್ದು. ಭಾರತ ದೇಶ ಕೂಡ ಮೊದಲಿಗೆ ಪ್ರಾರಂಭವಾಗಿ a founder-signatory of this GATT. ದೇಶದಲ್ಲಿ ಅದು ಕೂಡ ಒಂದಾಗಿತ್ತು. 1948ರಿಂದ ಇಲ್ಲಿಯವರೆಗೂ ಕೂಡ ಸಾಕಷ್ಟು ಡಿಲಿಬರೇಷನ್‌ನಲ್ಲೂ ನಮ್ಮ ದೇಶ ಭಾಗವಹಿಸಿದೆ, ನೆಗೋಷಿಯೇಷನ್‌ನಲ್ಲೂ ಭಾಗವಹಿಸಿದೆ. 1994ರವರೆಗೂ ಡಂಕೆಲ್ ಅರ್ಥರ್‌ರವರನ್ನು ಇದಕ್ಕೆ ಒಂದು ಶಾಸನಬದ್ಧವಾದಂತಹ ಅಧಿಕಾರವನ್ನು ಕೊಡಬೇಕೆಂದು ಹೇಳಿ ಡಬ್ಲ್ಯೂಟಿಓ (ವಿಶ್ವ ವ್ಯಾಪಾರೀಕರಣ ಸಂಸ್ಥೆ)ಯನ್ನು ಕ್ರಿಯೇಟ್ ಮಾಡಬೇಕೆನ್ನುವ ಚಿಂತನೆ ಬಂದಾಗ ಇದು 1995ರಿಂದ ಜಾರಿಗೆ ಬಂತು. ಭಾರತ ದೇಶದಲ್ಲಿ ಯಾವುದೇ ಸರ್ಕಾರವಿರಲಿ ಗ್ಯಾಟ್‌ಗೆ ಅಗ್ರಿಮೆಂಟ್ ಆಗಿದ್ದಾಗ ಫೌಂಡರ್ ಕಂಟ್ರಿಯಾಗಿದ್ದರಿಂದ ಡಬ್ಲ್ಯೂಟಿಓಗೆ India is also a party for the discussion and automatically it is a signatory for the W.T.O. ಆದರೆ ಈಗ ಡಬ್ಲ್ಯೂಟಿಓಗೆ ನಾವು ಸಿಗ್ನೇಟರಿಗಳಾದ ಮೇಲೆ ನಮ್ಮ ರಾಷ್ಟ್ರದಲ್ಲಿರುವಂತಹ ವೈವಿಧ್ಯತೆ ಏನೆಂದರೆ ನಮ್ಮ ರಾಷ್ಟ್ರದಲ್ಲಿ ಬೆಳೆಯುವಂತಹ ಬೆಳೆಗಳೇ ಒಂದು ರೀತಿಯಲ್ಲಿರುತ್ತವೆ. ನೆರೆ ರಾಜ್ಯಗಳ ಅಂದರೆ ಆಂಧ್ರ ಪ್ರದೇಶವಿರಬಹುದು, ಮಹಾರಾಷ್ಟ್ರವಿರಬಹುದು, ಬೇರೆ ಬೇರೆ ರಾಜ್ಯಗಳ ಬೆಳೆಗಳು ಬೇರೆ ಬೇರೆ ರೀತಿಯಲ್ಲಿರುತ್ತವೆ. ಈ ಭಿನ್ನವಾದಂತಹ ಬೆಳೆಗಳನ್ನು ಬೆಳೆಯುವಂತಹ ಸಂದರ್ಭದಲ್ಲಿ "ವಿಶ್ವ ವ್ಯಾಪಾರೀಕರಣ ಸಂಸ್ಥೆ" ಸಂಧಾನ ಮಾಡುವಂತಹ ಸಂದರ್ಭದಲ್ಲಿ ಕ್ವಾಂಟಿಟಿ ರಿಸ್ಟ್ರಿಕ್ಷನ್ ತೆಗೆದುಹಾಕುವಂತಹ ಸಂದರ್ಭದಲ್ಲಿ, ನಮ್ಮ ರಾಜ್ಯ ಸರ್ಕಾರದ ಯಾವುದೇ ರೀತಿಯಾದಂತಹ ಸಲಹೆಗಳನ್ನು ಕೇಂದ್ರ ಸರ್ಕಾರದವರು ಪಡೆಯಲಿಲ್ಲ. ಅಲ್ಲಿ ಏನಾಗಿದೆ ಎಂದರೆ ಇದರ ಕಾರ್ಯವನ್ನು ನಿರ್ವಹಿಸುವಂತಹ ಇಲಾಖೆ ಯಾವುದೆಂದರೆ ವಾಣಿಜ್ಯ ಇಲಾಖೆ, ಕೃಷಿ ಇಲಾಖೆಯಲ್ಲ. ಅಲ್ಲಿ ವಾಣಿಜ್ಯ ಇಲಾಖೆಯ ಕಾಮರ್ಸ್ ಮಿನಿಸ್ಟ್ರಿಯವರು ಹ್ಯಾಂಡಲ್ ಮಾಡುತ್ತಿರುವುದರಿಂದ ನಮಗೆ ಯಾವುದೇ ರೀತಿಯಲ್ಲೂ ವಿಷಯಗಳು ಗೊತ್ತಾಗುವುದಿಲ್ಲ. ಈ ಕಾರಣಕ್ಕೋಸ್ಕರ ಮೊದಲನೆಯದಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ತೀರ್ಮಾನಿಸಿದಂತೆ ಒಂದು ಟಾಸ್ಕ್ ಫೋರ್ಸ್ ಸಮಿತಿ ಮಾಡಿದ್ದು, ಇದು ಇನ್ನು ಒಂದು ವಾರದಲ್ಲಿ ಅಥವಾ 15 ದಿವಸಗಳಲ್ಲಿ ವರದಿಯನ್ನು ಸಮಿತಿಯ ಮುಂದೆ ಕೊಡುವಂತಹ ಕೆಲಸವನ್ನು ಮಾಡುತ್ತಾರೆ. ಇನ್ನು 10-15 ದಿವಸಗಳಲ್ಲಿ ನಾನು ಮಾನ್ಯ ವಿರೋಧಪಕ್ಷದ ನಾಯಕರುಗಳನ್ನು ಮತ್ತು ಇದರಲ್ಲಿ ಆಸಕ್ತಿ ಇರುವಂತಹ ಎಲ್ಲಾ ಶಾಸಕರುಗಳನ್ನು ಸೇರಿಸಿ ಇಂಟ್ರಾಕ್ಷನ್ ಸೆಷನ್ ಮಾಡುವುದಕ್ಕೆ ತಯಾರಾಗಿದ್ದೇವೆ. ನಾವು ಇದರ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿದುಕೊಳ್ಳಬೇಕಾಗುತ್ತದೆ, ಇದರ ಸಾಧಕ ಬಾಧಕಗಳನ್ನು ತಿಳಿದುಕೊಳ್ಳಬೇಕಾಗುತ್ತದೆ ಈಗ ವಿಧಾನ ಸಭೆ ಮತ್ತು ವಿಧಾನ ಪರಿಷತ್‌ಗಳಲ್ಲಿ ಮೂಡಿ ಬಂದಂತಹ ಅಭಿಪ್ರಾಯಗಳೇನೆಂದರೆ ನಾವು ಇದರಿಂದ ಹೊರಗೆ ಬರುವುದಕ್ಕೆ ಸಾಧ್ಯವೇ? ಎನ್ನುವಂಥಾದ್ದು, ಇದು ಸದನದ ಹೊರಗೂ ಆ

ಒಂದು ಅಭಿಪ್ರಾಯವಿದೆ. ಸುಮಾರು 400 ಅಗ್ರಿಮೆಂಟುಗಳು ಇವೆ., ಅದನ್ನು ಅರ್ಥ ಮಾಡಿಕೊಳ್ಳುವಂಥಾದ್ದು ಬಹಳ ಕಷ್ಟವಿರುವಂಥಾದ್ದು, ಅಂದಾಗ ನಾವೆಲ್ಲರೂ ಒಂದು ಸಭೆಯನ್ನು ಇದರ ಬಗ್ಗೆ ನಡೆಸಿದಾಗ ನಾವು ಈ ರೀತಿಯಾಗಿ ಚರ್ಚೆಯನ್ನು ಮಾಡಬೇಕೆನ್ನುವಂತಹ ಅಭಿಪ್ರಾಯ ಕೂಡ ಬರುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ತೀರ್ಮಾನ ಮಾಡಿದೆವು; ಟಾಸ್ಕ್ ಫೋರ್ಸ್ ವರದಿ ಕೊಡಬೇಕಾದರೆ ಅದು ಕರ್ನಾಟಕ ರಾಜ್ಯದಲ್ಲಿ ಬೆಳೆಯುವಂತಹ ಬೆಳೆಗಳಿಗೆ ಯಾವ ರೀತಿಯ ತಂತ್ರಗಾರಿಕೆಯಿಂದ ಬೆಳೆಯಬೇಕು, ಯಾವ ರೀತಿಯಾಗಿ ಲಿಬರಲೈಸ್ ಮಾಡಬೇಕು, ಯಾವ ರೀತಿಯಾಗಿ ಪ್ರೋತ್ಸಾಹ ಕೊಡಬೇಕು, ಯಾವ ಬೆಳೆಗಳ ಉತ್ಪಾದನೆ ಮಾಡಬಹುದು, ಮಾರ್ಕೆಟ್ ಬಗ್ಗೆ, ಇವೆಲ್ಲದರ ಬಗ್ಗೆ ವರದಿಯಲ್ಲಿ ಸಲಹೆಗಳನ್ನು ಕೊಡುತ್ತಿದ್ದಾರೆ. ಆ ವರದಿ ಬಂದಮೇಲೆ ನಾವು ವ್ಯಾಪಕವಾದಂತಹ ಚರ್ಚೆ ಮಾಡುವಂಥಾದ್ದಕ್ಕೆ ಮತ್ತು ಕೇಂದ್ರ ಸರ್ಕಾರದಲ್ಲಿ ವ್ಯವಹರಿಸುವುದಕ್ಕೆ ಅವಕಾಶವಾಗುತ್ತದೆನ್ನುವಂತಹ ವಿಶ್ವಾಸವಿದೆ. ಈಗಾಗಲೇ ತಮಗೆ ಗೊತ್ತಿರುವಂತಹ ಕನಿಷ್ಠ ಬೆಂಬಲ ಬೆಲೆ ಇರುವಂಥಾದ್ದನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ. ಆದರೆ ನಾವು ಶಿಫಾರಸ್ಸು ಮಾಡಿದಾಗ ಅಂತಿಮವಾಗಿ ಇಡೀ ರಾಷ್ಟ್ರ ಮಟ್ಟದಲ್ಲಿ ಒಂದೇ ಬೆಲೆಯನ್ನು ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತಹ ರೀತಿಯಲ್ಲಿ ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತಾರೆ. ನಮ್ಮ ರಾಜ್ಯ ಸರ್ಕಾರ ಮಾಡಿದಂತಹ ಶಿಫಾರಸ್ಸಿಗೂ ಕೇಂದ್ರ ಸರ್ಕಾರ ಮಾಡುವಂತಹ ಬೆಲೆಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಈ ವಿಚಾರವಾಗಿ ಒಂದು ಉದಾಹರಣೆ ಹೇಳುವುದಾದರೆ ತೊಗರಿ ಬೆಳೆಗೆ ನಮ್ಮ ರಾಜ್ಯ ಸರ್ಕಾರದ ನಿಲುವು 1,650 ರೂಪಾಯಿಗಳಿಗೆ ಶಿಫಾರಸ್ಸು ಮಾಡಿದರೆ ಕೇಂದ್ರ ಸರ್ಕಾರದವರು 1,200 ರೂಪಾಯಿಗಳನ್ನು ನಿಗದಿ ಮಾಡಿರುವಂಥಾದ್ದು. ಇಲ್ಲಿ ಮೆಕ್ಕೆಜೋಳ ಒಂದನ್ನು ಬಿಟ್ಟರೆ ಇನ್ನು ಎಲ್ಲಾ ಬೆಳೆಗಳಿಗೂ ನಾವು ಶಿಫಾರಸ್ಸು ಮಾಡಿದ್ದಕ್ಕಿಂತಲೂ ಕಡಿಮೆ ಬೆಲೆ ನಿಗದಿಯಾಗಿರುವಂಥಾದ್ದು, ಅಂದಾಗ ನಾವು ಉತ್ಪಾದನೆಯಲ್ಲಿ ಹೆಚ್ಚು ಸಾಧನೆ ತೋರಿಸುವಂತಹ ಸಾಧನೆ, ಮಾಡುವಂತಹ ಅನಿವಾರ್ಯತೆ ಇವತ್ತು ನಮ್ಮ ಮುಂದೆ ಇದೆಯೆನ್ನುವಂಥಾದ್ದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಾವು ರಾಷ್ಟ್ರ ಮಟ್ಟದಲ್ಲಿ ನಮ್ಮ ಉತ್ಪಾದನೆ ಮಟ್ಟ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋಲಿಕೆ ಮಾಡಿದಾಗ ಅತ್ಯಂತ ಕನಿಷ್ಠ ಮಟ್ಟದಲ್ಲಿ ನಾವು ಇದ್ದೇವೆ. ಅದಕ್ಕೆ ನಾವು ವಿಶ್ವವಿದ್ಯಾಲಯಗಳನ್ನು ತಾಕೀತು ಮಾಡಿ ಉತ್ಪಾದನೆಯನ್ನು ಜಾಸ್ತಿ ಮಾಡಬೇಕಾದಂತಹ ಸಂದರ್ಭವಿದೆ. ಇನ್ನು ನಾವು ಎಲ್ಲಿ ಕನಿಷ್ಠ ಬೆಲೆಯನ್ನು ಕೊಡಬೇಕಾದಂತಹ....

ಶ್ರೀ ಕೆ. ಶ್ರೀನಿವಾಸ ಗೌಡ ಕುದವನಹಳ್ಳಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ನಾವೆಲ್ಲರೂ ಮಾತನಾಡಿದ ಮೇಲೆ ಎಲ್ಲಕ್ಕೂ ಸೇರಿಸಿ ಒಟ್ಟಿಗೆ ಉತ್ತರವನ್ನು ಕೊಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿದ ಹಾಗೆ ಇಲ್ಲೂ ಭಾಷಣ ಮಾಡಿದರೆ ಹೇಗೆ.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಇದು ಭಾಷಣವಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದಂತಹ ಪ್ರಶ್ನೆಗೆ ಉತ್ತರವನ್ನು ಕೊಡುತ್ತಿದ್ದೇನೆ. ಇಲ್ಲಿ ನೀವು ಭಾಷಣ ಮಾಡಿ, ನಾವು ಭಾಷಣ ಮಾಡುತ್ತೇವೆ. ಅದರಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿದ ಹಾಗೆ ಭಾಷಣ ಮಾಡುತ್ತಿದ್ದಾರೆಂದು ಹೇಳಿದರು. ನಾವು ಕಲಿಯಬೇಕಾದಂಥದ್ದು ಬಹಳ ಇದೆ; ಅದನ್ನು ನಾವು ಕಲಿಯುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ನಿಶ್ಚಿತವಾಗಿ ಕಲಿಯಬೇಕಾಗುತ್ತದೆ, ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ, ನಮಗೆ ಕೆಲವು ಸ್ಪಷ್ಟೀಕರಣ ಬೇಕಾಗಿದೆ.

ಶ್ರೀ ಎಸ್.ಎಂ. ಕೃಷ್ಣ :— ಮಾನ್ಯ ಅಧ್ಯಕ್ಷರೆ, ನಾವು ಸ್ಪಷ್ಟೀಕರಣವನ್ನು ಭಾಷಣದ ಮೂಲಕ ಕೊಡಬೇಕೋ ಸಂಕ್ಷಿಪ್ತ ಮೂಲಕ ಕೊಡಬೇಕೋ? ಇದಕ್ಕೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು :— ಭಾಷಣದ ಮೂಲಕವೇ ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ :— ಕೇಂದ್ರ ಸರ್ಕಾರ ಕನಿಷ್ಠ ಬೆಲೆಯನ್ನು ಒಂದು ಸಾರಿ ಘೋಷಣೆ ಮಾಡಿದ ಮೇಲೆ ಅದನ್ನು ತೆಗೆದುಕೊಳ್ಳುವಂತಹ ಜವಾಬ್ದಾರಿಯೂ ಸಂಪೂರ್ಣವಾಗಿ ಕೇಂದ್ರ, ಸರ್ಕಾರದ ಮೇಲೆ ಇರುತ್ತದೆ. ಇದನ್ನು ಎಫ್.ಸಿ. ಮೂಲಕವೇ ಮಾಡಬೇಕಾಗುತ್ತೆ. ರಾಜ್ಯ ಸರ್ಕಾರ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಬಂಡವಾಳವನ್ನು ಹಾಕುವುದಕ್ಕಾಗುವುದಿಲ್ಲ. ಇದಕ್ಕೆ ಇತಿಮಿತಿಗಳು ಇರುತ್ತವೆ, ನಾವು ಎಲ್ಲಾ ರೀತಿಯ ಸಹಕಾರವನ್ನು ಕೊಡಬೇಕಾಗುತ್ತದೆ. ತಾವು ಎಫ್.ಸಿ.ಐನವರು ತೆಗೆದುಕೊಳ್ಳಬೇಕೆಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾವು ಈಗಾಗಲೇ ಎಫ್.ಸಿ.ಐ.ಗೆ ಜಿಲ್ಲಾಧಿಕಾರಿಗಳಿಗೆ ಎಲ್ಲಿ ಡಿಮ್ಯಾಂಡ್ ಬರುತ್ತದೆ, ಅಲ್ಲಿ ಟಾಸ್ಕ್ ಫೋರ್ಸ್ ಚೇರ್ಮನ್‌ಗಳನ್ನು ಡೆಪ್ಯುಟಿ ಚೀಫ್ ಕಮೀಷನರ್‌ಗಳನ್ನು ಮಾಡಿ ಎಲ್ಲಿ ಅರೈವಲ್ಸ್ ಜಾಸ್ತಿಯಾಗುವಂಥದ್ದನ್ನು ಗಮನದಲ್ಲಿಟ್ಟುಕೊಂಡು ಮಾರ್ಕೆಟಿಂಗ್ ಮಾಡಬೇಕೆಂಬುದನ್ನು ಸರ್ಕಾರೀ ಆಜ್ಞೆಯ ಮೂಲಕ ಮನವಿ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :— ಎಫ್.ಸಿ.ಐ ತಾವು ಇಲ್ಲಿಯವರೆಗೂ ಎಷ್ಟು ಖರೀದಿ ಕೇಂದ್ರಗಳನ್ನು ಮಾಡಿದ್ದೀರಿ? ಎಷ್ಟು ಆಹಾರವನ್ನು ಪರ್ಚೇಸ್ ಮಾಡಿದ್ದೀರೆಂಬುದನ್ನು ತಿಳಿಸಿ.

ಶ್ರೀ ಟಿ.ಬಿ. ಜಯಚಂದ್ರ :— ಎಫ್.ಸಿ.ಐ ಆ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲಿದೆ. ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿದ್ದರು ಇದುವರೆವಿಗೂ ಕೊಳ್ಳುವ ಕೇಂದ್ರಗಳನ್ನು ಪ್ರಾರಂಭ ಮಾಡಿಲ್ಲ, ಬೇಗ ತೆರೆಯಬೇಕೆಂದು ಒತ್ತಾಯವನ್ನು ಕೂಡ ನಾವು ಬರುವ ದಿನಗಳಲ್ಲಿ ಕೇಂದ್ರ ಸರ್ಕಾರಕ್ಕೆ ಹೋದಾಗ ಮಾಡಬೇಕಾಗುತ್ತದೆ. ಈಗಾಗಲೇ ಮಾರ್ಕ್‌ಫೆಡ್‌ನಿಂದ ನಾವು 22 ಕೇಂದ್ರಗಳನ್ನು ಮಾಡಿದ್ದೇವೆ, ಒಂದು ಲಕ್ಷದ ಹದಿನೈದು ಸಾವಿರ ಆರುನೂರು ತೊಂಭತ್ತು ಕ್ವಿಂಟಾಲ್‌ನಷ್ಟು ನಿನ್ನೆಯವರೆಗೆ ಕೊಳ್ಳುವ ಕೆಲಸವಾಗಿದೆ. ಭತ್ತವನ್ನು 17 ಕೇಂದ್ರಗಳಾದ ರಾಯಚೂರು, ಮಾನ್ವಿ, ಸಿಂಧನೂರು, ಕೊಪ್ಪಳ, ಮಂಡ್ಯ, ಹಾಸನ, ಮೈಸೂರು, ಸಿರಿಗುಪ್ಪ, ಬಳ್ಳಾರಿ, ಹೊಸಪೇಟೆ, ಹಳಿಯಾಳ, ಮದ್ದೂರು, ಶ್ರೀರಂಗಪಟ್ಟಣ, ದಾವಣಗೆರೆ ಇತ್ಯಾದಿ ಕಡೆಗಳಲ್ಲಿ, ಕೊಳ್ಳುವ ಕೇಂದ್ರಗಳನ್ನು ತೆರೆಯಬೇಕೆಂದು ತೀರ್ಮಾನ ಮಾಡಿದ್ದೇವೆ. ಆದರೆ ಈಗಾಗಲೇ ನಾವು ಕೊಳ್ಳುವ ಕೇಂದ್ರಗಳನ್ನು ಆರಂಭ ಮಾಡಿದ್ದರೂ ಕೂಡ ಅರೈವಲ್ಸ್ ಜಾಸ್ತಿ ಬರುತ್ತಿಲ್ಲ. ಎಫೆಕ್ಟಿವ್ ಸ್ಟ್ಯಾಂಡರ್ಡ್ ಅನ್ನು ಕೇಂದ್ರ ಸರ್ಕಾರ ನಿರ್ಧಾರ ಮಾಡಿದ್ದಾರೆ, ಆ ಮಟ್ಟದಲ್ಲಿ ಇಲ್ಲದಿದ್ದರೆ ನಾವು ಕೊಳ್ಳಲಾಗುವುದಿಲ್ಲ, ಹಾಗೆ ಎಫ್‌ಸಿಐನವರು ಕೂಡ ಕೊಳ್ಳಲಾಗುವುದಿಲ್ಲ, ಹಾಗಾಗಿ ಕೆಲವು ಕೇಂದ್ರಗಳಲ್ಲಿ ಕೊಳ್ಳುವ ಕೆಲಸ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ಆದರೆ, ಮೈಜ್‌ನಲ್ಲಿ ಸಾಕಷ್ಟು ಎಫೆಕ್ಟಿವ್ ಸ್ಟ್ಯಾಂಡರ್ಡ್ಸ್ ಕಂಡುಬರುತ್ತಿದೆ; ಮೊನ್ನೆ ನಮ್ಮ ಆಹಾರ ಸಚಿವರು ಕೇಂದ್ರ ಆಹಾರ ಸಚಿವರೊಂದಿಗೆ ಮಾತನಾಡಿ ಇದಕ್ಕೆ ನಾನೂರು ರೂಪಾಯಿಗಳನ್ನು ನಿಗಧಿಮಾಡಿದ್ದಾರೆ, FAQ (Fair Average Quality) ಸಡಿಲಗೊಳಿಸಿ ಕೊಳ್ಳುವ ಭರವಸೆಯನ್ನು ಕೂಡ ಕೊಟ್ಟಿದ್ದಾರೆ. ಅದನ್ನು ನಾವು ಕೇಂದ್ರ ಸರ್ಕಾರದಿಂದ ನಿರೀಕ್ಷೆ ಮಾಡುತ್ತಿದ್ದೇವೆ. ಅದು ಬಂದ ಮೇಲೆ ಎಲ್ಲಾ ಕ್ವಾಂಟಿಟಿಯನ್ನು ಅಬ್‌ಸಾರ್ಬ್ ಮಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ ಬೈರವನಹಳ್ಳಿ (ಕೋಲಾರ) :— ಮಾನ್ಯ ಅಧ್ಯಕ್ಷರೆ, ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಗಮನಿಸಿದ್ದೇನೆ. ರಾಜ್ಯಕ್ಕೆ ಅನ್ವಯಿಸುವ ಸಾಕಷ್ಟು ಬೆಂಬಲ ಬೆಲೆ ನಮ್ಮಲ್ಲೂ ಕೂಡ ಇದೆ, ಆದರೆ ಡಿಸಿಹೆಚ್, 4 ಶಾರ್ಟ್ ಸ್ಟೇಬಲ್ ಇದಕ್ಕೆ ಮಾತ್ರ ಬೆಂಬಲ ಕೊಡಲಾಗಿದೆ. ಡಿಸಿಹೆಚ್ 32 ಲಾಂಗ್ ಸ್ಟೇಬಲ್ ಹತ್ತಿಯಾಗಿದ್ದು, ದೇಶದಲ್ಲಿ ನಮ್ಮಲ್ಲಿಯೇ ಹೆಚ್ಚಾಗಿ ಬೆಳೆಯಲಾಗುತ್ತದೆ. ಎಲ್ಲೂ ಬೆಳೆಯುವುದಿಲ್ಲ, ಅದಕ್ಕೆ ಬೆಂಬಲ ಬೆಲೆಯನ್ನು ಸೂಚಿಸಿಲ್ಲ. ತೆಂಗಿನ ಮತ್ತು ಅಡಿಕೆ ಬೆಳೆಯ ಬಗ್ಗೆ ಸಾಕಷ್ಟು ಜನ ಹೇಳಲಾಗಿದೆ, ಅದಕ್ಕೆ ಬೆಂಬಲ ಬೆಲೆಯನ್ನು ನಿಗದಿ ಪ್ರಕಟಿಸಿಲ್ಲ. ನೆಫೆಡ್ ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಎಡಿಬಲ್ ಕೊಬ್ಬರಿಯನ್ನು ಬೆಂಬಲ ಬೆಲೆಯನ್ನು 3500 ರೂಪಾಯಿಗಳಿಗೆ ಕೊಳ್ಳಲು ಮುಂದೆ ಬರಲಾಗಿದೆ, ಇದರ ಬೆಲೆ ಸ್ವಲ್ಪ ಜಾಸ್ತಿ ಇದೆ. ಈಗ ಕೇರಳ ತಮಿಳುನಾಡು ರಾಜ್ಯಗಳಲ್ಲಿ, ಕೊಬ್ಬರಿಯಲ್ಲಿನ ತೇವಾಂಶ 6 ರಷ್ಟು ಮಾಯಿಸ್ಚರ್ ಅನ್ನು ತೆಗೆದು, ಅಲ್ಲಿ 3250 ರೂಪಾಯಿಗಳಿಗೆ

ಸಾವಿರಾರು ಲೋಡುಗಳನ್ನು ಕೊಳ್ಳಲಾಗುತ್ತಿದೆ. ನಮ್ಮ ರಾಜ್ಯದ ಸಮುದ್ರ ತೀರದ ಜಿಲ್ಲೆಗಳಾದ ಕಾರವಾರ, ಮಂಗಳೂರು ಈ ಕಡೆಗಳಲ್ಲಿ ಎಡಿಬಲ್ ಕೊಬ್ರಿ ಮಾಡುವುದಿಲ್ಲ. ಎಣ್ಣೆಗೆ ಉಪಯೋಗಿಸುವಂತಹ ಕೊಬ್ರಿಯನ್ನು ನಾವು ಕೊಳ್ಳುವುದಕ್ಕೆ ಏನು ಕ್ರಮವನ್ನು ತಾವು ತೆಗೆದುಕೊಂಡಿದ್ದೀರೆನ್ನುವುದನ್ನು ಹೇಳಿಲ್ಲ. ನಮ್ಮ ತೋಟದಲ್ಲಿ ನುಸಿ ರೋಗ ಬಂದದ್ದರಿಂದ ದೊಡ್ಡದ್ದರಿಂದ ಚಿಕ್ಕದವರೆಗೆ ಎಲ್ಲವನ್ನು ಕಿತ್ತುಹಾಕಲಾಗಿದೆ, ಆದರೆ ನಮ್ಮ ರಾಜ್ಯದಲ್ಲಿ ಪೂರ್ತಿಯಾಗಿ ಹೋಗಬೇಕಾದರೆ ಯುದ್ಧದೋಪಾದಿಯಲ್ಲಿ ಕ್ರಮವನ್ನು ತೆಗೆದುಕೊಂಡರೆ ಈ ನುಸಿ ರೋಗ ಹೋಗುತ್ತದೆ ಇಲ್ಲದಿದ್ದರೆ ಎಲ್ಲೋ ಒಂದು ತೆಂಗಿನ ಮರದಲ್ಲಿದ್ದರು ಪುನ: ಈ ರೋಗ ಮರಳಿಸಿ ರಾಜ್ಯ ತೆಂಗು ಬೆಳೆ ನಶಿಸಿ ಹೋಗುತ್ತದೆ ಏನೋ ಎನ್ನುವ ಭಾವನೆ ನನ್ನದಾಗಿದೆ, ಆ ಬಗ್ಗೆಯೂ ತಾವು ಕ್ರಮ ತೆಗೆದುಕೊಳ್ಳಬೇಕು. ಇದೇ ಸಮಯದಲ್ಲಿ ಕಳೆದ ವರ್ಷ ಸುಮಾರು ಹದಿನಾರು ಸಾವಿರ ರೂಪಾಯಿಗಳು ಒಂದು ಕ್ವಿಂಟಲ್ ಅಡಿಕೆಗೆ ಇತ್ತು, ಈ ಸಾರಿ ಮೂರು, ಮೂರುವರೆ ಸಾವಿರ ರೂಪಾಯಿಗಳಾಗಿವೆ, ಇದಕ್ಕೆ ಬೆಂಬಲ ಬೆಲೆಯನ್ನು ನಿಗದಿ ಮಾಡಿಲ್ಲ, ಹೀಗೆ ಈ ಎಲ್ಲಾ ವಾಣಿಜ್ಯ ಬೆಳೆಗಳಿಗೆ ಬೆಂಬಲ ಬೆಲೆಯನ್ನು ನಿಗದಿ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. 1993-94 ರಲ್ಲಿ ಜೋಳಕ್ಕೆ ಇದೆ ಪರಿಸ್ಥಿತಿ ಬಂದಿತ್ತು, ಆವಾಗ ಕ್ವಿಂಟಾಲ್ 87 ಸಾವಿರ ರೂಪಾಯಿಗಳಿಗೆ ಕೊಳ್ಳಲಾಯಿತು, ನಾನು ಮಂತ್ರಿಗಳ ಜೊತೆಯಲ್ಲಿ ಮಾತನಾಡಿದಾಗ, ಈಗ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದೆ, ಎಂದು ತಿಳಿಯಿತು. ಈಗ ಏನಾಗಿದೆ ಎಂದರೆ ರೈತನಿಗೆ ಗೊಬ್ಬರಕ್ಕೆ, ಔಷಧಿಗೆ ಹಣವನ್ನು ಸಾಲವಾಗಿ ಕೊಟ್ಟಿರುತ್ತಾರೆ, ಈಗ ಅವರು ಬೆಳೆದ ಬೆಳೆಯೆಲ್ಲಾ ವ್ಯಾಪಾರಿಯವರ ಹತ್ತಿರವಿದೆ. ಹೀಗೆ ವ್ಯಾಪಾರಿಯವರು ರೈತರನ್ನು ಶೋಷಣೆ ಮಾಡುತ್ತಾರೆ, ಇದನ್ನು ಹೇಗೆ ನಿಯಂತ್ರಣ ಮಾಡಬೇಕೆಂಬುದು ಬಹಳ ಮುಖ್ಯವಾದ ಕೆಲಸವಾಗಿ. ಈಗಲೂ ಸರ್ಕಾರ ಬೆಂಬಲ ಬೆಲೆಯನ್ನು ಕೊಡುವುದನ್ನು ನಿಲ್ಲಿಸಿದರೆ 300-320 ರೂಪಾಯಿಗಳಿಗೆ ಜೋಳವನ್ನು ಮಾರುವಂತಹ ಪರಿಸ್ಥಿತಿ ರೈತರಿಗೆ ಬಂದಿದೆ. ತಾವು ನಾನೂರು ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದೀರಿ, ಅಲ್ಲಿ 445 ರೂಪಾಯಿಗಳನ್ನು ಕೇಂದ್ರ ಬೆಂಬಲ ಬೆಲೆಯನ್ನು ಕೊಟ್ಟು, ಇಲ್ಲಿ ನಮ್ಮ ರಾಜ್ಯದಲ್ಲಿ 400 ರೂಪಾಯಿಗಳನ್ನು ಕೊಟ್ಟರೆ ಯಾವ ರೈತ ತಾನೆ ಮುಂದೆ ಬರುತ್ತಾನೆ? ಈ ವ್ಯತ್ಯಾಸವನ್ನು ತಾವು ಗಮನಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಸಾರಿ ನನ್ನ ಭಾಷಣದಲ್ಲಿ ಮತ್ತೊಂದು ವಿಷಯವನ್ನು ನಾನು ಹೇಳಿದ್ದೆ, ಈ ಆವರ್ತ ನಿಧಿಯನ್ನು ನೂರು ಕೋಟಿ ಮಾಡಬೇಕು, ಏನೇನಾದರೂ ಪ್ರಾರಂಭ ಮಾಡುವುದಕ್ಕೆ ಆಗದಿದ್ದರೆ ನಾವೆಲ್ಲ ಶಾಸಕರು ಒಂದು ತಿಂಗಳ ಸಂಬಳ ಕೊಟ್ಟರೆ 20 ಲಕ್ಷ ರೂಪಾಯಿಗಳಾಗುತ್ತದೆ, ಆದರಿಂದಲೇ ಆವರ್ತ ನಿಧಿಯನ್ನು ಪ್ರಾರಂಭ ಮಾಡಿ, ಆವರ್ತ ನಿಧಿಯನ್ನು 100 ಕೋಟಿ ಮಾಡಬೇಕೆಂದು

ನಾವು ಒತ್ತಿ ಹೇಳಿದ್ದೆ. ಆದಾದ ಮೇಲೆ ಸಚಿವ ಸಂಪುಟದಲ್ಲಿ ಈ ಬಾಬಿಗೆ 100 ಕೋಟಿ ರೂಪಾಯಿಗಳನ್ನು ಕೊಡುತ್ತಾರೆನ್ನುವುದನ್ನು ನೋಡಿದ್ದೆ. ಆದರೆ ಈವತ್ತು ಬರಿ 75 ಕೋಟಿ ರೂಪಾಯಿಗಳಿಂದಲೆ ಪ್ರಾರಂಭ ಮಾಡೋಣವೆಂದು ಹೇಳುತ್ತಿದ್ದೀರಿ. ಸಚಿವ ಸಂಪುಟದ ತೀರ್ಮಾನವೂ, ಇಲ್ಲಿ ಹೇಳಿದ್ದೂ, 25 ಕೋಟಿ ರೂಪಾಯಿಗಳು ಬಿಟ್ಟು ಹೋಗಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಗೊತ್ತಿರುವಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿಬೇಳೆ ಬೆಲೆ ಸರ್ಕಾರಿ ಏಜೆನ್ಸಿ ಹೋದರೆ ಮಾರ್ಕೆಟ್‌ನಲ್ಲಿ ರೂಪಾಯಿ 50-100 ಜಾಸ್ತಿಯಾಗುತ್ತದೆ. ಇಲ್ಲದಿದ್ದರೆ ವ್ಯಾಪಾರಿಯವರು ರೈತರನ್ನು ಶೋಷಣೆ ಮಾಡುತ್ತಾರೆ. ಆ ಬಗ್ಗೆಯೂ ಗಮನಿಸಬೇಕು. ಆವರ್ತ ನಿಧಿ ಏನಿದೆ ಅದನ್ನು ನೂರು ಕೋಟಿಯನ್ನಾಗಿ ಮಾಡಬೇಕು. ಶ್ರೀಮತಿ ಇಂದಿರಾಗಾಂಧಿಯವರು ಹತ್ಯೆಗೀಡಾದಾಗ, ಪ್ರಧಾನ ಮಂತ್ರಿಯಾಗಿದ್ದಾಗ ಗಲಭೆಗೀಡಾದವರ ಪರಿಹಾರಕ್ಕೆ ಎಂದು 1300-1400 ಕೋಟಿ ರೂಪಾಯಿಗಳನ್ನು ಕೊಟ್ಟರು. ಡಾ: ರಾಜ್‌ಕುಮಾರ್‌ರವರ ಅಪಹರಣದಿಂದ ಸಾಕಷ್ಟು ನಷ್ಟವಾಗಿದೆ, ಕೇಂದ್ರ ಸರ್ಕಾರದವರನ್ನು ಕೇಳಿ ನೋಡೋಣ; ಇಂಡೆಂಟ್ ಹಾಕುವುದನ್ನು ಹಾಕಿ. ವಿರೋಧಪಕ್ಷದ ನಾಯಕರು ಹೇಳಿದಂತೆ ನಮಗೆಲ್ಲಾ ಬೆದರು ಬೊಂಬೆ ಎಲ್ಲಿದೆ ಅಂದರೆ ಅದು ಡಬ್ಲ್ಯೂ.ಟಿ.ಒ. ಈ ಡಬ್ಲ್ಯೂ.ಟಿ.ಒ. ಮಾರ್ಚ್‌ನಿಂದ ಬರುತ್ತದೆ. ಮಾಧ್ಯಮಗಳ ಮೂಲಕ ರೈತರನ್ನು ಎಚ್ಚರಿಸಬೇಕಾಗಿದೆ. ಒಂದು ವಾರ ವಿಶೇಷವಾಗಿ ಡಬ್ಲ್ಯೂ.ಟಿ.ಒ. ಬಗ್ಗೆ ಚರ್ಚೆ ಮಾಡಲು ಅಧಿವೇಶನ ಕರೆಯಬೇಕು, ಮಾನ್ಯ ಮಂತ್ರಿಗಳು ಸಮಾನ ಮನಸ್ಕ ಶಾಸಕರ ಸಭೆಯನ್ನು ಕರೆದು ಚರ್ಚೆ ಮಾಡುತ್ತೇನೆಂದು ಹೇಳಿದರು, ಅದಕ್ಕಿಂತ ಈ ರೀತಿ ಮಾಡಿದರೆ ಒಳ್ಳೆಯದು.

ಶ್ರೀ ಅಲ್ಲಂವೀರಭದ್ರಪ್ಪ (ತೋಟಗಾರಿಕೆ ಸಚಿವರು) :— ಈ ಅಧಿವೇಶನದಲ್ಲಿ ಬೆಲೆ ಕುಸಿತಕ್ಕೆ ಸಂಬಂಧಿಸಿದಂತೆ ಮಾತನಾಡುವಾಗ ಡಬ್ಲ್ಯೂ.ಟಿ.ಒ. ಬಗ್ಗೆ ಮಾತನಾಡಿ ಚರ್ಚೆ ಮಾಡೋಣ ಎಂದು ಇದ್ದೇವು, ಸಮಯವಿಲ್ಲದಿರುವುದರಿಂದ, ಅಧಿವೇಶನದ ನಂತರ ಚರ್ಚೆ ಮಾಡೋಣವೆಂದು ತೀರ್ಮಾನಿಸಿದ್ದರಿಂದ ಅಧಿವೇಶನವಾದ ನಂತರ ಒಂದು ಸಭೆಯನ್ನು ಕರೆಯಲಾಗುವುದು.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ :— ಡಬ್ಲ್ಯೂ.ಟಿ.ಒ. ವಿಷಯವನ್ನೇ ಇಟ್ಟುಕೊಂಡು ಎರಡು ಮೂರು ದಿವಸಗಳ ಕಾಲ ಚರ್ಚೆ ಮಾಡಿದರೆ ಒಳ್ಳೆಯದೆಂದು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದೇನೆ. ಮಾನ್ಯ ಕೃಷಿ ಮಂತ್ರಿಗಳು ಕೇಂದ್ರಕ್ಕೆ ಸರ್ವಪಕ್ಷಗಳ ನಿಯೋಗವನ್ನು ಕರೆದೊಯ್ಯಲಾಗುವುದೆಂದು ಹೇಳಿದರು, ನಿಜವಾಗಲೂ ಈ ಕ್ರಮ ಒಳ್ಳೆಯದು, ಕೇಂದ್ರ ಸರ್ಕಾರದ ಮೇಲೆ ನಾವು ಒತ್ತಡ ಹಾಕಬೇಕಾಗುತ್ತದೆ. ರಾಜ್ಯ ಸರ್ಕಾರಕ್ಕೆ ಹಣ ಮುದ್ರಣ ಮಾಡುವ ಶಕ್ತಿ ಇಲ್ಲ, ಅವರು ಕೊಡಬೇಕಾಗುತ್ತದೆ. ನಮ್ಮ ರೈತರ ಕಣ್ಣೀರು ಸುರಿಯುವುದು

5.20 ಪಿ.ಎಂ.

ಪೂರ್ತಿ ನಿಂತಿಲ್ಲ. ಆದರೆ ಕಡಿಮೆಗೊಳಿಸುವ ಪ್ರಯತ್ನವಾದರೂ ಈ ಹೇಳಿಕೆಯ ಮೂಲಕ ಆಗಿದೆ ಎನ್ನುವ ಮಾತನ್ನು ಹೇಳಿ ನಾನು ಕೇಳಿದ ಕೆಲವು ಅಂಶಗಳಿಗೆ ಉತ್ತರ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯದ ಬಗ್ಗೆ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕಡೆ ಸ್ವಲ್ಪ ಗಮನ ಹರಿಸಬೇಕು. ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಈ ಭಾಗಗಳ ಪ್ರಮುಖ ಬೆಳೆಯಾದಂಥ ಅಡಿಕೆಯ ಬಗ್ಗೆ ತಾವು ಗಮನ ಹರಿಸಿಲ್ಲ. ಏಕೆ ಹರಿಸಿಲ್ಲ ಎಂದು ನನಗೆ ಗೊತ್ತಿಲ್ಲ. ರಾಜ್ಯ ಸರ್ಕಾರ ರೈತರ ಬಗ್ಗೆ ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳಬಹುದು ಎನ್ನುವ ಬಗ್ಗೆ ನಾವು 2-3 ನೇರವಾದ ವಿನಂತಿಗಳನ್ನು ಮಾಡಿಕೊಂಡಿದ್ದೇವೆ. ಅಡಿಕೆಯ ಮೇಲೆ ಹಾಕಿರುವ ಶೇಕಡ 4ರ ಸೇಲ್ಸ್ ಟ್ಯಾಕ್ಸನ್ನು ತಾತ್ಕಾಲಿಕವಾಗಿ ಅಂದರೆ ಮಾರುಕಟ್ಟೆ ಸ್ಥಿರೀಕರಣವಾಗುವವರೆಗೆ ಸಸ್ಪೆಂಡನಲ್ಲಿ ಇಟ್ಟು ಸಹಕಾರ ಮಾಡಬೇಕು ಎನ್ನುವ ಒಂದು ವಿನಂತಿಯನ್ನು ಮಾಡಿದ್ದೇವೆ. ಇದನ್ನು ನಾವು ತುಂಬಾ ಸಮಯದವರೆಗೆ ಕೇಳುತ್ತಿಲ್ಲ, ಅಥವಾ ಅದನ್ನು ತೆಗೆಯಬೇಕು ಎಂದು ಕೇಳುತ್ತಿಲ್ಲ. ಅದೇ ರೀತಿ ಶೇಕಡ 1ರ ಟರ್ನ್‌ಓವರ್ ಟ್ಯಾಕ್ಸ್ ಮತ್ತು ಶೇಕಡ 1ರ ಎ.ಪಿ.ಎಂ.ಸಿ. ಸೆಸ್ ವಿಚಾರಗಳನ್ನು ತಮ್ಮ ವಿವೇಚನೆಗೇ ಬಿಡುತ್ತೇವೆ. ಏಕೆಂದರೆ ಇವತ್ತಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಮಧ್ಯವರ್ತಿಗಳ ವ್ಯವಹಾರದಿಂದಾಗಿಯೇ ಮಾರುಕಟ್ಟೆ ಹೆಚ್ಚು ಕಡಿಮೆಯಾಗಿದೆ ಎನ್ನುವುದು ಎಲ್ಲ ತಜ್ಞರ ಅಭಿಪ್ರಾಯ. ಅದಕ್ಕಾಗಿ, ತಾತ್ಕಾಲಿಕವಾಗಿ ಅಂದರೆ ಮೂರು ತಿಂಗಳ ಕಾಲ ತಾವು ಈ ಶೇಕಡ 4 ರಷ್ಟಿರುವ ಸೇಲ್ಸ್ ಟ್ಯಾಕ್ಸನ್ನು ವಿತ್‌ಹೆಲ್ಡ್ ಮಾಡಿದರೆ ಒಳ್ಳೆಯದಾಗಬಹುದು. ಆದಾದ ನಂತರ ಅದನ್ನು ನೀವು ಮತ್ತೆ ವಸೂಲು ಮಾಡುವಂಥ ಕೆಲಸವನ್ನು ಮಾಡಿ ಎನ್ನುವ ಒಂದು ಬೇಡಿಕೆಯನ್ನು ಇಟ್ಟಿದ್ದೇವು. ಅದೇ ರೀತಿ ಇಡೀ ಕರ್ನಾಟಕ ರಾಜ್ಯದ ಜನತೆಗೆ ಸಂಬಂಧಿಸಿದಂತೆ ಇನ್ನೊಂದು ಬೇಡಿಕೆಯನ್ನು ಇಟ್ಟಿದ್ದೇವು. ಕೋ-ಆಪರೇಟೀವ್ ಸೆಕ್ಟರ್‌ನಲ್ಲಿ ತೆಗೆದುಕೊಂಡ ಸಾಲಗಳಿಗೆ ಬಡ್ಡಿ ರಿಯಾಯಿತಿ ಅಥವಾ ಮತ್ತೊಂದು ರಿಯಾಯಿತಿಯನ್ನು ಕೊಡಬೇಕು ಎನ್ನುವುದು ನಮ್ಮ ಅಪೇಕ್ಷೆಯಲ್ಲ. ಆದರೆ ಕೃಷಿ ಪದಾರ್ಥಗಳ ಮೇಲೆ ಪಡೆದುಕೊಂಡಿರುವ ಈ ರೀತಿಯ ಸಾಲಗಳನ್ನು ದೀರ್ಘಾವಧಿ ಸಾಲವಾಗಿ ಪರಿವರ್ತನೆ ಮಾಡುವುದರ ಮೂಲಕ ರೈತರಿಗೆ ತಾತ್ಕಾಲಿಕವಾದಂಥ ಉಪಶಮನ ನೀಡುವಂಥ ಕೆಲಸವನ್ನು ಮಾಡಬೇಕು ಎನ್ನುವ ಬೇಡಿಕೆಯನ್ನಿಟ್ಟಿದ್ದೇವು. ತಾವು ಈ ಎರಡು ಕೆಲಸಗಳನ್ನು ಮಾಡಿದರೆ ಕರ್ನಾಟಕ ರಾಜ್ಯದಲ್ಲಿರುವಂಥ ರೈತರಿಗೆ ಒಂದು ರೀತಿಯ ರಿಲ್ಯಾಕ್ಸೇಷನ್ ಮತ್ತು ಸ್ವಲ್ಪ ಮೆಂಟಲ್ ಪೀಸ್ ಸಿಗುವಂಥ ಕೆಲಸವಾಗಬಹುದು. ಇವುಗಳ ಬಗ್ಗೆ ತಾವು ಗಮನ ಹರಿಸಬೇಕು. ನಾನು ನೇರವಾಗಿ

ಮುಖ್ಯಮಂತ್ರಿಗಳಲ್ಲಿ ಏಕೆ ಈ ರೀತಿ ವಿನಂತಿ ಮಾಡುತ್ತಿದ್ದೇನೆ ಎಂದರೆ, ಇದರಿಂದ ಸರ್ಕಾರದ ಖಜಾನೆಗೆ ಬರುವಂಥ ದುಡ್ಡು ಸ್ಥಗಿತವಾಗುತ್ತದೆ. ಅಭಿವೃದ್ಧಿಯಾಗಬೇಕು ಎಂದು ನಾವು ಒಂದು ಕಡೆ ಹೇಳುತ್ತೇವೆ, ಜೊತೆಯಲ್ಲಿ ತೆರಿಗೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಎಂದೂ ಹೇಳುತ್ತಿದ್ದೇವೆ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಮನಸ್ಸು ಮಾಡಿದರೆ ಈ ಸಮಸ್ಯೆಗಳು ಪರಿಹಾರವಾಗಬಹುದು. ಇದರ ಬಗ್ಗೆ ತಮ್ಮ ನಿಲುವು ಏನು ಎನ್ನುವುದನ್ನು ತಿಳಿಸಬೇಕು. ನೀವು ಒಮ್ಮೆ ಇಷ್ಟು ಸಹಕಾರ ನೀಡಿದರೆ ರೈತ ಚೇತರಿಸಿಕೊಳ್ಳುವಂಥ ವ್ಯವಸ್ಥೆಯಾಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಎ.ಪಿ.ಎಂ.ಸಿ.ಯಂಥ ಸಂಸ್ಥೆಯಿಂದ ಕ್ಯಾಂಪ್ಕೋದಂಥ ಕೋ-ಆಪರೇಟೀವ್ ಸೊಸೈಟಿಗಳಿಗೆ 100 ಕೋಟಿ ರೂಪಾಯಿ ನಿಬಡ್ಡಿ ಸಾಲವನ್ನು ಕೊಡಲು ಸಾಧ್ಯವಾದರೆ, ಅಡಿಕೆಗೆ ಬೆಂಬಲ ಬೆಲೆಯನ್ನು ಕೊಡಲು ಸಾಧ್ಯವಾಗಬಹುದು ಮತ್ತು ಇಳಿತವನ್ನು ತಡೆಗಟ್ಟಲೂ ಸಾಧ್ಯವಾಗಬಹುದು. ಅವರು ನಿಬಡ್ಡಿ ಸಾಲವನ್ನು ಕೇಳಿದ್ದಾರೆ. ಅವರಿಗೆ ನಿಬಡ್ಡಿ ಸಾಲ ಕೊಟ್ಟರೆ ಹೆಚ್ಚಿನ ಸ್ಥಳದಲ್ಲಿ ಬೆಂಬಲ ಬೆಲೆ ಕೊಡಲು ಸಾಧ್ಯವಾಗುತ್ತದೆ. ಇದನ್ನು ತಾವು ಪರಿಗಣಿಸಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಒಂದೇ ಒಂದು ಸ್ಪಷ್ಟೀಕರಣ ಕೇಳಲು ಬಯಸುವುದು ಏನೆಂದರೆ, ಈಗಾಗಲೇ ಸದಾನಂದಗೌಡರು ಅದನ್ನು ಪ್ರಸ್ತಾಪ ಮಾಡಿದ್ದಾರೆ. ಮಧ್ಯಾವಧಿ ಸಾಲವನ್ನು ದೀರ್ಘಾವಧಿ ಸಾಲವಾಗಿ ಪರಿವರ್ತಿಸಬೇಕು ಮತ್ತು ಅಲ್ಪಾವಧಿ ಸಾಲವನ್ನು ಮಧ್ಯಾವಧಿಯ ಸಾಲವನ್ನಾಗಿ ಮಾರ್ಪಡಿಸುವಂಥ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು. ಹಾಗಾದಾಗ ಮಾತ್ರ ರೈತರು ನ್ಯಾಯವಾಗಿ ಮಾರುಕಟ್ಟೆಗೆ ಬಂದು ತಮ್ಮ ಮಾಲನ್ನು ಮಾರುತ್ತಾರೆ. ಇಲ್ಲದಿದ್ದರೆ ಇನ್ನೆಲ್ಲೋ ಹೋಗಿ ಶ್ರೀಮಂತರಿಗೆ ಮಾರುವ ಸಾಧ್ಯತೆಗಳಿವೆ. ಏಕೆಂದರೆ ಅವರು ಸಹಕಾರ ಸಂಘಗಳಲ್ಲಿ ಸಾಲವನ್ನು ತೆಗೆದುಕೊಂಡಿದ್ದಾರೆ. ಅವರು ಮಾಲನ್ನು ತೆಗೆದುಕೊಂಡು ಸಹಕಾರ ಸಂಘಗಳಿಗೆ ಮಾರಲು ಹೋದರೆ, ಅದರಲ್ಲಿ ಸಾಲವನ್ನು ಮುರಿದುಕೊಳ್ಳುತ್ತಾರೆ ಎನ್ನುವ ಕಾರಣಕ್ಕಾಗಿ ಮತ್ತೆಲ್ಲೋ ಹೋಗಿ ಹಣವನ್ನು ತೆಗೆದುಕೊಳ್ಳಲು ಯೋಚನೆ ಮಾಡುತ್ತಾರೆ. ಆದ್ದರಿಂದ ಸಹಕಾರ ಸಂಘಗಳಲ್ಲಿ ಸಾಲ ತೆಗೆದುಕೊಂಡಿರುವವರಿಗೆ ಅದನ್ನು ಹೆಚ್ಚಿನ ಕಂತುಗಳಲ್ಲಿ ಕೊಡುವ ಅವಕಾಶವನ್ನು ಕಲ್ಪಿಸಿಕೊಟ್ಟರೆ ರೈತರಿಗೆ ತಕ್ಷಣ ರಿಲೀಫ್ ಸಿಗುತ್ತದೆ. ರೈತರಲ್ಲಿ ವಿಶ್ವಾಸ ತುಂಬಲು ಕೂಡಲೇ ಇದನ್ನು ಮಾಡಬೇಕು. 100 ಕೋಟಿ ರೂಪಾಯಿಗಳನಿಟ್ಟು ಖರೀದಿ ಕೇಂದ್ರಗಳನ್ನು ಮಾಡುವುದೆಲ್ಲಾ ನಂತರದ ವಿಷಯ. ಏಕೆಂದರೆ ಖರೀದಿ ಕೇಂದ್ರಗಳ ಕತೆ ಏನಾಗಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಮತ್ತು ಹೀಗೆ ಮುಂದುವರಿದಂಥ ಸಾಲಕ್ಕೆ ಬಡ್ಡಿ, ಚಕ್ರಬಡ್ಡಿ ಹಾಕುವಂಥಾದ್ದು ಆಗಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮತ್ತೊಂದು ವಿಷಯ, ಕ್ರಾಪ್ ಪ್ಯಾಟ್ರನ್‌ಗೆ ಏರಿಯಾ ರಿಸ್ಟ್ರಿಕ್ಷನ್ ಹಾಕುವ ಬಗ್ಗೆ ಸರ್ಕಾರ ವಿಶೇಷವಾದ ಗಮನ ಹರಿಸಬೇಕು. ಇಲ್ಲಿ ನಾನು ಒಂದು ಅಂಕಿ ಸಂಖ್ಯೆಯನ್ನು ಹೇಳುತ್ತೇನೆ. ಕಳೆದ 18 ವರ್ಷಗಳಲ್ಲಿ ಕರ್ನಾಟಕದಲ್ಲಿ 83 ಸಾವಿರ ಹೆಕ್ಟೇರ್‌ನಷ್ಟು ಜಮೀನಿನಲ್ಲಿ ಅಡಿಕೆ ಬೆಳೆಯುವುದು ಹೆಚ್ಚಾಗಿದೆ. ಕಳೆದ ಮೂರು ವರ್ಷಗಳಲ್ಲಿ 15 ಸಾವಿರ ಟನ್ ಅಡಿಕೆ ಉತ್ಪನ್ನ ಹೆಚ್ಚಾಗಿದೆ. ಹಾಗಾಗಿ ಯಾವುದಾದರೂ ರೀತಿಯಲ್ಲಿ ಕ್ರಾಪ್ ಪ್ಯಾಟ್ರನ್ ಬಗ್ಗೆ ನಾವು ರೈತರಲ್ಲಿ ಜಾಗೃತಿ ಮೂಡಿಸಬೇಕು. ಕಾಯಿದೆ ಮೂಲಕ ಇದನ್ನು ಮಾಡಬಹುದು ಎನ್ನುವುದಲ್ಲ. ಚಾನಲ್ ಏರಿಯಾಗಳಲ್ಲಿ ಅಡಿಕೆ ಬೆಳೆಯುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) :— ಅವರಿಗೆ ಲಾಭದಾಯಕವಾಗಿ ಕಂಡುಬಂದರೆ ಏಕೆ ಅವರು ಬೆಳೆಯಬಾರದು? ಲಾಭದಾಯಕವಾಗಿ ಕಂಡುಬಂದಾಗ ಅಡಿಕೆಯನ್ನು ತುಮಕೂರಿನಲ್ಲೂ ಬೆಳೆಯುತ್ತಾರೆ, ಹಾಸನದಲ್ಲಿ ಬೆಳೆಯುತ್ತಾರೆ, ಬೇರೆ ಕಡೆಗಳಲ್ಲೂ ಬೆಳೆಯುತ್ತಾರೆ. ಅದು ಬಿಟ್ಟು ನೀವು ಕೇವಲ ಅದನ್ನು ಮಲೆನಾಡು ಏರಿಯಾದಲ್ಲಿ ಬೆಳೆಯಬೇಕು, ಉತ್ತರ ಕನ್ನಡ, ಸಿರ್ಸಿ, ಸಿದ್ಧಾಪುರಗಳಲ್ಲೇ ಬೆಳೆಯಬೇಕು ಎಂದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಖರ್ಗೆಯವರ ಮಾತನ್ನು ನಾನು ಒಪ್ಪುತ್ತೇನೆ. ಹಿಂದೆ ಕಬ್ಬು ಸುಟ್ಟಿರುವ ದೃಶ್ಯವನ್ನು ನಾವು ನೋಡಿದ್ದೇವೆ. ನಾಳೆ ಅಡಿಕೆ ಸುಡುವ ದೃಶ್ಯವನ್ನು ಕಾಣಬೇಕಾದಂಥ ದುಸ್ಥಿತಿ ನಿರ್ಮಾಣ ಆಗಬಾರದು. ನಂತರ ಅವರ ಬಗ್ಗೆ ನಾವೇ ಇಲ್ಲಿ ಕಣ್ಣೀರು ಹಾಕಬೇಕಾಗುತ್ತದೆ. ಹಾಗಾಗಿ ಈ ಬಗ್ಗೆ ರೈತರಲ್ಲಿ ಜಾಗೃತಿ ಉಂಟು ಮಾಡುವಂಥ ಕೆಲಸ ಕೃಷಿ ಇಲಾಖೆಯಿಂದಲೋ, ತೋಟಗಾರಿಕೆ ಇಲಾಖೆಯಿಂದಲೋ ಅಥವಾ ಎ.ಪಿ.ಎಂ.ಸಿ.ಯಿಂದಲೋ ಆಗದೇ ಹೋದರೆ ನಾವು ದುರಂತಕ್ಕೆ ಈಡಾಗುತ್ತೇವೆ. ನಿಜ, ರೈತರಿಗೆ ಆಸೆ ಹುಟ್ಟುತ್ತದೆ. ಆದರೆ, ಹಿಂದೆ ನಾವು ನೋಡಿದಂತೆ ಆ ಆಸೆ ಏನಾಯಿತು? ಟಮೋಟೋ ಹಣ್ಣಿನ ಕತೆ ಏನಾಯಿತು ಎನ್ನುವುದನ್ನು ನಾವು ನೋಡಿದ್ದೇವೆ, ಉಳ್ಳಾಗಡ್ಡಿ, ಬಟಾಟೆ, ಮೆಣಸಿನ ಕತೆ ಏನಾಗುತ್ತಿದೆ ಎಂದು ನೋಡುತ್ತಿದ್ದೇವೆ. ಎಲ್ಲರೂ ಹಣಕ್ಕಾಗಿಯೇ ಮಾಡುವುದು. ಆದರೆ ಹಣ ಮಾಡಬೇಕು ಎಂದು ದಾರಿ ತಪ್ಪಿ ಹೋಗಿ ದುಸ್ಥಿತಿ ನಿರ್ಮಾಣವಾಗಬಾರದು ಎನ್ನುವುದಕ್ಕೆ ಏರಿಯಾ ರಿಸ್ಟ್ರಿಕ್ಷನ್ ಹಾಕಬೇಕು. ಇಲ್ಲದಿದ್ದರೆ ನಾವು ದುರಂತವನ್ನು ಅನುಭವಿಸುತ್ತೇವೆ. ಆ ದಿಕ್ಕಿನಲ್ಲಿ ಪ್ರಯತ್ನವಾಗಬೇಕು. ಈ ಎರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟು ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ಇವುಗಳಿಗೆ ಸರ್ಕಾರ ಉತ್ತರ ಹೇಳಬೇಕು ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು :— ಈಗ ಮಂತ್ರಿಗಳಿಂದ ಉತ್ತರ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ಅಡಿಕೆಯವರು ಕೇಳಿದರು, ನಾವು ಸುಮ್ಮನೆ ಕುಳಿತೆವು, ಭತ್ತದ ಬಗ್ಗೆಯೂ ಕೇಳಿದರು, ತೆಂಗಿನ ಬಗ್ಗೆಯೂ ಕೇಳಿದರು. ಈಗ ನಾವು ಕೇಳಬೇಕು ಎಂದಾಗ ನೀವು ಅವಕಾಶ ಕೊಡದೇ ಸರ್ಕಾರದಿಂದ ಉತ್ತರ ಎಂದು ಹೇಳುತ್ತಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ :— ಜೋಳದ ಬಗ್ಗೆ ನೀವು ಪ್ರಸ್ತಾಪ ಮಾಡಿದ್ದೀರಿ. ಅದರ ಬಗ್ಗೆ ಈಗ ನಾನು ಹೇಳುತ್ತೇನೆ.

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ :— ಜೋಳದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಿ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ಕನಿಷ್ಠ ನಾಲ್ಕೂವರೆ ಲಕ್ಷ ಹೆಕ್ಟೇರ್‌ನಲ್ಲಿ ಜೋಳವನ್ನು ಬೆಳೆಯುತ್ತಾರೆ. ಖರ್ಗೆಯವರಿಗೆ ನಮಗಿಂತಲೂ ಹೆಚ್ಚಾಗಿ ಗೊತ್ತಿದೆ. ತೊಗರಿ ಬೆಳೆ ಬಗ್ಗೆ ಬಂದಾಗ ತಾವು ಎಷ್ಟು ಪ್ರಸ್ತಾಪ ಮಾಡುತ್ತಿದ್ದಿರಿ ಎನ್ನುವುದು ನನಗೆ ಗೊತ್ತಿದೆ, ನಿಮಗೂ ಗೊತ್ತಿದೆ. ಆದರೆ ಜೋಳದ ಬೆಳೆ ಬಗ್ಗೆ ಬಂದಾಗ ನೀವು ಏಕೆ ಪ್ರಸ್ತಾಪ ಮಾಡುತ್ತಿಲ್ಲವೆನ್ನುವುದು ನನಗೆ ಗೊತ್ತಾಗುತ್ತಿಲ್ಲ. ಎಫ್.ಸಿ.ಐ.ನವರು 445 ರೂಪಾಯಿಗೆ ಜೋಳವನ್ನು ಕೊಡಿ ಎಂದು ಕೇಳುತ್ತಾರೆ.

ಅಧ್ಯಕ್ಷರು :— ಜೋಳದ ಬಗ್ಗೆ ಅವರು ಉತ್ತರ ಹೇಳುತ್ತಾರೆ ಬಿಡಿ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ಆಗಲೇ ಅವರು ಹೇಳಲಿಲ್ಲ. ಅದಕ್ಕಾಗಿ ಕಮ್ಮೆಂಟ್ ಮಾಡುತ್ತಿದ್ದೇನೆ.

ಅಧ್ಯಕ್ಷರು :— ಈಗ ಹೇಳುತ್ತಾರೆ ಬಿಡಿ. ಜೋಳದ ಬಗ್ಗೆ ಉತ್ತರ ಕೊಡುತ್ತೇನೆ ಎಂದು ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ನಮ್ಮವರು ಯಾರಾದರೂ ಮಾತನಾಡುವವರು ಇದ್ದರೆ ನಾನು ಸುಮ್ಮನೆ ಕುಳಿತು ಬಿಡುತ್ತಿದ್ದೆ. ನೀವು ಆಗಲೇ ನನಗೆ 10 ನಿಮಿಷ ಅವಕಾಶ ಕೊಟ್ಟಿದ್ದರೂ ನಾನು ಮೂರು ನಿಮಿಷದಲ್ಲಿ ಮುಗಿಸಿದೆ. ಮಾತನಾಡಬೇಕು ಎನ್ನುವ ಆಸೆಯನ್ನಿಟ್ಟುಕೊಂಡು ನಾವು ಮಾತನಾಡುವುದಿಲ್ಲ.

ಅಧ್ಯಕ್ಷರು :— ಆಗಲೇ ಮಾತನಾಡಿದ್ದನ್ನೇ ಪುನಃ ಈಗಲೂ ಹೇಳುತ್ತಿದ್ದೀರಿ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ಆಗ ನಾವು ಮಾತನಾಡಿದ್ದಕ್ಕೆ ಉತ್ತರವೇ ಬರಲಿಲ್ಲ. ಅದಕ್ಕಾಗಿ ಈಗ ಕೇಳುತ್ತಿದ್ದೇವೆ. ನಾವು ಸಜ್ಜೆ ಮತ್ತು ಮೆಕ್ಕೆಜೋಳಕ್ಕೆ

ಎಂದೂ ಒಂದೇ ಬೆಲೆಯನ್ನು ನಿಗದಿ ಮಾಡುವುದಿಲ್ಲ. ಅದಕ್ಕಾಗಿ ಜೋಳಕ್ಕೆ ವಿಜಾಪುರದಿಂದ ವಿಶೇಷ ಇನ್ಸೆಂಟಿವ್ ಕೊಟ್ಟು, 445 ರೂಪಾಯಿಗಳು ಇರುವುದನ್ನು 500 ಅಥವಾ 600 ರೂಪಾಯಿ ಮಾಡುವ ವಿಚಾರವನ್ನು ಹೇಳಿ ಎನ್ನುವ ಮಾತನ್ನು ಕೇಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕೃಷಿ ಸಚಿವರು) :— ಭತ್ತ, ಜೋಳ, ರಾಗಿ, ತೊಗರಿ ಮುಂತಾದ ನೋಟಿಫೈಡ್ ಕ್ರಾಪ್‌ಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಕೊಡುವ ಒಂದು ಪದ್ಧತಿ ಇದ್ದು, ಆ ಪದ್ಧತಿ ಪ್ರಕಾರವೇ ನಾವು ಮಾಡುತ್ತಿದ್ದೇವೆ. ಪಾರ್ಟಿಕ್ಯುಲರ್ ಕ್ರಾಪ್‌ಗಳಿಗೆ, ಅದು ತರಕಾರಿಗಳಿರಬಹುದು, ತೆಂಗು ಇರಬಹುದು ಅಥವಾ ಅಡಿಕೆ ಇರಬಹುದು, ಇವ್ಯಾವುದಕ್ಕೂ ಇವತ್ತು ಮಿನಿಮಂ ಸಪೋರ್ಟ್ ಪ್ರೈಸ್ ಆಪರೇಷನ್ಸ್ ಇಲ್ಲ. ತಮ್ಮ ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಂ ಬಗ್ಗೆ ಚಿಂತನೆಯಾಗಿ, ನಂತರ ನಿಮ್ಮ ಸರ್ಕಾರ ಮಾರ್ಕೆಟ್ ಇಂಟರ್‌ವೀನ್ ಕೂಡ ಮಾಡಿತ್ತು. ನೀವು ಕೊಡತಕ್ಕಂಥ ಸಲಹೆಯನ್ನಾಧರಿಸಿ 100 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಸರ್ಕಾರ ಮಾಡಿದ್ದು, ಆ ಬಗ್ಗೆ ಸರ್ಕಾರ ಆದೇಶ ಕೂಡ ಇವತ್ತು ಹೊರಬಿದ್ದಿದೆ. ಇಲ್ಲಿಯವರೆಗೆ ತೆಂಗಿನ ಕಾಯಿಗಳನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಕೊಳ್ಳತಕ್ಕಂಥ ಪರಿಸ್ಥಿತಿ ಸರ್ಕಾರಕ್ಕೆ ಬಂದಿರಲಿಲ್ಲ. ಇದರ ಬೆಲೆ ವರ್ಷವರ್ಷಕ್ಕೂ ಜಾಸ್ತಿಯಾಗುತ್ತಿತ್ತು. ಈ ವರ್ಷ ನಮ್ಮ ರಾಜ್ಯದಲ್ಲಿ ಬೆಳೆ ಸಮೃದ್ಧಿಯಾಗಿ ಬೆಳೆದಿರುವುದರಿಂದ ಉತ್ಪಾದನೆ ಜಾಸ್ತಿಯಾಗಿ ಬೆಲೆ ಕುಸಿತವಾಗಿರುವುದರಿಂದ, ಈ ವರ್ಷ ನಾವು ಕನಿಷ್ಠ ಬೆಂಬಲ ಬೆಲೆ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಬೇಡಿಕೆಗಿಂತ ಪೂರೈಕೆ ಜಾಸ್ತಿಯಾಗಿರುವುದರಿಂದ ಬೆಲೆ ಕುಸಿತಕ್ಕೊಳಗಾಗಿದೆ. ಮಾರ್ಕೆಟಿಂಗ್ ಇಂಟರ್‌ವೆನ್‌ಷನ್ ಸಲುವಾಗಿ 100 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಸೃಷ್ಟಿ ಮಾಡಲಿದ್ದು ಅದರಲ್ಲಿ ತೆಂಗಿನ ಬೆಳೆಯನ್ನು ಸಹ ಅಳವಡಿಸಬೇಕಾದರೆ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಸಹ ಪಡೆಯಲೇಬೇಕು. ಏಕೆಂದರೆ ಈ 100 ಕೋಟಿ ರೂಪಾಯಿ ಇಟ್ಟು ಇದ್ದರಲ್ಲಿ ಮಾರ್ಕೆಟಿಂಗ್ ಇಂಟರ್‌ವೆನ್‌ಷನ್ ಮಾಡುವುದಾದರೆ ಇದು ಒಂದು ದಿವಸಕ್ಕೆ ಸಹ ಸಾಲುವುದಿಲ್ಲ. ಇನ್ನು ತೊಗರಿ ಬೆಳೆ ಮಾರ್ಕೆಟ್‌ಗೆ ಬರುವುದಕ್ಕೆ ಪ್ರಾರಂಭವಾದಾಗ ಬೆಲೆ ಕುಸಿತವಾದರೆ ಅದಕ್ಕೆ ಬೆಂಬಲ ಬೆಲೆಯಾಗಿ ಎಷ್ಟು ಹಣ ತೊಡಗಿಸಬೇಕಾಗುತ್ತದೋ ಗೊತ್ತಿಲ್ಲ. ತೊಗರಿ ಬೆಳೆಯ ಬೆಲೆ ಕೂಡ ಕುಸಿತವಾಗುತ್ತದೆ ಎನ್ನುವ ಸೂಚನೆ ಇರುವುದರಿಂದ ಅದಕ್ಕೂ ಕೂಡ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಮಾರ್ಕೆಟಿಂಗ್ ಇಂಟರ್‌ವೆನ್‌ಷನ್ ಆದಾಗ ಕೇಂದ್ರ ಸರ್ಕಾರದಿಂದ 50 ಪರ್ಸೆಂಟ್ ಹಣವನ್ನು ಬೇರೆ ಮಾಡುತ್ತಾರೆ ಇನ್ನು 50 ಪರ್ಸೆಂಟ್ ಹಣವನ್ನು ರಾಜ್ಯ ಸರ್ಕಾರದಿಂದ ಇನ್ನು 50 ಪರ್ಸೆಂಟ್ ಹಣವನ್ನು ರಾಜ್ಯ ಸರ್ಕಾರದಿಂದ ಬೇರೆ ಮಾಡುತ್ತೇವೆ. ಆದ್ದರಿಂದ ಇದರ ಬಗ್ಗೆ ಒಪ್ಪಿಗೆ ಪಡೆಯುವುದಕ್ಕೆ ಕೇಂದ್ರ ಸರ್ಕಾರದ ಜೊತೆಗೆ ಚರ್ಚೆಯನ್ನು ಕೂಡ ನಾವು ಮಾಡುತ್ತಿದ್ದೇವೆ. ಎಂ.ಸಿ.ಹೆಚ್. ಕಾಟನ್‌ಗೆ ಕೂಡ 1625 ರೂಪಾಯಿಗಳ ಕನಿಷ್ಠ ಬೆಂಬಲ ಬೆಲೆ ಎಂದು ಫಿಕ್ಸ್ ಆಗಿದೆ. ಈ ತೆಂಗಿನ

ಕಾಯಿಗಳನ್ನು ಕೇರಳದ ಮಾದರಿಯಲ್ಲಿ ಸರ್ಕಾರ ಕೊಳ್ಳಬೇಕೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಕೇರಳದಲ್ಲಿ ತೆಂಗಿನ ಕಾಯಿಗಳನ್ನು ಕೊಂಡು ಅದನ್ನು ಒಡೆದು ಕೇವಲ 15 ದಿವಸಗಳಲ್ಲಿ ಕೊಬ್ಬರಿಯನ್ನಾಗಿ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಈ ತರಹದ ವ್ಯವಸ್ಥೆ ಇಲ್ಲ. ಕೊಬ್ಬರಿಯನ್ನು ಮಾಡಬೇಕಾದರೆ ನಾವು 9 ತಿಂಗಳು ತೆಂಗಿನಕಾಯಿಯನ್ನು ಇಡಲೇಬೇಕಾಗುತ್ತದೆ. ಆದ್ದರಿಂದ ಇದನ್ನು ಸಂಗ್ರಹಣೆ ಮಾಡುವುದು ಕಷ್ಟದ ಕೆಲಸವಾಗುತ್ತದೆ. ಇವೆಲ್ಲದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ನಾವು ಕೇಂದ್ರ ಸರ್ಕಾರದವರ ಒಪ್ಪಿಗೆಯನ್ನು ನಿರೀಕ್ಷಿಸಿದ್ದೇವೆ. ಒಪ್ಪಿಗೆ ಸಿಕ್ಕಿದ ಮೇಲೆ ಅದನ್ನು ಕಾರ್ಯಾಚರಣೆಗೆ ತರುವುದಕ್ಕೆ ಸಾಧ್ಯವಾಗುತ್ತದೆ. ತೆಂಗಿನ ಕಾಯಿಯ ಬೆಲೆ ಇಷ್ಟೊಂದು ಕಡಿಮೆ ಆಗುವುದಕ್ಕೆ ಬಹುಶಃ ಯಥೇಚ್ಛವಾಗಿ ಬರತಕ್ಕಂಥ ಎಣ್ಣೆಯ ಬೆಳೆಯ ಪರಿಣಾಮದ ಜೊತೆಗೆ ಸುಮಾರು 10 ಸಾವಿರ ಟನ್‌ನಷ್ಟು ತೆಂಗಿನಕಾಯಿ ಪೌಡರ್ ಹೊರಗಡೆಯಿಂದ ಆಮದು ಆಗುತ್ತಿದ್ದು ಅದರ ಮೇಲೆ ರಿಸ್ಟ್ರಿಕ್ಷನ್ ಹಾಕುವುದರ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ ಮತ್ತು ಇದಕ್ಕೆ ಕಟ್ಟಿಗೆ ನಾವು ಒತ್ತಾಯ ಮಾಡಬೇಕಾಗುತ್ತದೆ. ಇನ್ನು ಅಡಿಕೆಯಲ್ಲಿ ಚಾಲಿಡ್ ನಿರಾಯಿಟಿ ಎನ್ನುವಂಥದ್ದು ನಾಲ್ಕು ಸಾವಿರದಿಂದ 7 ಸಾವಿರದ ವರೆಗೆ ಇದೆ. ಮೊದಲು ಅದು ಹದಿಮೂರು ಸಾವಿರದಿಂದ 15 ಸಾವಿರದವರೆಗೆ ಕೂಡ ಇತ್ತು. ಬಹುಶಃ ಏನು ಆಮದು ಆಗಿ ಅಡಿಕೆ ಬಂದಿದೆ ಆ ಸ್ಟಾಕ್ ಡಿಸ್‌ಚಾರ್ಜ್ ಆದಮೇಲೆ ಬೆಲೆ ಇಂಪ್ರೂವ್ ಆಗಬಹುದು ಎನ್ನುವ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಇನ್ನು ಕ್ರಾಪಿಂಗ್ ಪ್ಯಾಟ್ರನ್ ಚೇಂಜ್ ಆಗಬೇಕು ಎನ್ನುವ ಮಾತನ್ನು ಹೇಳಿದರು. ಏನು ಬೆಳೆ ಬೆಳೆಯಬೇಕು, ಯಾವ ಬೆಳೆಯ ಅಗತ್ಯತೆ ಇದೆ ಉತ್ಪಾದನೆ ಎಷ್ಟಾಗಬೇಕು ಎನ್ನುವ ಮಾಹಿತಿಯನ್ನು ರೈತರಿಗೆ ಕೊಡತಕ್ಕಂಥ ವ್ಯವಸ್ಥೆ ಇಲ್ಲ. ಎಷ್ಟು ಬೆಳೆಯನ್ನು ಎಷ್ಟು ಎಕರೆಯಲ್ಲಿ ಬೆಳೆಯಬೇಕು ಯಾವ ಬೆಳೆಯನ್ನು ಬೆಳೆಯಬೇಕು ಎನ್ನುವುದರ ನಿಖರವಾದ ವರ್ತಮಾನವನ್ನು ರೈತರಿಗೆ ಅಡ್ವಾನ್ಸ್ ಆಗಿ ಕೊಡುವುದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡುತ್ತಿದೆ. ಅದರ ರೂಪುರೇಷೆಗಳು ಅಂತಿಮವಾಗಿ ಆದಮೇಲೆ ನಾನು ಈ ಸಭೆಯ ಗಮನಕ್ಕೆ ತರುತ್ತೇನೆ. ಇನ್ನು ಈ ಜೋಳ, ಸಜ್ಜೆ, ಮೆಕ್ಕೆಜೋಳ ಇವುಗಳನ್ನು ಬೆಂಬಲ ಬೆಲೆಯಲ್ಲಿ ಕೊಂಡುಕೊಳ್ಳುವುದು ಮತ್ತು ರೇಷನ್ ಅಂಗಡಿಗಳ ಮುಖಾಂತರ ಹಂಚುವ ಬಗ್ಗೆ ಈಗಾಗಲೇ ನಾವು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅದಕ್ಕೆ ಒಪ್ಪಿಗೆಯನ್ನು ಕೂಡ ಕೊಡುವವರಿದ್ದಾರೆ. ನಾವು ಖಂಡಿತವಾಗಿ ಜೋಳವನ್ನು ಕೊಳ್ಳತಕ್ಕಂಥದ್ದನ್ನು ಮಾಡುತ್ತೇವೆ. ಆದರೆ ಈಗ ಏನು ಬೆಂಬಲ ಬೆಲೆ ಫಿಕ್ಸ್ ಆಗಿದೆ ಅದಕ್ಕೆ ಏರಿಸಿ ಕೊಡುವುದಕ್ಕೆ ಕಷ್ಟವಾಗುತ್ತದೆ. ಜೋಳಕ್ಕೆ ಕನಿಷ್ಠ ಬೆಂಬಲ ಬೆಲೆಯಾಗಿ 800 ರೂಪಾಯಿಗಳನ್ನು ಕೊಟ್ಟರೂ ಕೂಡ ಸಾಲದು. ಆದರೂ ಕೂಡ ಈಗ ಕೊಡುವುದಕ್ಕೆ ಒಪ್ಪಿರುವ ಕನಿಷ್ಠ ಬೆಂಬಲ ಬೆಲೆಗಿಂತ ಜಾಸ್ತಿ ಕೊಡಬೇಕು ಎನ್ನುವ ಮನವಿಯನ್ನು ಕೂಡ ಕೇಂದ್ರ ಸರ್ಕಾರಕ್ಕೆ ಮಾಡಬೇಕಾಗಿದೆ. ಆದರೆ ನಾವು ಏನು ಮಾಡಬೇಕಾದರೂ ಅದಕ್ಕೆ ಕೇಂದ್ರ ಸರ್ಕಾರದ

ಒಳ್ಳಗೆ ಬೇಕಾಗುತ್ತದೆ. ಇದನ್ನೆಲ್ಲ, ನಾನು ಏಕೆ ಹೇಳುತ್ತಿದ್ದೇನೆಂದರೆ, ಇದು ಅಗ್ರಿಕಲ್ಚರ್‌ಗೆ ಸಂಬಂಧಪಟ್ಟಿದ್ದಾಗಿದ್ದರೂ ಫುಡ್ ಸೆಕ್ಯುರಿಟಿ ಹೆಸರಿನಲ್ಲಿ, ಇದು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಕಂಟ್ರೋಲ್‌ನಲ್ಲಿದೆ. ಆಹಾರದ ಉತ್ಪಾದನೆಯಿಂದ ಹಿಡಿದು ಮಾರುಕಟ್ಟೆವರೆಗಿನ ನಿಯಂತ್ರಣ ಕೇಂದ್ರಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಕ್ಕೆ ನಮಗೆ ಕಷ್ಟವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಈ ಮಾತನ್ನು ಹೇಳಿದ್ದೇನೆ.

ಶ್ರೀ ಜಗದೀಶ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಶ್ರೀ ಜಯಚಂದ್ರ ಅವರು ಎಲ್ಲದಕ್ಕೂ ಕೇಂದ್ರ ಸರ್ಕಾರಕ್ಕೆ ಬೆಟ್ಟು ಮಾಡಿ ತೋರಿಸುತ್ತಾರೆ. ರಾಜ್ಯ ಸರ್ಕಾರದ ಕಡೆಯಿಂದ ಇವರು ಏನು ಮಾಡಿದ್ದಾರೆ ಎನ್ನುವುದನ್ನು ಹೇಳಬೇಕು.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ 75 ಕೋಟಿ ರೂಪಾಯಿ ಕೊಡುತ್ತಿದ್ದಾರೆ. ಅದರಲ್ಲಿ, ಇನ್ಸೆಂಟಿವ್ ಆಗಿ ಕೊಡಿ ಎಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಜೋಳದ ಕಾಸ್ಟ್ ಆಫ್ ಕಲ್ಟಿವೇಷನ್ ಎಷ್ಟಾಗುತ್ತದೆ ಎನ್ನುವುದು ತಮಗೂ ಗೊತ್ತಾಗಿರುತ್ತದೆ. ಸ್ವಲ್ಪ ಹೆಚ್ಚಿಗೆ ಬೆಂಬಲ ಬೆಲೆಯನ್ನು ಮಾಡಿ ಎನ್ನುವುದು ನನ್ನ ವಿನಂತಿ.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಮಾರ್ಕೆಟಿಂಗ್ ಇಂಟರ್‌ವೆನ್‌ಷನ್ ಸಲುವಾಗಿ ಆವರ್ತ ನಿಧಿಯನ್ನು ಮಾಡಿದಾಗ ಅಗತ್ಯತೆ ಏನು ಎನ್ನುವುದನ್ನು ಪರಿಶೀಲನೆ ಮಾಡಿ ನಾವು ತೀರ್ಮಾನ ಮಾಡಬೇಕಾಗುತ್ತದೆ. ಆವರ್ತ ನಿಧಿಯಲ್ಲಿ ಜೋಳ ಕೂಡ ಸೇರಬಾರದೆಂದೇನೂ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ (ಸನ್ಮಾನ್ಯ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ. ಬೆಲೆಗಳು ಇಳಿದಿವೆ ಅದಕ್ಕೆ ಪರಿಹಾರ ಹುಡುಕಬೇಕು. ರಾಜ್ಯ ಸರ್ಕಾರ ಒಂದರಿಂದಲೇ ಇದಕ್ಕೆ ಪರಿಹಾರ ಕಂಡುಹಿಡಿಯತಕ್ಕಂಥ ಶಕ್ತಿ ಇಲ್ಲ. ಅದಕ್ಕೆ ನಾವು ಕೇಂದ್ರ, ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ, ಅವರ ಮನವೊಲಿಸಿ ಒಂದು ಪರಿಹಾರ ಕಂಡುಹಿಡಿಯುವುದಕ್ಕೆ ನಾವು, ಅವರೆಲ್ಲ 28ನೇ ತಾರೀಖು ದೆಹಲಿಗೆ ಹೋಗುತ್ತಿದ್ದೇವೆ. ಆ ಸಂದರ್ಭದಲ್ಲಿ ಶ್ರೀ ಶಿವಾನಂದ ಪಾಟೀಲರೂ ಕೂಡ ಬರಲಿ. ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡೋಣ. ಇವತ್ತು ಅಧಿವೇಶನದ ಕೊನೆಯ ದಿವಸ. ಸರ್ಕಾರದ 4 ಬಿಲ್‌ಗಳು-ಡಿಬೇಟ್ ಆಗದೆ ಹಾಗೆಯೇ ಉಳಿದಿವೆ. ಡಿಬೇಟಿಗೆ ಎಷ್ಟು ಕಾಲ ಮಿತಿಯನ್ನು ತಾವು ನಿಗದಿ ಮಾಡಿದ್ದೀರಿ ಎನ್ನುವುದನ್ನು ನಾನು ನೆನಪಿಸಬೇಕಾಗಿಲ್ಲ. ಅವಶ್ಯಕತೆಯಿದೆ ಎನ್ನುವ ದೃಷ್ಟಿಯಿಂದ ಇವತ್ತು ಸಾಕಷ್ಟು ಸುದೀರ್ಘವಾಗಿ ಸುಮಾರು 5 ಗಂಟೆ ಕಾಲ

ಚರ್ಚೆಯಾಗಿದೆ. ಈಗಾಗಲೇ ಸಮಯ ಸಾಯಂಕಾಲ 5-30 ಗಂಟೆಯಾಗಿದೆ. ಇನ್ನೂ ನಾಲ್ಕು ಬಿಲ್ ಅಲ್ಲಿ ಪಾಸಾಗಿ ವಿಧಾನಪರಿಷತ್ತಿಗೆ ಹೋಗಬೇಕಾಗಿದೆ. ಆದ್ದರಿಂದ ದಯಮಾಡಿ ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯ ಮಾಡಿ. ನಾವೆಲ್ಲ 28ನೇ ತಾರೀಖು ದೆಹಲಿಗೆ ಹೋಗುತ್ತೇವೆ. ಕೇಂದ್ರ ಸರ್ಕಾರದ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ನೆರವನ್ನು ತೆಗೆದುಕೊಳ್ಳುವ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಆದರೆ ಮಾನ್ಯ ಜಯಚಂದ್ರ ಅವರು ಇಲ್ಲಿ ಕೊಟ್ಟಂಥ ರಿಪೋರ್ಟ್ ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ.

ಶ್ರೀ ಶಿವಾನಂದ ಪಾಟೀಲರು :— ಜೋಳದ ಬಗ್ಗೆ ಹೇಳಿದರು ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ಮೆಕ್ಕೆಜೋಳದ ಖರೀದಿ ಮಾಡುವುದಕ್ಕೆ 22 ಕೇಂದ್ರಗಳನ್ನು ಮಾಡಿದ್ದೇವೆಂದು ಹೇಳಿದಿರಿ. ನೀವು ಕೇಂದ್ರದಿಂದ ಪರ್ಮಿಷನ್ ತೆಗೆದುಕೊಂಡಿರುವುದನ್ನು ಮತ್ತು ಖರೀದಿ ಕೇಂದ್ರ ಸ್ಥಾಪನೆ ಮಾಡುವುದಕ್ಕೆ ನೀವು ಇಲ್ಲಿಯವರೆಗೆ ಡಿ.ಸಿ. ಯವರಿಗೆ ಹೇಳಲಿಲ್ಲ. ಒಂದೊಂದು ಏರಿಯಾದಲ್ಲಿ 40 ಸಾವಿರ ಕ್ವಿಂಟಲ್‌ನಷ್ಟು ಮೆಕ್ಕೆಜೋಳ ಬಂದು ಬಿದ್ದಿದೆ. ಸರ್ಕಾರದಿಂದ ಖರೀದಿ ಮಾಡಿರುವುದು ಕೇವಲ 1 ಲಕ್ಷದ 16 ಸಾವಿರ ಕ್ವಿಂಟಾಲ್.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಡಿ.ಸಿ.ಯವರಿಗೆ ಖರೀದಿ ಕೇಂದ್ರ ಮಾಡುವುದಕ್ಕೆ ಸೂಚನೆ ಕೊಟ್ಟಿಲ್ಲವೆಂದು ಹೇಳಿದರು. ಸೂಚನೆಯನ್ನು ನಾವು ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :— ಇನ್ನು ಭತ್ತವನ್ನು ಖರೀದಿ ಮಾಡುವ 17 ಕೇಂದ್ರಗಳನ್ನು ತೆರೆದಿದ್ದೇವೆಂದು ಹೇಳಿದರು. ಆದರೆ ಏನೂ ಮಾಡಲಿಲ್ಲ. ರೈತರ ಹಿತಾಸಕ್ತಿಯ ಸಲುವಾಗಿ ಎಲ್ಲಾ ರೀತಿಯ ಸಹಕಾರವನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ. ಕೇಂದ್ರ ಸರ್ಕಾರಕ್ಕೆ ಹೋಗಿ ಎಲ್ಲಾ ಪ್ರಯತ್ನವನ್ನು ಮಾಡೋಣ. ಆದರೆ ಎಲ್ಲದಕ್ಕೂ ಕೇಂದ್ರ ಸರ್ಕಾರದ ಮೇಲೆ ಬೆಟ್ಟು ಮಾಡಿ ತೋರಿಸುವುದು ಸರಿಯಲ್ಲ. ರಾಜ್ಯ ಸರ್ಕಾರದಿಂದ ನೀವು ಏನು ಮಾಡಿದ್ದೀರಿ? ರೈತರು ಸಂಕಷ್ಟದಲ್ಲಿ ಸಿಲುಕಿರುವ ಸಮಯದಲ್ಲಿ ಅವರ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವಂಥದ್ದು ಆಗಬೇಕಾಗಿತ್ತು. ಅದನ್ನು ಮಾಡಲಿಲ್ಲ. ನಾವು ಇದರ ಬಗ್ಗೆ 15 ದಿವಸಗಳ ಹಿಂದೆ ಡಿಸ್ಕಶನ್ ಮಾಡಿದರೂ ಕೂಡ ಸರ್ಕಾರದ ಕಡೆಯಿಂದ ಏನೂ ಮಾಡಿಲ್ಲ. ಇವತ್ತು ರೈತರ ಬಗ್ಗೆ ಸರ್ಕಾರ ನಿರ್ಲಕ್ಷ್ಯವಹಿಸಿದೆ. ತಕ್ಷಣಕ್ಕೆ ಖರೀದಿ ಕೇಂದ್ರಗಳನ್ನು ತೆರೆಯುವಂಥದ್ದು ಆಗಬೇಕಾಗಿತ್ತು. ಸರ್ಕಾರ ಮಾಡಿಲ್ಲ ಅದರಲ್ಲಿ ವಿಫಲರಾಗಿದ್ದಾರೆ. ಅದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಮಾನ್ಯ ಸದಸ್ಯರುಗಳೆಲ್ಲ ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :— 100 ಕೋಟಿ ರೂಪಾಯಿಯ ಆವರ್ತ ನಿಧಿ ರೂಪದಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ಕೊಟ್ಟಿರತಕ್ಕಂಥದ್ದು, ಇದು ಮೊದಲನೆ ರಾಜ್ಯವೆಂದು ನಾವು ಅಂದುಕೊಂಡಿದ್ದೇವೆ. ಇದರ ಜೊತೆಗೆ ರೈತರಿಗೆ ಕೊಡತಕ್ಕಂಥ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವುದರ ಜೊತೆಗೆ ಕಷ್ಟದಲ್ಲಿ ಸಿಕ್ಕಿರುವಂಥ ರೈತರ ಸಾಲದ ಬಡ್ಡಿ ಮನ್ನಾ ಮಾಡಬೇಕು. ಹಿಂದೆ ನಮ್ಮ ಸರ್ಕಾರ ಆಡಳಿತದಲ್ಲಿ ಇದ್ದಾಗ ಮಾಡಿದ್ದೇವೆ. ಆದ್ದರಿಂದ, ಈ ಬೆಲೆ ಕುಸಿತದಿಂದ ಆಗಿರುವ ನಷ್ಟವನ್ನು ಸರಿದೂಗಿಸಲು ಬೆಂಬಲ ಬೆಲೆ ಕೊಡುವುದರ ಜೊತೆಗೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕು ಹಾಗೂ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಮತ್ತು ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವಂಥ ಕಾರ್ಯ ರಾಜ್ಯ ಸರ್ಕಾರದಿಂದ ಆಗಬೇಕು. ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರದ ಮೇಲೆ ಹಾಕುವುದಲ್ಲ. ಕನಿಷ್ಠ ಬೆಲೆಯನ್ನು ಕೊಡತಕ್ಕಂಥ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ತೆಗೆದುಕೊಂಡು ಖರೀದಿಗೆಂದು 450 ರೂಪಾಯಿಯನ್ನು ಕೊಡುತ್ತೇವೆಂದು ಹೇಳಿದಿರಿ. ಅದಕ್ಕಿಂತ ಸ್ವಲ್ಪ ಹೆಚ್ಚಿನ ಹಣವನ್ನು ಒದಗಿಸುವ ಕಾರ್ಯ ರಾಜ್ಯ ಸರ್ಕಾರದಿಂದ ಆಗಬೇಕೆಂದು ಹೇಳುತ್ತೇನೆ. ಕನಿಷ್ಠ ಬೆಲೆ ವಿಚಾರವಾಗಿ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಲು ಹೋಗುತ್ತೇವೆಂದು ಹೇಳಿದಿರಿ. ನಿಮ್ಮ ಜೊತೆಗೆ ನಮ್ಮ ರಾಜ್ಯದಿಂದ ಆರಿಸಿ ಹೋದಂಥ ಎಂ.ಪಿ.ಗಳನ್ನು ಕೂಡ ಸೇರಿಸಿಕೊಂಡು ದೆಹಲಿಗೆ ಹೋಗಿ ಕೇಂದ್ರ ಸರ್ಕಾರಕ್ಕೆ, ಮಾನ್ಯ ಪ್ರಧಾನಮಂತ್ರಿಗಳಿಗೆ ಒತ್ತಾಯ ಮಾಡುವಂಥ ಕಾರ್ಯ ಆಗಬೇಕು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೆ, ನುಸಿ ರೋಗದ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಶ್ರೀ ಬಚ್ಚೇಗೌಡರು ಹೇಳಿರುವ ವಿಚಾರಕ್ಕೆ ನಾನು ಸ್ಪಷ್ಟವಾಗಿ ಇಲ್ಲಿ ಭರವಸೆ ಕೊಡುವುದಕ್ಕೆ ಕಷ್ಟವಾಗುತ್ತದೆ. ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕಾದರೆ ಕ್ರಾಪ್ ಕಟ್ಟಿಂಗ್ ಆದಮೇಲೆ ಬೆಳೆ ಜಾಸ್ತಿ ಬಂದಿದೆಯೋ ಅಥವಾ ಕಡಿಮೆ ಬಂದಿದೆಯೋ ಎಂಬುದರ ರಿಸಲ್ಟ್ ಬರಬೇಕಾಗುತ್ತದೆ. ಬಂದ ಮೇಲೆ ನೋಡೋಣ.

ಶ್ರೀ ಬಿ.ಹೆಚ್. ಬನ್ನಿಕೋಡ್ :— ಬೆಳೆ ಹೆಚ್ಚಿಗೆ ಬಂದಾಗ ಸಾಲದ ಅವಧಿಯನ್ನು ಪರಿವರ್ತನೆ ಮಾಡುವುದಲ್ಲ. ಬರಗಾಲ ಬಂದಾಗ ಸಾಲದ ಅವಧಿಯನ್ನು ಪರಿವರ್ತನೆ ಮಾಡುವುದಕ್ಕೆ ಅವಕಾಶ ಬರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ :— ನುಸಿ ರೋಗದ ಬಗ್ಗೆ ಸರ್ಕಾರದ ಕಡೆಯಿಂದ ಈಗಾಗಲೇ ಕಾರ್ಯಾಚರಣೆ ನಡೆಯುತ್ತಿದೆ. ಮೊನೊಕ್ರೊಟೋಫಾಸ್ ಔಷಧಿ ಸರಿಯಾಗಿ ಪೂರೈಕೆಯಾಗುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಕ್ಲೋರೊಪೈರಿಫಾಸ್ ಎನ್ನುವ ಹೊಸ ಔಷಧಿಯನ್ನು ಕೊಡತಕ್ಕಂಥದ್ದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ.

7. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ 2000.

ಪರ್ಯಾಲೋಚನಾ ಪ್ರಸ್ತಾವ

+ ಡಾ: ಬಿ. ಪರಮೇಶ್ವರ್ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಡಾ: ಬಿ. ಪರಮೇಶ್ವರ್ (ಉನ್ನತ ಶಿಕ್ಷಣ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಪರ್ಯಾಲೋಚನಾ ಪ್ರಸ್ತಾವದ ಮೂಲಕ ಈ ಮಸೂದೆಯನ್ನು ಸದನದ ಮುಂದೆ ತರುವುದಕ್ಕೆ ಕೊನೆಗೂ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯನ್ನು ತರಬೇಕೆಂದು ಈ ಮಸೂದೆಯನ್ನು ಏನು ಮಂಡಿಸಿದ್ದೇನೆ ಇದಕ್ಕೆ ಬಹಳ ಪ್ರೋತ್ಸಾಹ ಸಿಕ್ಕಿದೆ. ಈ ಸದನದಲ್ಲಿ ಮಂಗಳವಾರದಿಂದ ಇಲ್ಲಿಯವರೆಗೆ ಆದ ಚರ್ಚೆಯಲ್ಲಿ ಮಾನ್ಯ ಸದಸ್ಯರು ಯಾವ ಯಾವ ರೀತಿಯಲ್ಲಿ ಭಾಗವಹಿಸಿದರು, ಯಾವ ಯಾವ ವಿಷಯಗಳನ್ನು ಎಷ್ಟು ಹೊತ್ತು ಮಾತನಾಡಿದರು, ಯಾವ ರೀತಿ ನಡೆದುಕೊಂಡರು ಎನ್ನುವುದನ್ನು ನೋಡಿದರೆ ಬಹುಶಃ ಶಿಕ್ಷಣಕ್ಕೆ ಖಂಡಿತವಾಗಿ ಬದಲಾವಣೆ ತರತಕ್ಕಂಥದ್ದು ಅತ್ಯಾವಶ್ಯಕ ಎನ್ನುವ ನನ್ನ ವಾದಕ್ಕೆ ಶಕ್ತಿ ಇದೆ. ನಮ್ಮ ಸಮಾಜಕ್ಕೆ ಉನ್ನತ ಶಿಕ್ಷಣ ಏಕೆ ಬೇಕಾಗಿದೆ ಎನ್ನುವ ವಿಷಯದಲ್ಲಿ ಬಹಳ ಪ್ರಾಮುಖ್ಯವಾದ ನಾಲ್ಕು ಉದ್ದೇಶಗಳನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ.

To move into new frontiers of knowledge by fundemental and applied research while aiming at obsorbing the changing nature of society in its various aspects to continuously pass on the tradition through knowledge, skills and values to upcoming generations: